ಉಪನ್ಯಾಸಗ್ರಂಥಮಾಲೆ

೧೭

ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ

ಬಿ. ಎಚ್. ಶ್ರೀಧರ, ಎಂ. ಎ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
ಅಕ್ಟೋಬರ, ೧೯೫೯

ಉಪನ್ಯಾಸ ಗ್ರಂಥಮಾಲೆ

೧. ಭವಭೂತಿ

ಡಾ. ಕೆ. ಕೃಷ್ಣಮೂರ್ತಿ, ಎಮ್. ಎ., ಬಿ. ಟಿ., ಪಿಎಚ್. ಡಿ.

೨. ಮನೋರೋಗಗಳು

ಪ್ರೊ. ಎನ್. ಆರ್. ಕುಲಕರ್ಣಿ, ಎಮ್. ಎ., ಎಲ್‌ಎಲ್. ಬಿ.

೩. ಪ್ರಥಮ ಪಂಚವಾರ್ಷಿಕ ಯೋಜನೆ ಹಾಗೂ ಒಕ್ಕಲುತನ

ಡಾ. ಎನ್. ಪಿ. ಪಾಟೀಲ, ಬಿ. ಎಸ್‌ಸಿ. (ಅಗ್ರಿ.), ಪಿಎಚ್. ಡಿ.

೪. ಗಾದೆಗಳು

ಪ್ರೊ. ಎ. ಕೆ. ರಾಮಾನುಜನ್, ಎಂ. ಎ.

೫. ಭಾರತದಲ್ಲಿ ಜಾತಿಪದ್ಧತಿ

ಡಾ. ವಿಕ್ಟರ ಎಸ್. ಡಿಸೋಜಾ, ಎಂ. ಎ., ಪಿಎಚ್. ಡಿ.

೬. ಕೀಟಕ ಪಿಡುಗುಗಳ ಸಮೀಕ್ಷಣೆ

ಪ್ರೊ. ಎಸ್. ಎಸ್. ಕಟಗಿಹಳ್ಳಿಮಠ, ಎಂ. ಎಸ್‌ಸಿ.

೭. ರಾಜಕೀಯ ಪಕ್ಷಗಳು

ಪ್ರೊ. ಎನ್. ರಾಜಗೋಪಾಲರಾವ್, ಎಂ. ಎ.

೮. ಸ್ವಾದಿ ಅರಸುಮನೆತನ

ಪ್ರೊ. ಸ. ಸ. ಮಾಳವಾಡ, ಎಂ. ಎ.

೯. ಮಕ್ಕಳ ಶಿಕ್ಷಣ

ಡಾ. ಡಿ. ಎಸ್. ಕರ್ಕಿ, ಎಂ. ಎ., ಪಿಎಚ್. ಡಿ.

Purchased for the second time
B.H. Sreedhara 8/4/60

ಉಪನ್ಯಾಸಗ್ರಂಥಮಾಲೆ

೧೭

ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ

ಬಿ. ಎಚ್. ಶ್ರೀಧರ, ಎಂ. ಎ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಸಪ್ಟೆಂಬರ, ೧೯೫೯

ಸುಲಭ ಸಾಹಿತ್ಯ ಪ್ರಕಾಶನ
ಪ್ರಕಾಶಕರು ಪುಸ್ತಕ ವ್ಯಾಪಾರಿಗಳು
ಕುಮಟಾ. (ಉ. ಕ.)

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ,

ಎಂ. ಎ., ಎಲ್‌ಎಲ್. ಬಿ.

ರಜಿಸ್ಟ್ರಾರ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮೊದಲನೆಯ ಮುದ್ರಣ

೨,೦೦೦ ಪ್ರತಿಗಳು

ಬೆಲೆ :

೭೫ ನಯೆ ಪೈಸೆ

ಮುದ್ರಕರು :

ಆರ್. ಟಿ. ಬಿಳಗಿ

ಲಿಂಗರಾಜ ಆರ್ಟ ಪ್ರೆಸ್, ಧಾರವಾಡ

ಮಾಲೆಯ ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಸಮಿತಿಯು ಸಿದ್ಧಪಡಿಸಿದ ಯೋಜನೆಯ ಮೇರೆಗೆ ಮೊದಲನೆಯ ಉಪನ್ಯಾಸಮಾಲೆ ೧೯೫೭ನೆಯ ನವಂಬರ್ ತಿಂಗಳಲ್ಲಿ ಗದಗಿನಲ್ಲಿ ನೆರವೇರಿತು. ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯಕ್ಕೆ ತಿಳಿಯುವ ಶೈಲಿಯಲ್ಲಿ ಉಪನ್ಯಾಸಗಳನ್ನು ಕನ್ನಡದಲ್ಲಿ ಕೊಟ್ಟರು. ವಿಶ್ವವಿದ್ಯಾಲಯದ ಜ್ಞಾನಭಂಡಾರವನ್ನು ಕಾಲೇಜು ತರಗತಿಗಳಿಗೆ ಮೀಸಲಾಗಿ ಇಡದೆ

ಅದರ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ ಪ್ರೋತ್ಸಾಹವೂ ದೊರೆತುವು. ಅಂದು ಗದಗಿನಲ್ಲಿ ಪ್ರಾರಂಭಿಸಿದ ಉಪನ್ಯಾಸಮಾಲೆ ಈಚೆಗೆ ಉತ್ತರ ಕರ್ನಾಟಕದ ಹಲವು ಊರುಗಳಲ್ಲಿ ನಡೆದಿದೆ, ಮುಂದೆಯೂ ನಡೆಯಲಿದೆ. ಇದು ನಮ್ಮ ವಿಶ್ವವಿದ್ಯಾಲಯದ ಪ್ರತಿ ತಿಂಗಳ ಕಾರ್ಯಕ್ರಮವಾಗಿ ಪರಿಣಮಿಸಿದೆ.

ಇಂಥ ಉಪನ್ಯಾಸಗಳನ್ನು ವಿದ್ವಾಂಸರ ಮುಖದಿಂದ ಪ್ರತ್ಯಕ್ಷವಾಗಿ ಕೇಳುವ ಜನರಿಗೆ ಆಸಕ್ತಿಯೂ ತಿಳಿವಳಿಕೆಯೂ ಹೆಚ್ಚುವುದು ಸಹಜ. ಆದರೆ ಉಪನ್ಯಾಸದ ಮಾತು ಕೇಳಿದ ಕಿವಿಯಲ್ಲೇ ಕರಗಿ ಹೋಗುತ್ತದೆ; ಕೆಲವು ಕಾಲ ಕಳೆದ ಬಳಿಕ ಉಪನ್ಯಾಸದ ವಿವರಗಳನ್ನು ನೆನಪಿಗೆ ತಂದುಕೊಳ್ಳುವುದು ಸಭೆಯಲ್ಲಿದ್ದವರಿಗೇ ಅಶಕ್ಯವಾಗುತ್ತದೆ. ಬೇರೆ ಊರಿನವರಂತೂ ಇವುಗಳ ಲಾಭವನ್ನು ಪಡೆಯುವ ಹಾಗೆಯೇ ಇಲ್ಲ. ಆದಕಾರಣ ಉಪನ್ಯಾಸಗಳನ್ನು ಕೊಡಿಸಿದಷ್ಟಕ್ಕೇ ತೃಪ್ತಿಗೊಳ್ಳದೆ, ಇವುಗಳಲ್ಲಿ ಕೆಲವನ್ನಾದರೂ ಗ್ರಂಥರೂಪದಲ್ಲಿ ಬರೆಯಿಸಿ, ಸುಲಭವಾದ ಬೆಲೆಗೆ ಪ್ರಕಟಿಸಿ, ಕನ್ನಡ ಜನದಲ್ಲೆಲ್ಲ ಹರಡಬೇಕೆಂಬ ಸೂಚನೆ ಸಹಜವಾಗಿಯೇ ಬಂದಿತು. ಇದನ್ನು ವಿಶ್ವವಿದ್ಯಾಲಯದ ಪ್ರಕಟನ ಸಮಿತಿ ಉತ್ಸಾಹದಿಂದ ಅಂಗೀಕರಿಸಿತು. ಈ ಬಗೆಯ ಪ್ರಯತ್ನ ಮೈಸೂರು ವಿಶ್ವವಿದ್ಯಾ

ನಿಲಯುದಲ್ಲಿ ಹಿಂದೆಯೇ ನಡೆದು ಇಂಥದೊಂದು ಗ್ರಂಥಮಾಲೆ ಅಲ್ಲಿ ಜನಪ್ರಿಯವಾಗಿ ಪರಿಣಮಿಸಿದ ಸಂಗತಿ ನಮ್ಮ ಸಂಕಲ್ಪಕ್ಕೆ ಮತ್ತಷ್ಟು ಹುರುಪನ್ನು ಕೊಟ್ಟಿತು. ಹೀಗೆ ವಿಶ್ವವಿದ್ಯಾಲಯದ ಜನತಾಶಿಕ್ಷಣ ಕಾರ್ಯವು ಈ 'ಉಪನ್ಯಾಸ ಗ್ರಂಥಮಾಲೆ'ಯ ಮೂಲಕ ಇನ್ನೊಂದು ಹೆಜ್ಜೆಯನ್ನು ಮುಂದಕ್ಕೆ ಇರಿಸಿದೆ.

ನಮ್ಮ ಪ್ರಾರ್ಥನೆಗೆ ಮನ್ನಣೆ ಕೊಟ್ಟು, ಪ್ರತಿಫಲದ ಅಪೇಕ್ಷೆ ಇಲ್ಲದೆಯೆ, ಉಪನ್ಯಾಸಕರು ಪುಸ್ತಕಗಳನ್ನು ಬರೆದು ಕೊಡುತ್ತಿರುವುದು ಶ್ಲಾಘ್ಯವಾದ ವಿಷಯ; ಇದಕ್ಕಾಗಿ ಈ ಲೇಖಕ ಮಹಾಶಯರಿಗೆ ವಿಶ್ವವಿದ್ಯಾಲಯದ ವಂದನೆಗಳನ್ನು ಸಂತೋಷದಿಂದ ಸಲ್ಲಿಸುತ್ತೇನೆ. ಈ “ಉಪನ್ಯಾಸ ಗ್ರಂಥ ಮಾಲೆ” ಕನ್ನಡಿಗರ ಪ್ರೀತಿಗೆ ಪಾತ್ರವಾಗಲೆಂದು, ಇದರ ಪ್ರಕಾಶನದಿಂದ ನಮ್ಮ ಜನತೆಯ ಜ್ಞಾನಾಸಕ್ತಿ ಪುಷ್ಟಿಗೊಳ್ಳ ಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಡಿ. ಸಿ. ಪಾವಟೆ
ಉಪಕುಲಪತಿ

ಅರಿಕೆ

ಇತರ ಮತಧರ್ಮಗಳಿಗಿರುವಂತೆ ಹಿಂದು ಧರ್ಮಕ್ಕೆ ಪ್ರವಾದಿಯಿಲ್ಲ; 'ಹಿಂದು' ಎಂಬುದು ಪ್ರವಾದಿಯ ಹೆಸರಲ್ಲ. ಅದಕ್ಕೆ ಮತಸ್ಥಾಪಕನಾವನೂ ಇಲ್ಲ. ಅದರ ಧರ್ಮಗ್ರಂಥವಾದ ವೇದವಾದರೂ ಅಂಕಿತನಾಮವೆನಿಸುವ ಮೊದಲು 'ಜ್ಞಾನದ ಆಕರ' ಎಂಬ ಸಾಮಾನ್ಯ ರೂಢನಾಮವೇ ಆಗಿತ್ತು. ಅದರ ಹಿಂದಿನ ಹೆಸರು ಆರ್ಯಧರ್ಮ ಎಂದು. ಮನು ಪ್ರಪಂಚ ಆರ್ಯಯುಗದ್ದು. ಅವನ ನೆಲ ಆರ್ಯಾವರ್ತ. ಅವನು ಹೇಳಿದ್ದು ಆರ್ಯರ ಆರ್ಯ ಅಥವಾ ಪೂಜ್ಯವಾದ ಆಚಾರ, ವಿಚಾರ.

ಮನುಸ್ಮೃತಿಯು ವೈದಿಕ ಸಂಸ್ಕೃತಿಯ ಅಂತಿಮ ಘಟ್ಟವನ್ನು ಅಭಿಲೇಖಿಸುತ್ತದೆ ಎಂಬುದನ್ನು ಅದು ಸನಾತನವೆಂದು ಕೆಲವೊಮ್ಮೆ ಕೊಡುವ ಅಸನಾತನ ಧರ್ಮಗಳಿಂದ ಊಹಿಸಬಹುದು. ಅದೊಂದು ಹಿಂದು ನಾಗರಿಕತೆಯ ಮೊದಲ ಮೈಲುಗಲ್ಲು; ವೇದಕಾಲೀನ ಭಾರತದ ಸಂಸ್ಕೃತಿಯನ್ನು ಕಾಯ್ದಿಡಲು ಮಾಡಿದ ಪ್ರಥಮ ಪ್ರಯತ್ನ.

ಪ್ರಸ್ತುತ ಪ್ರವಚನವು ಮನುಸ್ಮೃತಿಯ ಅಕ್ಷರಾರ್ಥ-ಕ್ಕಂಟಿಕೊಂಡಿಲ್ಲ; ಅದರ ಭಾವಕ್ಕೇ ಪ್ರಾಧಾನ್ಯ ಕೊಡುತ್ತದೆ. ಅಲ್ಲದೆ, ಅದರ ಹನ್ನೆರಡೂ ಅಧ್ಯಾಯಗಳ ಪ್ರತ್ಯೇಕ ಸಾರಾಂಶಗಳನ್ನು ಹೇಳುವ ಉದ್ದೇಶವನ್ನಿಟ್ಟುಕೊಂಡಿಲ್ಲ. ಅದನ್ನು ನವಭಾರತೀಯನು ಹೇಗೆ ನೋಡಬಹುದು, ಅದರಿಂದ ಯಾವ ಪ್ರಯೋಜನವನ್ನು ಪಡೆಯಬಹುದು—ಅಂಥ ನಿತ್ಯನೂತನ ವಿಚಾರಗಳು ಅದರಲ್ಲಿ ಯಾವುವು ? ಎಂಬ ದೃಷ್ಟಿಯಿಂದ ಮಾಡಿದ ಅಭ್ಯಾಸದ ಫಲವಿದು. ಭಾರತೀಯ ನಾಗರಿಕತೆಯ ಕಟ್ಟಡಕ್ಕೆ ಎಂಥ ವಜ್ರಸ್ತಂಭಗಳನ್ನು ಮನು ಆಧಾರವಾಗಿ ನಿಲ್ಲಿಸಿದ್ದ ? ಎಂದು ಭೃಗು ಹೇಳಿದ ಅಂಶಗಳನ್ನು ಪರಾ-ಮರ್ಶಿಸಿ ತಿಳಿದುಕೊಳ್ಳಲು ಮಾಡಿದ ಒಂದು ನಮ್ರ ಪ್ರಯತ್ನವಿದು.

ಮನುವು ಪ್ರತಿನಿಧಿಸುವುದು ಇತಿಹಾಸವು ಖಂಡಿತವಾಗಿ ಅಂದಾಜು ಕಟ್ಟಲಾರದಷ್ಟು ಅಳತೆಯ ಒಂದು ಪ್ರಾಚೀನ ಯುಗವನ್ನು. ಅದು ಮಹಾಭಾರತದ ಕಾಲ, ಕ್ರಿಸ್ತಪೂರ್ವ ಪ್ರಪಂಚ. ಮನು ಹೇಳುವ ಆರ್ಯರ ಪರಂಪರೆಯು ಬುದ್ಧನಿಗೂ ಹಿಂದಿನದು, ಶುದ್ಧ ವೈದಿಕರಾಜ್ಯದ್ದು. ಅಂದಿನ ಜನರಿಗೆ ತಮ್ಮ ಜಗತ್ತೇ ಮಹಾಜಗತ್ತೆಂಬ ಅಭಿಮಾನವಿದ್ದಂತೆ ತೋರುತ್ತದೆ. ಅಖಿಲ ಮಾನವರ ಉತ್ತಮ ಪ್ರತಿನಿಧಿಗಳು ತಾವೇ ಎಂಬ ಭಾವನೆ ಅವರಲ್ಲಿಯ ವಿಚಾರವಂತರಿಗಿದ್ದಂತೆ

ಕಾಣುತ್ತದೆ. ಅದರಿಂದಲೇ ಅವರು 'ಹಿಂದುಗಳಿಗಾಗಿ' ಎಂದು ಯಾವ ಉಪದೇಶವನ್ನೂ ಮಾಡಿಲ್ಲ. ಶ್ರೇಷ್ಠ ಆರ್ಯ ರಾಗಬೇಕಾದರೆ ಹೀಗೆ ನಡೆನುಡಿಗಳನ್ನಿಟ್ಟುಕೊಳ್ಳುವುದು ಸಾಂಪ್ರದಾಯಿಕ ಅವಶ್ಯಕತೆ—ಹೀಗೆ ಸತ್ಯವನ್ನು ಬಗೆದು ಬಾಳುವುದು ಅಗತ್ಯ—ಎಂಬಿಷ್ಟೇ ದೃಷ್ಟಿಯಿಂದ ವಿಚಾರ ಮಾಡುತ್ತ ಹೋದುದರಿಂದ ಅವರ ವಿಚಾರವಾಙ್ಮಯದಲ್ಲಿ ಅಖಿಲ ಮಾನವಕೋಟಿಗೆ ಅನ್ವಯಿಸುವಂಥ ವ್ಯಾಪಕ ವಾಕ್ಯ ಗಳು ಪದೇ ಪದೇ ಸಿಕ್ಕುತ್ತವೆ. ಅದೇ ಮಾದರಿಯಲ್ಲಿ ಮನುಧರ್ಮವು **ಮಾನವಧರ್ಮ** ಎನ್ನಿಸಿಕೊಳ್ಳಲು ಅರ್ಹ ವಾದದ್ದು.

ಕರ್ನಾಟಕ ವಿಶ್ವವಿದ್ಯಾಲಯವು ನನ್ನ ಅಲ್ಪಾಭ್ಯಾಸಕ್ಕೆ ಮನ್ನಣೆಯಿತ್ತು, ತನ್ನ ವ್ಯಾಸಂಗ ವಿಸ್ತರಣ ಭಾಷಣ ಮಾಲೆ- ಯಲ್ಲಿ ಅವಕಾಶವಿತ್ತು, ಕನ್ನಡ ಬಾಂಧವರು ಈ ನನ್ನ ಅಭ್ಯಾಸದಲ್ಲಿ ಸಹಭಾಗಿಗಳಾಗುವಂತೆ ಮಾಡಿದ್ದಕ್ಕಾಗಿ ಅದಕ್ಕೆ ನಾನು ಚಿರಋಣಿ.

ಕ್ಯಾನರಾ ಕಾಲೇಜ,
ಕುಮಟಾ

ಬಿ. ಎಚ್. ಶ್ರೀಧರ

ಮಾರ್ಚ ೨೮, ೧೯೫೫

ವಿಷಯ ಸೂಚಿಕೆ

ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ

ಮಾನವಧರ್ಮ

ನೀತಿಯಿಲ್ಲದೆ ಮಾನವರು ಬದುಕಲಾರರು. ನೀತಿಯಿಲ್ಲದ ಸಮಾಜವಿಲ್ಲ. ಮನುಷ್ಯರು ಸಮಾಜಜೀವಿಗಳು. ವ್ಯಷ್ಟಿ-ಸಮಷ್ಟಿಗಳ ಹಿತಾರ್ಥಗಳಲ್ಲಿ ಘರ್ಷಣ ಬರದಂತೆ ನೋಡಿಕೊಳ್ಳುವುದು ನೀತಿಯ ಅಥವಾ ಧರ್ಮದ ಕರ್ತವ್ಯ. ಧರ್ಮವು ನಿಯಮ ಹಾಗೂ ಕಾಯದೆಗಳನ್ನೊಳಗೊಂಡದ್ದು. ಅದರಲ್ಲಿ ವಿಧಿಗಳಿವೆ, ನಿಷೇಧಗಳಿವೆ. ಎಚ್. ಸ್ಪೆನ್ಸರ್ ಹೇಳಿದಂತೆ ಧರ್ಮವು ಆದರ್ಶ ಸಮಾಜದಲ್ಲಿರುವ ಆದರ್ಶ ಮನುಷ್ಯನ ಆದರ್ಶ ವರ್ತನಾಸಂಹಿತೆ. ಅಂಥ ಆದರ್ಶ ಮಟ್ಟದಲ್ಲದು ಶಾಶ್ವತ; ಸೂರ್ಯಚಂದ್ರರು ಪಾಲಿಸುವ ನಿಸರ್ಗನಿಯಮದಂತಹ ಋತ, ಸತ್ಯ. ಅದರ ವ್ಯಾಪ್ತಿಯೋ ಸಾರ್ವಕಾಲಿಕ, ಸಾರ್ವದೇಶಿಕ. ವ್ಯಾವಹಾರಿಕವಾದ ಒಳ ಪರಿಭೇದಗಳ ಮನ್ನಣೆ ಅವಶ್ಯವಾದಾಗ ಅದು ತನ್ನ ಶಾಶ್ವತ ಸೂತ್ರಗಳಿಗೆ

ಅವಿರುದ್ಧವಾದ ದೇಶ-ಕಾಲ-ಸಂದರ್ಭೋಚಿತ ನಿಯಮಗಳನ್ನು ಸಾಧುವೆಂದು ಪರಿಗಣಿಸುತ್ತದೆ.

ಧರ್ಮವು ಯೋಗ್ಯಕಾರ್ಯದಲ್ಲಿ ಮನುಷ್ಯನನ್ನು ಚೋದಿಸುತ್ತದೆ, ಯೋಗದ ಮೂಲಕ ಆತ್ಮಸಾಕ್ಷಾತ್ಕಾರವನ್ನು ಮಾಡಿಸುತ್ತದೆ; ಅದು ಆಚಾರದ ಸ್ವರೂಪವುಳ್ಳದ್ದು; ಇಷ್ಟವನ್ನು ಪಡೆಯಲು ಮತ್ತು ಅನಿಷ್ಟವನ್ನು ಪರಿಹರಿಸಿಕೊಳ್ಳಲು ಧರ್ಮವೊಂದು ಅಲೌಕಿಕೋಪಾಯ; ನಿರ್ದಿಷ್ಟ ಕರ್ತವ್ಯಗಳನ್ನು ಮಾಡುವುದರ ಮೂಲಕ ಸ್ವಸ್ಥಾನವನ್ನು ವ್ಯಕ್ತಿಯು ಉಳಿಸಿಕೊಳ್ಳುವುದಕ್ಕೂ ಧರ್ಮವೆನ್ನುತ್ತಾರೆ. ನೀತಿಯು ಧರ್ಮದ ಉಸಿರಾದರೆ, ಅತಿಭೌತ ತತ್ವಜ್ಞಾನವು (Metaphysics) ಅದರ ಶ್ವಾಸಕೋಶ. ಮಾನವ್ಯ ನಾಗರಿಕತೆಯಲ್ಲಿ ಅದು ಮಾಡಬೇಕಾದದ್ದು ವಿರುದ್ಧಗಳ ಸಮನ್ವಯವನ್ನು (Concordantia Oppositorum). ಕರ್ಮಕಾಂಡ, ಮತಪದ್ಧತಿ, ಶ್ರದ್ಧಾಮಯ ಪೂಜೆ-ಪುರಸ್ಕಾರ, ಪುರುಷಸ್ವರೂಪದ ದೇವರಂತಹ ಅತಿಮಾನುಷ ಶಕ್ತಿಯನ್ನು ಮನ್ನಿಸುವುದು ಮತ್ತು ಅಂಥ ಮನ್ನಣೆಯಿಂದ ಮನುಷ್ಯರ ನಡತೆ ಹಾಗೂ ಮನಃಪ್ರವೃತ್ತಿಗಳು ರೂಪಿಸಲ್ಪಡುವುದು ಮುಂತಾದವೆಲ್ಲವೂ ಧರ್ಮದ ಕಕ್ಷೆಯಲ್ಲಿ ಬರುತ್ತವೆ.

ಧರ್ಮದ ವಿಷಯಗಳು ನಾಲ್ಕು : (೧) ಅಹಂಕಾರ ಅಥವಾ ಜೀವ, (೨) ಪ್ರಪಂಚ ಅಥವಾ ಜೀವಿಯ ಆವರಣ,

(೩) ವಿಚಾರದ ಉದಯಕ್ಕೂ ಪೂರ್ವದಲ್ಲೇ ಸ್ವತಃ ಸಿದ್ಧವಾದ ದೇವತಾಕಲ್ಪನೆ ಮತ್ತು (೪) ಮಹಾರ್ಘ ಪದಾರ್ಥಗಳು, ಉತ್ತಮ ಆದರ್ಶಗಳು ಹಾಗೂ ಉಚ್ಚಮೌಲ್ಯಗಳು. ಹಿಂದು ಧರ್ಮದ ಪ್ರಕಾರ ಅಹಂಕಾರವುಳ್ಳ ಜೀವ, ಪ್ರಪಂಚ ಮತ್ತು ಲೌಕಿಕ ಪುರುಷಾರ್ಥಗಳು ಸ್ಥಿರವಲ್ಲ; ಬ್ರಹ್ಮವೊಂದೇ ಸರ್ವತಂತ್ರ ಸ್ವತಂತ್ರವಾದ ವಸ್ತು—ಅದು ನಿತ್ಯತೀತ. ಶುದ್ಧ ಜೀವ ಅಥವಾ ಆತ್ಮವು ಅವಿನಾಶಿ; ಕರ್ಮಾನುಸಾರ ಜನ್ಮಾಂತರಗಳಲ್ಲಿ ಹೊಕ್ಕು ಹೊರಡುತ್ತದೆ. ಹುಟ್ಟಿ ಹಾಗೆಯೇ ಉಳಿದಿರುವ ಮನುಷ್ಯನು ತನ್ನ ನಿಜವಾದ ಆತ್ಮವನ್ನು ಪ್ರತಿನಿಧಿಸನು. ಅವನಿಗೆ ಮಾನವ ಸಂಸ್ಕಾರವಾಗಬೇಕು; ಆಗಲೇ ಅವನು ದ್ವಿಜ ಅಥವಾ ಸಂಸ್ಕೃತ, ನಾಗರಿಕ ಎನ್ನಿಸುತ್ತಾನೆ. ವರ್ಣಾಶ್ರಮದ ಧರ್ಮಪದ್ಧತಿಯು ಅಂಥ ಸಂಸ್ಕಾರಗಳನ್ನು ಹಿಂದುವಿಗೆ (ಆರ್ಯನಿಗೆ) ಕೊಡುತ್ತದೆ.

ಪ್ರತಿಯೊಂದು ವೇದಕ್ಕೂ ಶಾಖೆ, ಸಂಹಿತೆ, ಬ್ರಾಹ್ಮಣ, ಆರಣ್ಯಕ, ಉಪನಿಷದ್ ಮತ್ತು ಕಲ್ಪಸೂತ್ರಗಳಿವೆ. ಕೃಷ್ಣ ಯಜುರ್ವೇದದ ಮೈತ್ರಾಯಣೀ ಸಂಹಿತೆಗನುಗುಣವಾಗಿ ಮಾನವಕಲ್ಪಸೂತ್ರವಿದೆಯೆಂದು ಹೇಳಿಕೆ. ಕಲ್ಪಸೂತ್ರಗಳನ್ನು ಎರಡು ಬಗೆಯಾಗಿ ವಿಂಗಡಿಸುತ್ತಾರೆ: (೧) ಶ್ರೌತಸೂತ್ರಗಳು ಮತ್ತು (೨) ಸ್ಮಾರ್ತಸೂತ್ರಗಳು— ಎಂದು. 'ಸ್ಮೃತಿ' ಎಂಬುದು ಸ್ಮಾರ್ತಸೂತ್ರಗಳ ಸಂಗ್ರಹ; ಮನುಷ್ಯರ ಪರಂಪರಾಗತ ಆಚಾರಗಳ ಸಂಹಿತೆ. ಸ್ಮಾರ್ತಸೂತ್ರ

ಗಳು ಪುನಃ ಗೃಹ್ಯಸೂತ್ರಗಳೆಂದೂ ಧರ್ಮಸೂತ್ರಗಳೆಂದೂ ವಿಭಕ್ತವಾಗಿವೆ.

'ಸ್ಮೃತಿ' ಎಂದರೆ ಪರಂಪರಾಗತ ಕಾಯದೆ, ಅಂಥ ಕಾಯದೆ-ಕಟ್ಟಳೆಗಳ ಸಂಹಿತೆ, ಸಂಗ್ರಹ; ಒಂದು ಸ್ಮೃತಿಯ ಪಠ್ಯಪುಸ್ತಕ; ವಿಧಿವಿಧಾನ, ಕಾಯದೆಗಳ ಶಾಸನ ಅಥವಾ ನಿಯಮಗಳು ಇಲ್ಲವೆ ಕಾಯದೆಗಳು ತುಂಬಿರುವ ಗ್ರಂಥ. ಪ್ರಸಿದ್ಧ ಸ್ಮೃತಿಗಳು ೧೮ : ವಿಷ್ಣು - ಪರಾಶರ - ದಕ್ಷ - ಸಂವರ್ತ - ವ್ಯಾಸ - ಹಾರೀತ - ಶಾತಾತಪ - ವಸಿಷ್ಠ - ಯಮ - ಆಪಸ್ತಂಬ - ದೇವಲ - ಶಂಖಲಿಖಿತ - ಭರದ್ವಾಜ - ಉಶನ - ಅತ್ರಿ - ಶೌನಕ-ಯಾಜ್ಞವಲ್ಕ್ಯ ಮತ್ತು ಗೌತಮರು ಬರೆದ ಸ್ಮೃತಿಗಳು. ಇದು ಇತ್ತೀಚಿನ ಮತ. ಯಾಜ್ಞವಲ್ಕ್ಯನ ಪ್ರಕಾರ ಮನ್ವಾದಿ ೨೦ ಸ್ಮೃತಿಕಾರರಿದ್ದಾರೆ.

'ಮನ್' ಧಾತುವಿನಿಂದ ಹುಟ್ಟಿದ 'ಮನು' ಎಂದರೆ ಮನುಷ್ಯ. ಮನುಗಳು ೧೪ ಜನರು. ಒಬ್ಬೊಬ್ಬ ಮನುವಿನ ಕಾಲ ಅಥವಾ ಮನ್ವಂತರ ಎಂದರೆ ೩೦,೬೭,೨೦,೦೦೦ ವರ್ಷಗಳು. ಸ್ವಯಂಭುವೆನಿಸಿದ ಬ್ರಹ್ಮನಿಂದ ಹುಟ್ಟಿದ ಸ್ವಾಯಂಭುವನು ಮೊದಲನೆಯ ಮನು. ಬ್ರಹ್ಮನು ಹೆಣ್ಣು ಗಂಡೆಂದು ಎರಡಾದನು. ಆ ಹೆಣ್ಣು-ಗಂಡುಗಳಿಂದ ವಿರಾಟ್ ಪುರುಷನು ಜನಿಸಿದನು. ಸ್ವಾಯಂಭುವ ಮನುವು ಅವನ ಮಗ. ಜಗತ್ತಿನ ಸೃಷ್ಟಿಕರ್ತನಾದ ಈತನು ೧೦ ಜನ ಪ್ರಜಾ

ಪತಿಗಳನ್ನು ನಿರ್ಮಿಸಿದನು. ಇನ್ನೊಂದು ಕತೆಯ ಪ್ರಕಾರ ಇವನು ಬ್ರಹ್ಮನಿಂದ ಅವನ ಮಗಳಾದ ಶತರೂಪೆಯ ಬಸಿರಿನಲ್ಲಿ ಹುಟ್ಟಿದನು. ಬ್ರಹ್ಮನು ಮನುವಾದನು; ತನ್ನ ವಾಮಾರ್ಧವನ್ನು ಶತರೂಪೆಯನ್ನಾಗಿ ಮಾಡಿಕೊಂಡನು. ಅನಂತರ ಅವನು ಅವಳನ್ನು ಮದುವೆಯಾದನು. ನಮಗೆ ದೊರಕಿರುವ ಮನುಸ್ಮೃತಿಯ ಕರ್ತನಿವನು ಎಂದು ನಂಬಿಗೆ. ಮಾನವ ಶ್ರೌತಸೂತ್ರವೆಂಬ ಗ್ರಂಥಕ್ಕೂ ಈತನೇ ಲೇಖಕನೆನ್ನಲಾಗುತ್ತದೆ. ನಾವೀಗ ಬುದುಕಿರುವುದು ಏಳನೆಯ ಮನುವಾದ ವೈವಸ್ವತ ಮನ್ವಂತರದಲ್ಲಿ. ಇವನು ಸೂರ್ಯನ ಮಗ, ಕ್ಷತ್ರಿಯ. ಇವನಿಗೆ ಸತ್ಯವ್ರತನೆಂಬ ಇನ್ನೊಂದು ಹೆಸರಿದೆ. ಪ್ರಲಯಪ್ರವಾಹವೊಂದರಿಂದ ಇವನನ್ನು ವಿಷ್ಣುವೋ ಬ್ರಹ್ಮನೋ ಕಾಯ್ದನಂತೆ.

ಸ್ವಾಯಂಭುವನು ಬದುಕಿದ್ದದ್ದು ಸುಮಾರು ೧೬೬,-೪೫,೧೭೬೦ ವರುಷಗಳ ಹಿಂದೆ. ಈತನ 'ಮನುಸ್ಮೃತಿ' ಒಬ್ಬನ ಕೃತಿಯಂತೆ ತೋರದು. ಈ ಗ್ರಂಥವು ಮೊದಲನೆಯದೂ ಮುಖ್ಯವೂ ಆದ ಸ್ಮೃತಿ. ಇದೊಂದು ವ್ಯವಸ್ಥಿತ ಯೋಜನಾಬದ್ಧ ಸಂಹಿತೆಯಲ್ಲ; ಇದರಲ್ಲಿ ಅಂದಿನ ಕಾಯದೆಗಳೂ ಮತಗಳೂ (Creeds) ತುಂಬಿವೆ. ಇದು ಹಿಂದು ಕಾಯದೆಯ ತಳಪಾಯ. ಇದಕ್ಕೆ ಸಲ್ಲುವ ಗೌರವವು ಇನ್ನಾವ ಸ್ಮೃತಿಗೂ ಸಲ್ಲದು. ಇದರದು ವೇದೋತ್ತರ ಕಾಲ. ಆದರೆ ಇಲ್ಲಿ ಹೇಳಿದ ದೇವತೆಗಳೆಲ್ಲಾ ವೈದಿಕ; ಪೌರಾಣಿಕ ದೇವತೆ

ಗಳಲ್ಲ. ಮನುಧರ್ಮಶಾಸ್ತ್ರವು ಷಡ್ದರ್ಶನಗಳಿಗಿಂತ ಹಿಂದಿನದು. ಕ್ರಿಸ್ತಪೂರ್ವ ೫ನೆಯ ಶತಮಾನದಲ್ಲಿ ಇದು ರಚಿತವಾಯಿತೆಂದು ಹೇಳಲಾಗಿದೆ. ಆದರೆ ಇದರಲ್ಲಿಯ ನಿಯಮಗಳೂ ಉಪದೇಶಗಳೂ ಪರಂಪರಾರೂಪದಲ್ಲಿ ಮೊದಲೇ ಬಳಕೆಯಲ್ಲಿದ್ದವು. ಕೃಷ್ಣಯಜುರ್ವೇದದ ಮಾನವರೆಂಬ ಬ್ರಾಹ್ಮಣರು ಈ ಪರಂಪರೆಯನ್ನುಳಿಸಿಕೊಂಡು ಬಂದವರು. ಕಾಯದೆಯನ್ನಲ್ಲದೆ ಇದು ಇತರ ವಿಷಯಗಳನ್ನೂ ಪ್ರತಿಪಾದಿಸುತ್ತದೆ. ಹಳೆಯ ಹಿಂದು ಸಮಾಜದ ಮಹೋದ್ಗ್ರಂಥವಿದೇ. ಮೊಟ್ಟಮೊದಲು ಇದಕ್ಕೆ ಒಂದು ಲಕ್ಷ ಶ್ಲೋಕಗಳಿದ್ದವೆಂದೂ ಅವನ್ನು ೨೪ ಅಧ್ಯಾಯಗಳಲ್ಲಿ ವಿಂಗಡಿಸಿಡಲಾಗಿತ್ತೆಂದೂ ನಂಬಿಗೆ. ನಾರದನವನ್ನು ೧೨,೦೦೦ ಕ್ಕೆ ಇಳಿಸಿದ. ಅನಂತರ ಸುಮತಿ ಪುನಃ ಆ ೧೨,೦೦೦ ವನ್ನು ೪,೦೦೦ ಶ್ಲೋಕಗಳಿಗಿಳಿಸಿದ. ಉಪಲಬ್ಧವಿರುವ ಮನುಸ್ಮೃತಿಯಲ್ಲಿ ಈಗ ಇರುವುದು ೨೬೮೫ ಶ್ಲೋಕಗಳು ಮಾತ್ರ. ಆಗೀಗ ಗ್ರಂಥದಲ್ಲಿ ಬೃಹನ್ಮನು ಅಥವಾ ವೃದ್ಧ ಮನುವಿನ ಹೆಸರು ಬರುವುದರಿಂದ ಇದನ್ನು ಒಂದಕ್ಕಿಂತ ಹೆಚ್ಚು ಸಲ ಸಂಹಿತೆಗಿಳಿಸಲಾಗಿದೆಯೆನ್ನಬಹುದು. ಪ್ರಸ್ತುತ ಮನುಸ್ಮೃತಿಯು ಭೃಗು ಹೇಳಿದ್ದು. ಇದರ ಕಾಲವು ಕ್ರಿ. ಪೂ. ೨ನೆಯ ಶತಮಾನಕ್ಕೂ ಕ್ರಿ. ಶ. ೨ನೆಯ ಶತಮಾನಕ್ಕೂ ನಡುವೆ ಎಂದು ಕೆಲವರ ಅಭಿಪ್ರಾಯ.

ಕ್ರಿ. ಶ. ೧೬೦೦ ರ ಧರ್ಮಸಾರವಾದ ವೀರಮಿತ್ರೋ

ಪಯವು ಬೃಹಸ್ಪತಿಯ ಪ್ರಕಾರ ಮನುವು ಅತ್ಯುನ್ನತ ವಿಧಿ ವಿಧಾತ ಎನ್ನುತ್ತದೆ. ಮಿಕ್ಕ ಸ್ಮೃತಿಗಳ ವ್ಯಾಪ್ತಿ ಕಿರಿದೆಂದು ಕುಮಾರಿಲನೆನ್ನುತ್ತಾನೆ. ಬ್ರಹ್ಮದೇಶ ಹಾಗೂ ಜಾವಾ ದ್ವೀಪದ ಕಾಯದೆ-ಪುಸ್ತಕಗಳು ಮನುಸ್ಮೃತಿಯನ್ನವಲಂಬಿಸಿವೆ. ಸಯಾಂ ದೇಶದಲ್ಲಿ ಈಗಲೂ ಮನುವನ್ನು ಶಾಸನ ವಿಧಾತ ಎಂದು ಹೇಳುತ್ತಾರೆ. ಪ್ರೊ. ಜಾಲಿ (Prof. Jolly) ಅಖಿಲಭಾರತ ಪ್ರಶಾಸನಾಧಿಕಾರ ಮನುಸ್ಮೃತಿಗಿದೆ ಎಂದಿದ್ದಾರೆ. ಮನುಸ್ಮೃತಿಯ ವ್ಯಾಖ್ಯಾನಕಾರರು ಅನೇಕರು. ಅವರಲ್ಲಿ ಮೇಧಾತಿಥಿ - ಕುಲ್ಲೂಕ ಭಟ್ಟರು ಪ್ರಸಿದ್ಧರು.

ಮನುಸ್ಮೃತಿಗೆ ೧೨ ಅಧ್ಯಾಯಗಳಿವೆ. ಅವುಗಳಲ್ಲಿ ಕ್ರಮಶಃ (೧) ಹೆಚ್ಚುಕಡಮೆ ಸಾಂಖ್ಯ ರೀತಿಯಲ್ಲಿ ಸ್ವಯಂಭುವಿನಿಂದ ಪ್ರಪಂಚವು ಸೃಷ್ಟಿಯಾದದ್ದು, ಬ್ರಹ್ಮಾದಿ ಗುರುಪರಂಪರೆ, ಸ್ವಾಯಂಭುವಾದಿ ಚತುರ್ದಶ ಮನುಗಳು, ಮನ್ವಂತರ-ಪ್ರಲಯ ಮುಂತಾದ ಕಾಲಾವಧಿಗಳು, ಯುಗ ಧರ್ಮಗಳು, ಚಾತುರ್ವರ್ಣ್ಯಧರ್ಮ,ವಿಷಯಾನುಕ್ರಮಣಿಕೆ; (೨) ಧರ್ಮಲಕ್ಷಣ, ಧರ್ಮಮೂಲ, ನಾಲ್ಕುದೇಶವಿಭಾಗಗಳು, ಸಂಸ್ಕಾರದ ಅಗತ್ಯ, ಬ್ರಹ್ಮಚರ್ಯ ಮುಂತಾದ ನಾಲ್ಕು ಆಶ್ರಮಗಳು; (೩) ಮದುವೆ, ದಾಂಪತ್ಯಧರ್ಮಗಳು, ಪಂಚ ಯಜ್ಞಗಳು - ಶ್ರಾದ್ಧ ಮುಂತಾದ ಗೃಹಸ್ಥ ಧರ್ಮಗಳು; (೪) ಗೃಹಸ್ಥ ಜೀವನದ ವಿವರಗಳು, ವೃತ್ತಿ, ಸ್ನಾತಕ ಧರ್ಮ, ಶಿಕ್ಷಣಾಂತ ಸಮಯಗಳು, ಆಹಾರ ನಿಯಮಗಳು; (೫)

ಸಸ್ಯ-ಮಾಂಸಾಹಾರ ವಿವೇಕ, ಸೂತಕಾವಧಿಗಳು, ಸಪಿಂಡ-ಸಮಾನೋದಕ ಲಕ್ಷಣಗಳು,ಶೌಚವಿಧಿಗಳು, ಪತ್ನೀ-ವಿಧವಾ ಧರ್ಮಗಳು; (೬) ವಾನಪ್ರಸ್ಥ ಸಮಯ ಹಾಗೂ ಧರ್ಮ, ಪರಿವ್ರಾಜಕ ಧರ್ಮ, ಗೃಹಸ್ಥ ಪ್ರಶಂಸೆ; (೭) ರಾಜಧರ್ಮ; (೮) ನ್ಯಾಯದಾನದ ರೀತಿನೀತಿಗಳು, ದುರ್ಬಲರ ಸಂರಕ್ಷಣೆ, ದಂಡವಿಧಾನ, ಸಾಲವಸೂಲು, ಶಾರೀರಿಕ ಶಿಕ್ಷೆ, ತೂಕ-ಅಳತೆ, ಬಡ್ಡಿಯ ದರ, ಹೊಣೆಗಳು, ಗಡಿ, ಅಪ್ರೌಢರ ಆಸ್ತಿ, ನಿಕ್ಷೇಪ, ಆಸ್ತಿಮಾರಾಟ - ಒಡೆಯತನ, ಪಾಲುಗಾರಿಕೆ, ಹುಲ್ಲುಗಾವಲು, ದುರುಪಯೋಗ, ಒಡೆಯ-ಒಕ್ಕಲು ಜಗಳ, ವಿಧಿಭಂಗ, ಕನ್ಯಾಪಹಾರ, ಹಾದರ, ಬಲಾತ್ಕಾರದ ಸಂಪ್ರಯೋಗ, ಮಾತಾಪಿತೃಕಲತ್ರಪುತ್ರರ ಸಂರಕ್ಷಣೆ, ಸುಂಕ, ಗುತ್ತಿಗೆ, ಸೇವಕರ ಏಳು ವರ್ಗ; (೯) ಗಂಡ-ಹೆಂಡಿರ ವೈಧಿಕ ಕರ್ತವ್ಯಗಳು, ದಾನಧರ್ಮ, ವಿವಾಹವಯಸ್ಸು, ದಾಯಭಾಗ, ಸ್ತ್ರೀಧನ, ದ್ಯೂತನಿರೋಧ, ಪಂಚಮಹಾಪಾತಕಗಳು, ಜೈಲು, ಸಪ್ತಾಂಗಗಳು, ವೈಶ್ಯ-ಶೂದ್ರ ಧರ್ಮಗಳು; (೧೦) ದಾನಪ್ರಶಂಸೆ, ಪ್ರಾಯಶ್ಚಿತ್ತಗಳು, ವ್ಯಾಧಿ, ಪಾಪ-ಉಪಪಾತಕ ಪ್ರಾಯಶ್ಚಿತ್ತ, ಪಾಪವಾರಣ ಮಂತ್ರ; (೧೨) ಕರ್ಮವಿಚಾರ, ಕ್ಷೇತ್ರಜ್ಞ-ಭೂತಾತ್ಮ-ಜೀವ, ನರಕದ ಚಿತ್ರಹಿಂಸೆ, ಗುಣತ್ರಯ, ಆತ್ಮಜ್ಞಾನವು ಮುಕ್ತಿಗೆ ಸಾಧನವಾಗಿರುವುದು, ಪ್ರವೃತ್ತ-ನಿವೃತ್ತರ ಕರ್ಮಗಳು, ವೇದಪ್ರಶಂಸೆ, ತರ್ಕದ ಸ್ಥಾನ, ಶಿಷ್ಟರು ಮತ್ತು ಪರಿಷತ್ತುಗಳು, ಮಾನವ ಧರ್ಮದ

ಅಭ್ಯಾಸದ ಫಲಶ್ರುತಿ— ಎಂಬಿವು ದಿಗ್ದರ್ಶಕವಾಗಿವೆ ಎನ್ನಬಹುದು.

ಮಾನವಧರ್ಮದ ಅವಲೋಕನದಲ್ಲಿ ಐತಿಹಾಸಿಕ ದೃಷ್ಟಿಯಿರುವುದು ಅತ್ಯಾವಶ್ಯಕ. ಏಕೆಂದರೆ ಮನುಸ್ಮೃತಿಯಲ್ಲಿ ಆದರ್ಶನಿಯಮಗಳೂ ಬಂದಿವೆ, ವಾಸ್ತವಿಕವೂ ವ್ಯಾವಹಾರಿಕವೂ ಸಾಂದರ್ಭಿಕವೂ ಆದ ನಿಯಮಗಳೂ ಇವೆ. ಮನುವು ಶಾಸನಗಳ ನಿರ್ಮಾಪಕನಷ್ಟೇ ಅಲ್ಲದೆ ಅಭಿಲೇಖಕನೂ ಆಗಿದ್ದಾನೆ.ಅವನ ಶಾಸ್ತ್ರದಲ್ಲಿ ಶಾಶ್ವತ ಧರ್ಮಗಳೂ ಇವೆ, ಅಶಾಶ್ವತ ಧರ್ಮಗಳೂ ಇವೆ; ಆ ಧರ್ಮವಿಧಿಗಳಲ್ಲಿಯ ತಾರತಮ್ಯ, ಉತ್ತಮ-ಮಧ್ಯಮ-ಅಧಮ ಎಂಬ ವಿವೇಕ, ಸ್ವಪ್ರಿಯ-ಅನ್ಯಪ್ರಿಯ ಎಂಬ ಭೇದ ಸೂಕ್ಷ್ಮಜ್ಞರಿಗೆ ಹೊಳೆಯದಿರವು. ರಾಗದ್ವೇಷರಹಿತರೂ ಸಂತರೂ ತಿಳಿದವರೂ ಆಚರಣೆಯಲ್ಲಿಟ್ಟುಕೊಂಡಿರುವ ಮತ್ತು ತನ್ನ ಹೃದಯವು ಮನ್ನಿಸುವ ಧರ್ಮತತ್ತ್ವಗಳನ್ನು ಹೇಳುತ್ತೇನೆ, ಎನ್ನುತ್ತಾನೆ ಮನು (II-1). ಅವನ ಕಾಲದಲ್ಲಿ ವೇದ, ಸ್ಮೃತಿ, ಸದಾಚಾರ ಮತ್ತು ಅರ್ಥ-ಕಾಮಗಳಲ್ಲಿ ಅನಾಸಕ್ತರಾದವರ ಆತ್ಮತುಷ್ಟಿಗೆ ಹೇತುವಾದುದು ಎಂಬೀ ನಾಲ್ಕು ಧರ್ಮಜ್ಞಾನದ ಮೂಲ ಆಕರಗಳಾಗಿದ್ದವು. ಮೊದಲನೆಯ ಮೂರು ಆಕರಗಳ ಸ್ಥಾನಗೌರವವು ಅನುಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ. ರಾಗ-ದ್ವೇಷರಹಿತರಾದ ಅನಾಸಕ್ತರು ಮಹಾತ್ಮರು; ಅವರ

ಪಂಕ್ತಿಯೇ ಪ್ರತ್ಯೇಕ; ತ್ರಿಗುಣಾತೀತರ ವರ್ತನೆ ತ್ರಿಗುಣಾತೀತರಿಂದಲೇ ವಿಮರ್ಶನೀಯ. ಅವರೊಮ್ಮೆ ಶ್ರುತಿ-ಸ್ಮೃತಿ-ಸದಾಚಾರಗಳನ್ನು ಮೀರಬಲ್ಲರು; ಆ ಸ್ವಾತಂತ್ರ್ಯವು ಅಂಥ ಮಾನ್ಯರಿಗಷ್ಟೇ ಮೀಸಲಲ್ಲದೆ, ಇತರ ಸಾಮಾನ್ಯರಿಗಲ್ಲ ಎಂಬುದು ಮನುಹೃದಯ. ಇಲ್ಲಿ ಕಾಣುವ ಅಭಿಪ್ರಾಯ-ಆಚಾರಗಳ ಸ್ವಾತಂತ್ರ್ಯವು ಅವಲಂಬಿಸಿರುವ ವಿವೇಕವು ಎಷ್ಟು ಪ್ರಶಂಸನೀಯ ಎಂಬುದನ್ನು ಎತ್ತಿ ಹೇಳಬೇಕಾಗಿದೆ. ಧರ್ಮಾಧರ್ಮ, ನ್ಯಾಯಾನ್ಯಾಯ, ಸತ್ಯಾಸತ್ಯ ಎಂಬೀ ಭೇದಗಳನ್ನು ಎಲ್ಲರೂ ಎಲ್ಲ ಸಂದರ್ಭಗಳಲ್ಲೂ ಸೂಕ್ಷ್ಮವಾಗಿ, ವಾಸ್ತವಿಕವಾಗಿ ವಿಮರ್ಶಿಸಲಾರರು ಎಂಬುದು ಅನುಭವಸಿದ್ಧವಾಗಿರುವುದರಿಂದ ಮಹಾಜನರು (ಮಹಾತ್ಮರು) ಕಂಡ, ಹೇಳಿದ ಮತ್ತು ಆಚರಣೆಯಲ್ಲಿಟ್ಟುಕೊಂಡ ನಿಯಮಗಳನ್ನೊಳಗೊಂಡ (ವೇದ-ಸ್ಮೃತಿ-ಆಚಾರ ರೂಪದ) ಆಧಾರಗಳು ಜನರಿಗೆ ಧರ್ಮಬದ್ಧ ನಡತೆಯಲ್ಲಿ ಮಾರ್ಗದರ್ಶಕಗಳು. ಮಹಾತ್ಮರು ವೇದಹೃದಯಜ್ಞರಾದುದರಿಂದ ಅವರು ಮೀರಿದರೆಂದು ತೋರಿದಾಗಲೂ ಅವರ ಆಚಾರವು ವೇದವಿಹಿತವಾಗಿರಬಹುದು. * ತನಗೆ ಇರುವ ಶುದ್ಧ ಬುದ್ಧಿಯ ಬಲದಿಂದ ಸಾಮಾನ್ಯನು ಸುದೀರ್ಘ

---

* ದೃಶ್ಯತೇ ಧರ್ಮರೂಪೇಣ ಹ್ಯಧರ್ಮಃ ಪ್ರಾಕೃತಶ್ಚರನ್ ।
ಧರ್ಮಂಚಾಧರ್ಮರೂಪೇಣ ಕಶ್ಚಿದಪ್ರಾಕೃತಶ್ಚರನ್ ॥

ಮ. ಭಾ.

ಸಹವಾಸ-ಪರಿಶೀಲನಗಳ ಮೂಲಕ ಮಹಾತ್ಮರು ಮಾತ್ರ ಆಚರಿಸಬಹುದಾದುದು ಯಾವುದು ? ಸಾಮಾನ್ಯರೇ ಆಚರಿಸಬೇಕಾದ ಅವರ ಆಚಾರಗಳಾವುವು ? ಉಭಯರೂ ಆಚರಿಸಬಹುದಾದ ಅವರ ಆಚಾರ ನಿಯಮಗಳಾವುವು ? ಎಂಬುದನ್ನು ಅರಿತುಕೊಳ್ಳಬಲ್ಲ. ಗಾಂಧಿಯವರನ್ನರಿತುಕೊಂಡಂತೆ ಜನಹೃದಯವು ಯಾವಾಗಲೂ ಮಹಾತ್ಮರ ಆತ್ಮವನ್ನು ಗುರುತಿಸಬಲ್ಲುದೆಂಬುದು ಲೋಕ ಪ್ರಸಿದ್ಧ.

P. 72 [illegible]

ಸಾಮಾನ್ಯ ಧರ್ಮ

Universal moral principles ಅಥವಾ ವಿಶ್ವ ವ್ಯಾಪಕವಾದ ನೀತಿತತ್ವಗಳು ಎಂದು ನಾವಿಂದು ಕರೆಯುವ ವರ್ತನಾನಿಯಮಗಳನ್ನು ಧರ್ಮಶಾಸ್ತ್ರಕಾರರು ಸಾಮಾನ್ಯಧರ್ಮ ಅಥವಾ ಸಾಧಾರಣಧರ್ಮ ಎನ್ನುತ್ತಾರೆ. ಅವು ಶಾಶ್ವತವಾದ ಮಾನವಧರ್ಮಗಳು. ಅವನ್ನಲ್ಲದೆ ಮನುವು ವರ್ಣ-ಆಶ್ರಮ-ದೇಶ-ಜಾತಿ-ಕುಲ-ಪಾಷಂಡಗಣಗಳ ಧರ್ಮಗಳನ್ನೂ ಹೇಳಿದ್ದಾನೆ.ಇವು ವ್ಯಷ್ಟಿ-ಸಮಷ್ಟಿ ಅಥವಾ ಸಮಾಜ-ಸಮುದಾಯ (Community) ಗಳ ವೈಯಕ್ತಿಕ ಹಾಗೂ ಸಾಮೂಹಿಕ ನಡತೆಗಳನ್ನೊಳಗೊಳ್ಳುವುವು; ವ್ಯಕ್ತಿಯ ಮತ್ತು ಗುಂಪಿನ ಆಚಾರ-ವಿಚಾರ-ಉಚ್ಚಾರಗಳ ಸ್ವಾತಂತ್ರ್ಯವನ್ನು ಪರಿಸೀಮನಗೊಳಿಸುವುವು.

ಸಾಮಾನ್ಯ ಧರ್ಮವು ಸಂಪೂರ್ಣ ಅರ್ಥದಲ್ಲಿ ಸರ್ವ ಮಾನವರ ಧರ್ಮ. ಅದು ಪರಮವ್ಯಾಪ್ತಿಯುಳ್ಳದ್ದು. ಉಳಿದ ಧರ್ಮಪ್ರಕಾರಗಳು ಅದಕ್ಕೆ ವಿರುದ್ಧವಾಗಿರ

ಬಾರದು * — ಎಂಬುದು ಮನುವಿನ ಇಂಗಿತ. ಅದು ಭಾರತೀಯ ನಾಗರಿಕತೆಯ ಆತ್ಮ. ಧರ್ಮ-ಅರ್ಥ-ಕಾಮ-ಮೋಕ್ಷಗಳು ಪುರುಷಾರ್ಥಗಳು, ಜೀವನದಲ್ಲಿ ಸಾಧಿಸಬೇಕಾದ ಮೌಲ್ಯಗಳು (Human Values). ಅವುಗಳಲ್ಲಿ ಮೋಕ್ಷ ಅಥವಾ ಅಸೀಮ ಸ್ವಾತಂತ್ರ್ಯವು ಪರಮೋಚ್ಚ ಪುರುಷಾರ್ಥ. ಆ ಶಾಶ್ವತ ಪುರುಷಾರ್ಥದ ಸಿದ್ಧಿಗೆ ಅನುಕೂಲವಾಗುವಂತೆಯೇ ಉಳಿದ ಮೂರು ಪುರುಷಾರ್ಥಗಳ ಸಾಧನೆ ಸಾಗಬೇಕು. ಧರ್ಮ-ಅರ್ಥ-ಕಾಮಗಳನ್ನು ಪರಸ್ಪರ ಅವಿರುದ್ಧವಾಗಿಯೇ ಸಾಧಿಸಬೇಕು (II—224). ಆದರೆ ಅವುಗಳಲ್ಲಿ ಅನಿವಾರ್ಯವಾಗಿ ವಿರೋಧ ಬಂದಾಗ ಧರ್ಮಸಿದ್ಧಿಗಾಗಿ ಅರ್ಥ-ಕಾಮಗಳನ್ನು ಬದಿಗಿರಿಸಬೇಕು § — ಎಂಬುದು ಮನುವಿನ ಒಲವು.

---

* ಪ್ರಣಷ್ಟಃ ಶಾಶ್ವತೋ ಧರ್ಮಃ ಸದಾಚಾರೇಣ ಮೋಹಿತಃ ।
ತೇನ ವೈದ್ಯಸ್ತಪಸ್ವೀ ವಾ ಬಲವಾನ್ ವಾ ವಿಮುಹ್ಯತೇ ॥
ಮ. ಭಾ.

§ ೧ ಅಪ್ಯರ್ಥಕಾಮೌ ತಸ್ಯಾಸ್ತಾಂ ಧರ್ಮ ಏವ ಮನೀಷಿಣಃ ॥
ರಘುವಂಶ.

೨ ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೇ ॥
ಮ. ಭಾ.

೩ ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ ॥
ಭ. ಗೀ.

Wish is the father of thought and thought is the father of action — ವಿಚಾರವು ಇಚ್ಛಾಜನ್ಯ, ಆಚಾರವು ವಿಚಾರಜನ್ಯ. ಅಕಾಮನಿಗೆ ಮಾಡಬೇಕಾದ ಕೆಲಸವೇನಿದೆ ? (II—4). ವಿಶಾಲಾರ್ಥದಲ್ಲಿ ಮನುಷ್ಯನು ಮಾಡುವುದೆಲ್ಲವೂ ಕಾಮಕಾರ್ಯ; ಸನ್ಯಾಸಿಯೂ ಮೋಕ್ಷಕಾಮನು. ನಿಸ್ಪೃಹನಿಗೆ ಜಗತ್ತು ತೃಣ; ಆದರೆ ಮೋಕ್ಷವು ಪರ್ವತ ! ತಪಸ್ಸು, ಪೂಜೆ, ದಾನ ಮುಂತಾದ ಧರ್ಮಪ್ರಕಾರಗಳಿಂದ ಶುದ್ಧ ಬುದ್ಧಿ ರೂಪಿಸಲ್ಪಡುತ್ತದೆ; ಅದು ಮೋಕ್ಷಸಾಧನ. ಆದುದರಿಂದ ಧರ್ಮದ ಮುಂದೆ ಅರ್ಥ-ಕಾಮಗಳು ಚಿಕ್ಕವು; ಅವು ಧರ್ಮಾಧೀನವಾಗಿಯೇ ಸಾಗಬೇಕು. ಧರ್ಮವೇ ಕಾಯದೆ, ಧರ್ಮವೇ ನೀತಿ; ಧಾರ್ಮಿಕನೇ ಮಾನವ (ಅತಾಮಸ). ಮಾನವನು ಧರ್ಮವನ್ನು (Ethics) ಕೊಂದರೆ ಹಾಗೆ ಹತವಾದ ಧರ್ಮವು ಅವನನ್ನು ಹಾನಿಗೀಡುಮಾಡುತ್ತದೆ, ಅಧಃಪತನಕ್ಕೀಡುಮಾಡುತ್ತದೆ (VIII—15) — ಎಂಬಲ್ಲಿ ನೀತಿಯು ಸುಪ್ರಸಿದ್ಧರೂಪವಾದ ಕಾಯದೆ ಅಥವಾ ವಿಧಿಯನ್ನು, ಶಾಸನವನ್ನು ಪ್ರಜೆಗಳು ಯಾವ ಕಾರಣದಿಂದ ಗೌರವಿಸಬೇಕು, ಪಾಲಿಸಬೇಕು ಎಂಬ ಮನುಮತ ಎಷ್ಟು ಹೃದಯಂಗಮವಾಗಿದೆ !

ಅಹಿಂಸೆ, ಸತ್ಯ, ಅಸ್ತೇಯ, ಶೌಚ, ಇಂದ್ರಿಯನಿಗ್ರಹ ಎಂಬೀ ಐದು ಸುಪ್ರಸಿದ್ಧವಾದ ಸಾಮಾನ್ಯ ಧರ್ಮಗಳು. ಈ

ಐದರಲ್ಲಿ ಸತ್ಯಕ್ಕೂ ಮೊದಲಿನ ಸ್ಥಾನ ಅಹಿಂಸೆಗೆ! ಕ್ರಿಸ್ತಪೂರ್ವದ ಐದಾರು ಶತಮಾನಗಳಲ್ಲಿ ಬೌದ್ಧ, ಜೈನ, ಇತಿಹಾಸ-ಪುರಾಣ ಹಾಗೂ ಧರ್ಮಶಾಸ್ತ್ರದ ಗ್ರಂಥಗಳೆಲ್ಲವೂ ಸ್ಪಷ್ಟವಾಗಿ ಅಹಿಂಸೆಗೆ ಅಗ್ರಪೂಜೆ ಸಲ್ಲಿಸಹೊರಟದ್ದು ಕಾಣುತ್ತದೆ. ಚರಾಚರಗಳ ಅತಿ ಹೆಚ್ಚಿನ ಒಳಿತಿಗಾಗುವುದು ಯಾವುದೋ ಅದೇ ಸತ್ಯ ಎಂದು ಮಹಾಭಾರತ (ಶಾಂ. ಪ. ೨೮೮.೨೦ ಮತ್ತು ೩೩೦.೧೩) ಸಾರಿದ್ದು ಸತ್ಯದ ಅಹಿಂಸಾತ್ಮಕತೆಯನ್ನು ಸೂಚಿಸುತ್ತದೆ. ಅಹಿಂಸೆ ಅಥವಾ ದಯೆಯೇ ದೇವರು ಎಂಬ ಅಭಿಪ್ರಾಯವನ್ನಿಂದು ಎಲ್ಲರೂ ಮಾನ್ಯ ಮಾಡುತ್ತಾರೆ. ದಯೆಯಿಲ್ಲದ ಯಾವುದನ್ನಾದರೂ ದೇವಾಂಶವುಳ್ಳದ್ದೆಂದು ಹೇಳಲಾದೀತೇ ? ಪ್ರಿಯವನ್ನು ನೀಡುವುದಕ್ಕಿಂತ ಹೆಚ್ಚಾಗಿ ಹಿತವನ್ನು ನಿಡುವುದೇ ದಯೆ. ಅದೇ ಮಾನವತೆ, ಮಾನವೀಯತೆ. ಆದರೆ ಯಾರಿಗೆ ಏನನ್ನು ಹೇಳಿದರೆ ಅಥವಾ ಮಾಡಿದರೆ ಅವರ ಹಿತವು ಸಾಧಿಸಲ್ಪಡುತ್ತದೆ ? ಎಂಬುದನ್ನು ಅರಿಯುವುದು ಕಷ್ಟ. ಏಕೆಂದರೆ ಒಬ್ಬನಿಗೆ ಒಂದು ಸಂದರ್ಭದಲ್ಲಿ ಅಮೃತವೆನಿಸಿದ್ದು ಇನ್ನೊಬ್ಬನಿಗೆ ವಿಷವಾಗಿ ಪರಿಣಮಿಸೀತು. ಆದುದರಿಂದ ಅನ್ಯರಿಗೆ ಹಿಂಸೆಯಾಗದಂತೆ ಮನುಷ್ಯನು ತನ್ನ ಮನಸ್ಸು, ಮಾತು ಮತ್ತು ವರ್ತನೆಗಳನ್ನು ನಿಯಮಿಸಿಕೊಂಡಿರಬೇಕು ಎಂದು ಹೇಳಲಾಗಿದೆ. ಯಾರಿಗೆ ಯಾರಿಂದಲೂ (ಯಾವಾಗಲೂ) ಹೆದರಿಕೆಯಿಲ್ಲವೋ ಯಾರು ಯಾರನ್ನೂ (ಯಾವಾಗಲೂ) ಹೆದರಿಸರೋ ಅವರೇ ಅಹಿಂಸಾ

ಸಿದ್ಧರೆನ್ನುತ್ತದೆ ಮಹಾಭಾರತ. ಅದೇ ಅಭಯಸಿದ್ಧಿ, ಮುಕ್ತ-ಸ್ಥಿತಿ. ಏಕೆಂದರೆ ಭಯಮುಕ್ತನಿಗೆ ಸಾಧಿಸಬೇಕಾದುದಿನ್ನಾವುದಿದೆ ? ಅಭೀತನು ಅನಿರ್ಬದ್ಧ, ಸ್ವತಂತ್ರ, ಮುಕ್ತ. ಈ ಆದರ್ಶವಾದಕ್ಕೆ ಧರ್ಮಸಾಧನೆಯೇ ವಾಸ್ತವಿಕ ಬುನಾದಿ. ಈ ದೃಷ್ಟಿಯಿಂದಲೇ ಗ್ರಂಥದಲ್ಲಿ ಇತರ ಸಾಮಾಜಿಕ, ಆರ್ಥಿಕ, ರಾಜಕೀಯ ವಿಷಯಗಳೆಷ್ಟೇ ವಿವರಪೂರ್ವಕವಾಗಿ ಬಂದಿದ್ದರೂ ಮನುವಿನ ಈ ಗ್ರಂಥವು ಧರ್ಮಶಾಸ್ತ್ರವೆಂದೇ ಪ್ರಸಿದ್ಧವಾಗಿದೆ. ಅಂಥ ಧರ್ಮದ ಪ್ರಧಾನ ಲಕ್ಷಣ ಅಹಿಂಸೆ; ಪರಹಿತದ ಸಾಧನೆಯಲ್ಲಿ ಸ್ವಹಿತಸಾಧನೆಯನ್ನು ಕಾಣುವುದೇ ಅದರ ಸತ್ವ, ಸಾರ, ಸತ್ಯ. ಸಾತ್ವಿಕತೆ ಅಥವಾ ದಿವ್ಯತೆಯು ಮಾನವ ಹತ್ತಬೇಕಾದ ನಾಗರಿಕತೆಯ ಶಿಖರ. ಅದು ಉತ್ತಮ ಲೋಕ, ಉತ್ತಮ ಪ್ರಜ್ಞೆ, ಉತ್ತಮವಾದ ಇರುವಿಕೆ. ಮಾನವನು ಮಧ್ಯಮ ಲೋಕಸ್ಥ, ರಾಜಸ; ಅವನು ತಮೋಮುಖ ನಾಗದಂತೆ ನಿಷೇಧಿಸುವ ಹಾಗೂ ಸತ್ವಮುಖನಾಗುವಂತೆ ವಿಧಿಸುವ ಶಾಸ್ತ್ರವೇ ಧರ್ಮಶಾಸ್ತ್ರ ಎಂದು ಗ್ರಹಿಸಬಹುದು. ಈ ವಿಚಾರಸರಣಿಯಿಂದಲೇ ಗಾಂಧಿಯವರು ಅಹಿಂಸೆ ಹಾಗೂ ಸತ್ಯಗಳು ಒಂದನ್ನೊಂದು ಬಿಟ್ಟಿರಲಾರವೆಂದೂ ಅವು ಒಂದೇ ನಾಣ್ಯದ ಎರಡು ಮುಖಗಳಂತಿವೆ ಎಂದೂ ತಿಳಿದದ್ದು, ಅವೇ ಧರ್ಮ ಎಂದು ಸಾರಿದ್ದು.

ಅಹಿಂಸೆ-ಸತ್ಯಗಳ ಆದರ್ಶಸ್ವರೂಪಗಳನ್ನು ತಿಳಿಸಿದ ಬಳಿಕ ಕಳವು ಮಾಡದಿರುವುದು, ಬಾಹ್ಯಶುದ್ಧಿ ಮತ್ತು

ಇಂದ್ರಿಯನಿಗ್ರಹ ಅಥವಾ ಅಂತರಂಗಶುದ್ಧಿ ಎಂಬೀ ಧರ್ಮಗಳತ್ತ ಲಕ್ಷ್ಯ ಹಾಕೋಣ. ಅಸತ್ಯ ಅಥವಾ ವಂಚನೆಯ ಒಂದು ರೂಪವಾದ ಕಳವನ್ನು ಎತ್ತಿ ಹೇಳಿ ಬಹಿಷ್ಕರಿಸಲು ಬಹುಶಃ ಭಾರತದಲ್ಲಿದು ಹೆಚ್ಚಾಗಿತ್ತೆನ್ನಬೇಕು.[೫] ಅಖಿಲ

---

೪ (1) Non–Violence is the law of the human race...... (2) Ahimsa and Truth are so intertwined that it is difficult to disentangle and separate them. (3) Perfect fearlessness can be attained only by him who has realized the supreme, as it implies freedom from delusions...... Fearlessness is the requisite of spirituality. Cowards can never be moral. (4) Truth for me is God–

—*M. K. Gandhi*

೫ Theft is the typical crime, the treatment of which serves as the model for the rest. Megasthenes undoubtedly gives too favourable a picture when he says that theft was rare: the number of injunctions relating to it, and the extreme severity of its punishment, are sufficient evidence against him

—*Louis Renou : The Civilization in Ancient India.*

ಭಾರತದ ಬಹುಸಂಖ್ಯ ಪ್ರಜಾಕೋಟಿಯ ಮನೋವಿಜ್ಞಾನವನ್ನು ಧರ್ಮಶಾಸ್ತ್ರಕಾರರಷ್ಟು ಚೆನ್ನಾಗಿ ಇನ್ನಾರು ಬಲ್ಲರು ? ಆದರಿಂದಲೇ ಮನುವು (VII—22) ಶಿಕ್ಷೆಯ ಭಯವಿಲ್ಲದೆ ಲೋಕವನ್ನು ನೆಟ್ಟಗಿಡಲಸಾಧ್ಯ; ಶುದ್ಧಚರಿತ್ರನಾದ ನರನು ದುರ್ಲಭ ಎಂದು ಘೋಷಿಸಿದ್ದು. ದಬ್ಬೆ ಕಟ್ಟದೆ ನಾಯಿಯ ಬಾಲವನ್ನು ನೆಟ್ಟಗಿಡಲು ಸಾಧ್ಯವಿಲ್ಲ. ಈ ಮಾತನ್ನು ನಮ್ಮ ಇಂದಿನ ಸರಕಾರಗಳೂ ಅರಿತು ತಕ್ಕ ವ್ಯವಸ್ಥೆಯನ್ನು ಆಡಳಿತದಲ್ಲಿ ಅಳವಡಿಸಿಕೊಳ್ಳಲು ಎಷ್ಟು ಪ್ರಯತ್ನಿಸಿದರೂ ಕಡಿಮೆಯೆ ಎಂದು ಲಂಚಗುಳಿತನದ ಪಿಡುಗನ್ನು ಕಂಡು ಕೇಳಿದ ಆಧುನಿಕ ಭಾರತೀಯನಾವನೂ ಒತ್ತಿಹೇಳದಿರಲಾರ. ಪರಸ್ವಾಪಹಾರವೆಲ್ಲಾ ಕಳ್ಳತನ, ಸಮಾಜದ್ರೋಹ. ಸಮಾಜದ್ರೋಹಿಯೆಂದೂ ಸ್ವಹಿತವನ್ನು ಸಾಧಿಸಿಕೊಳ್ಳಲಾರ. ಅನ್ಯನಿಗೆ ನ್ಯಾಯವಾಗಿ ಸೇರಿರುವ ಅಥವಾ ಸೇರತಕ್ಕ ಧನ, ಧಾನ್ಯ, ದಾಸಿ, ಭೃತ್ಯ, ಸುತ, ಬಂಧು, ವಸ್ತ್ರ, ವಾಹನ ಮತ್ತು ಪ್ರಸಿದ್ಧಿ, ಕೀರ್ತಿ, ಗ್ರಂಥಕರ್ತೃತ್ವ ಹಾಗೂ ಗೌರವ - ಪದವಿ - ಬಿರುದು ಮುಂತಾದವನ್ನು ಕೂಟತಂತ್ರದಿಂದ ಅಪಹರಿಸಿಕೊಂಡು ಹೋಗುವವರು ಬಹಳ ಕಾಲದಿಂದ ಭಾರತದ ಪಂಡಿತ-ಪಾಮರರಿಬ್ಬರಲ್ಲೂ ಇರುತ್ತ ಬಂದವರು. ಧನ - ಕನಕ - ವಸ್ತ್ರ - ವಾಹನಗಳ ಹಾಗೂ ಜೀವಿತದ ಅಪಹರಣ ಸಾಮಾನ್ಯ ವಿವಿಧ ಅಪರಾಧಗಳ ರೂಪದ

ಪ್ರಜಾಹಿಂಸೆಯನ್ನು ತಡೆಯಲೆಂದೇ ಮನುವೂ ಕೌಟಿಲ್ಯನೂ ಅತ್ಯಂತ ವ್ಯಾಪಕವಾದ ಗೂಢಚಾರಪದ್ಧತಿಯನ್ನು ಆಡಳಿತದ ಅನಿವಾರ್ಯ ಅಂಗವೆಂದು ಪ್ರತಿಪಾದಿಸಿದ್ದಾರೆ. ಗೂಢಚಾರರನ್ನು ಮನುವು ಐದು ವರ್ಗಗಳನ್ನಾಗಿ ವಿಂಗಡಿಸಿದ್ದಾನೆ. (VII—154); ಕಾಪಟಿಕ, ಉದಾಸ್ಥಿತ, ಗೃಹಪತಿ, ವೈದೇಹಕ, ತಾಪಸ — ಎಂಬಿವೇ ಆ ಐದು ವರ್ಗಗಳು. ಕಾಪಟಿಕರೆಂಬ ವರ್ಗಕ್ಕೆ ಸೇರಿದ ಚಾರರು ಪರಮರ್ಮಜ್ಞರೂ ಪ್ರೌಢರೂ ವಿದ್ಯಾರ್ಥಿಗಳೂ ಎನಿಸಿದರೆ, ಉದಾಸ್ಥಿತವರ್ಗದವರು ಪ್ರಜ್ಞಾಶೌಚವುಳ್ಳವರೂ ಪರಿವ್ರಾಜಕರಾಗಲು ಯತ್ನಿಸಿ ಸೋತವರೂ ಲೋಕದ ದೋಷಗಳನ್ನು ಬಲ್ಲವರೂ ಆಗಿರುತ್ತಿದ್ದರು. ಹೆಚ್ಚು ಹಣ - ಕಾಸು - ಆಸ್ತಿ - ಪಾಸ್ತಿಯುಳ್ಳ, ವಿಸ್ತಾರವಾದ ವ್ಯವಹಾರಕ್ಷೇತ್ರವಿರುವ ಮಠಾದಿ ಸಂಸ್ಥೆಗಳಲ್ಲಿ ನಡೆಯುವ ವಿದ್ಯಮಾನಗಳನ್ನು (ಗುಪ್ತವೇಷದಲ್ಲಿ ಅಂಥಕಡೆ ವಾಸಿಸಿದ್ದು) ರಾಜನಿಗೆ ಅವರು ತಿಳಿಸಬೇಕಾಗಿತ್ತು. ಗೃಹಪತಿವರ್ಗದ ಚಾರಕರು ಒಕ್ಕಲಿಗರೂ ಬಡವರೂ ಆಗಿ, ರಾಜಭೂಮಿಯಲ್ಲಿ ಒಕ್ಕಲುತನ ಮಾಡುತ್ತಿದ್ದವರು. ವೈದೇಹಕ ಎಂಬ ವರ್ಗದವರು ಬಡವ್ಯಾಪಾರಿಗಳು; ಅವರಿಗೆ ನೆರವಿತ್ತು ರಾಜನು ತನ್ನಿಂದ ವ್ಯಾಪಾರ ಮಾಡಿಸುತ್ತಿದ್ದ. ಜಟಾಧಾರಿಗಳಾದ ಅಥವಾ ಬೋಳ್ದಲೆಯ ವೈರಾಗಿಗಳು ತಾಪಸವರ್ಗದ ಗೂಢಚಾರರು. ಅಂದರೆ ಅಂದಿನ ಗೂಢಚಾರರು ಹೆಚ್ಚಾಗಿ

ಬ್ರಹ್ಮಚಾರಿ – ಅವಧೂತ – ಕೃಷಿಕ – ವೈಶ್ಯ – ತಪಸ್ವಿಗಳ ವೇಷಗಳಲ್ಲಿ ಪ್ರಜೆ ಹಾಗೂ ಪ್ರಭುಭೃತ್ಯರ ಒಳ - ಹೊರ ನಡತೆಗಳನ್ನು ಕಣ್ಣಿಗೆ ಎಣ್ಣೆ ಹಾಕಿಕೊಂಡು ಪರೀಕ್ಷಿಸಿ ರಾಜನಿಗೆ ವರದಿ ಮಾಡುತ್ತಿದ್ದರು. ಒಬ್ಬ ಗೂಢಚಾರನಿಗೆ ಇನ್ನೊಂದು ವರ್ಗದ ಗೂಢಚಾರನ ಗುರುತಿರದಂತೆ ವ್ಯವಸ್ಥೆಯಿತ್ತಂತೆ. ಈ ಗೂಢಚಾರರ ಅತಿವ್ಯಾಪಕವಾದ ಜಟಿಲ ಜಾಲದ ಪ್ರತಿಪಾದನೆಯೂ ಭಾರತೀಯ ಅಧಿಕಾರಿಗಳ ಹಾಗೂ ಪ್ರಜೆಗಳ ಪರಂಪರೆಯ ದೌರ್ಬಲ್ಯರಾಶಿಗಳಿಗೆ ಸಾಕ್ಷಿಯಾಗಿದೆ. ದಕ್ಷ ಆಡಳಿತಗಾರರಿದ್ದಾಗಲೇ ಭಾರತವು ನಾಗರಿಕತೆಯ ಉನ್ನತ ಶಿಖರವನ್ನು ಮುಟ್ಟಿದ್ದು; ಅಂಥವರಿಲ್ಲದ ಇತಿಹಾಸಾವಧಿಯಲ್ಲಿ ಅದು ಅವನತಿಯ ಪಾತಾಳಕ್ಕಿಳಿದದ್ದು.೬ ಸುಮಾರು ಆರೇಳು ಸಾವಿರಕ್ಕಿಂತಲೂ ಹೆಚ್ಚು ಹಳೆಯದಾದ ಭಾರತದ ಭಾಗ್ಯವು ಬಹಳ ಸಲ ಇಳಿದುಹೋಗಿ ಅಸ್ತಂಗತವಾದ ಐತಿಹಾಸಿಕ ಅವಧಿಗಳು ಸ್ತ್ರೈಯುಯುಗಗಳೆನ್ನಲು ಯಾವ ಅಭ್ಯಂತರವೂ ಇಲ್ಲ.

---

೬ 'Failure to build up a sound judicial and administrative machinary and faiiure to preserve its independence and integrity have often been the undoing of nations.'

—*Prof. Satyanatha Aiyar*

' ರಾಜಾ ಕಾಲಸ್ಯ ಕಾರಣಂ ' ಎಂಬುದು ಮಾನಸ ಶಾಸ್ತ್ರೀಯ ವಾದ ವಸ್ತುಸತ್ಯವಾಗಿರುವುದರಿಂದ ಸರಕಾರವು ಒಳ್ಳೆಯ ದೆನಿಸಿದಾಗಲೇ (ದಕ್ಷ ಎನಿಸಿದಾಗಲೇ) ಈ ದೇಶದಲ್ಲಿ ಪ್ರಜೆ ಗಳು ಒಳ್ಳೆಯವರಾಗಿ ಬಾಳಿಯಾರು. ಹೀಗೆ " ಶಾಸಕರು ನೇತೃಗಳು; ಶಾಸ್ಯರು (ಪ್ರಜೆಗಳು) ನೇಯರು ಎಂಬುದೇ ಭಾರತದ ನಾಗರಿಕತೆಯ ಮೂಲಸೂತ್ರ " ಎಂಬುದು ಅಸ್ತೇಯವನ್ನು ವಿಶಿಷ್ಟವಾಗಿ ಪಂಚ ಮಹಾಸಾಮಾನ್ಯ ಧರ್ಮಗಳಲ್ಲಿ ಗಣಿಸಿ ಹೇಳಿದ್ದರಿಂದ ಅನುಮಿತವಾಗುತ್ತದೆ. ಇಲ್ಲಿಯ ವರೆಗೆ ಜನರು ಸ್ವರಾಜ್ಯಪ್ರಿಯರೆನಿಸಿದ್ದುದಕ್ಕಿಂತ ಹೆಚ್ಚಾಗಿ ಸುರಾಜ್ಯಪ್ರಿಯರಾಗಿದ್ದುದಕ್ಕೂ ಉಕ್ತ ಮನೋ ಧರ್ಮವೇ ಕಾರಣವೆನ್ನಬಹುದು.

ಬಾಹ್ಯ ರೀತಿ-ನೀತಿಗಳ ಶುಚಿ-ರುಚಿಗಳ ಆವಶ್ಯಕತೆ ಯನ್ನು ಎಲ್ಲರೂ ಒಲ್ಲರು. ದೇಹಶುಚಿಯು ಆರೋಗ್ಯಕ್ಕೆ ಆವಶ್ಯಕವಾದರೆ, ಶೀಲಶುಚಿಯು ಸಾಮಾಜಿಕ ಸಭ್ಯತೆ - ಸಂಸ್ಕೃತಿ - ನಾಗರಿಕತೆಗಳಿಗೆ ಅಗತ್ಯ. ನಿಜವಾದ ಶೀಲ ಶುಚಿಗೆ ಇಂದ್ರಿಯನಿಗ್ರಹವೇ ಅಡಿಗಲ್ಲು. ಅಹಿಂಸೆಯು ಸತ್ಯಕ್ಕೆ ಆಧಾರ, ಸತ್ಯವು ಅಸ್ತೇಯಕ್ಕೆ ಆಧಾರ, ಅಸ್ತೇಯ ಅಥವಾ ಆತ್ಮವಂಚನೆ - ಪರವಂಚನೆಗಳ ಅಭಾವವು ಬಾಹ್ಯ ದಲ್ಲಿ ಪ್ರಾಮಾಣಿಕವಾಗಿ ದೃಶ್ಯವಾಗುವ ಕಾರ್ಯಕ್ರಮಗಳ ನಿತ್ಯಾಧಾರ ಮತ್ತು ಈ ದೃಶ್ಯ ಶುಚಿಗೆ ಅದೃಶ್ಯವಾದ ಇಂದ್ರಿಯನಿಗ್ರಹರೂಪದ ಮನಸ್ಥಿತಿಯೇ ಆಧಾರ. ಹಾಗ

ಲ್ಲದೆ, ಇಂದ್ರಿಯನಿಗ್ರಹದಿಂದ ಆರಂಭಿಸಿ, ಆ ಮೂಲ ಹೇತುವಿನಿಂದ ಅನುಕ್ರಮವಾಗಿ ಅಹಿಂಸಾಸಿದ್ಧಿಯನ್ನು ಮುಟ್ಟಬಹುದು. ಹೀಗೆ ಈ ಐದು ಸಾಮಾನ್ಯ ಧರ್ಮಗಳು ಒಂದರೊಳಗೊಂದು ಓತಪ್ರೋತವಾಗಿವೆ; ಒಂದನ್ನು ಬಿಟ್ಟು ಇನ್ನೊಂದಿಲ್ಲ; ಇದ್ದಂತೆ ತೋರಿದರೆ ಅದು ಕಪಟ !

ಇಂದ್ರಿಯನಿಗ್ರಹವನ್ನು ಅರ್ಥಾತ್ ಭೋಗದ ಪರಿಮಿತಿಯನ್ನು ಎತ್ತಿ ಹೇಳದ ಮತಧರ್ಮವಿಲ್ಲ. ಇಂದ್ರಿಯ ಲಂಪಟತೆಯು ವ್ಯಕ್ತಿಗೂ ಗುಂಪಿಗೂ ತಪ್ಪದೆ ಹಾನಿಕರ. ಅದೇ ಸ್ವಾಚ್ಛಂದ್ಯ. ಸ್ವಾಚ್ಛಂದ್ಯವು ಹಿಂಸಾಕೃತ್ಯಗಳ ಪ್ರೇರಕ; ಅದು ಸಂಪೂರ್ಣ ಅಧರ್ಮ; ಕಾಮ-ಕ್ರೋಧಾದಿ ಆರು ಹಗೆಗಳ ತಂದೆ. ಅದರಿಂದಲೇ ರಾಜನಾಗಲಿ (ಸರಕಾರವೆನಿಸಿಕೊಂಬ ರಾಜಪುರುಷ-ಸ್ತ್ರೀವರ್ಗವಾಗಲಿ) ಪ್ರಜೆಗಳಾಗಲಿ, ಸಮಾಜಕಂಟಕರೆನಿಸಿ ಆ ಮೂಲಕ ಸ್ವಹಿತಕಂಟಕರಾಗುವುದು. ಅದು ಎಲ್ಲ ಪಾಪ, ತಪ್ಪು, ಅಪರಾಧ, ದೌರ್ಬಲ್ಯ, ಅನ್ಯಾಯಗಳ ತಾಯಿ. ಭಾರತದಲ್ಲಿ ಅನೇಕ ರಾಜ್ಯ-ಸಾಮ್ರಾಜ್ಯಗಳು ಹಾಳಾದದ್ದು ಆಳುವವರು ಐಷಾರಾಮವೃತ್ತಿಗಿಳಿದಾಗ. ಆಳುವವರಿದ್ದಾಗಲೂ ಅರಾಜಕತೆ ಉಂಟಾಗಲು ಅವರ ವೈಯಕ್ತಿಕ ಅಥವಾ ಸಾಮೂಹಿಕ ಅತಿಭೋಗವೃತ್ತಿಯೇ ಕಾರಣ. ಆ ಪರಿಸ್ಥಿತಿಯಲ್ಲಿ ಪ್ರಜಾಶೋಷಣೆ ನಡೆಯುವಿರದು; ಧನಿಕ-ದರಿದ್ರ ಭೇದ ಹೆಚ್ಚದಿರದು; ಅಲ್ಪಸಂಖ್ಯರು ಅತಿಧನಿಕ

ರಾಗಿ ಬಹುಸಂಖ್ಯರು ಅತಿದರಿದ್ರರಾದಾಗ ಸಮಾಜವು ಅಸ್ತವ್ಯಸ್ತವಾಗಿ ರಾಜ್ಯವು ವಿದೇಶೀಯರ ಅಥವಾ ಸ್ವದೇಶೀಯ ಆಕ್ರಾಮಕರ ದಾಳಿಗೆ ತುತ್ತಾಗದಿರದು.[೭] ನಮ್ಮ ಧರ್ಮ ಹಾಗೂ ತತ್ವಗ್ರಂಥಗಳು ಮೇಲಿಂದ ಮೇಲೆ ಕಾಮ-ಕ್ರೋಧಾದಿ ಷಡ್ರಿಪುಗಳನ್ನೂ ಅತ್ಯಾಶೆಯನ್ನೂ ವಿಷಯಲಂಪಟತೆಯನ್ನೂ ನಿಂದಿಸುವ ಭರದಲ್ಲಿ ಗಡಿಮೀರಿ ನಿರಾಶಾವಾದವನ್ನೋ ನಿಷ್ಪ್ರಪಂಚತೆಯನ್ನೋ ನಿಷ್ಕ್ರಿಯತೆಯನ್ನೋ ನಿರ್ವೀರ್ಯತೆಯನ್ನೋ ಎತ್ತಿ ಹಿಡಿದು ಪ್ರತಿಪಾದಿಸಹೋದುದೂ ಹಾಗೆ ಹೋದಂತೆ ತೋರುವುದೂ ನಮ್ಮ ಹವಾಮಾನದಲ್ಲಿ ಹುಟ್ಟಿ ಬೆಳೆದ ಜನರ ಭೋಗಪರವಶತೆಯನ್ನು ಪ್ರಕಟಿಸುವ ಮಹಾಭಾಷ್ಯವೆನ್ನಬಹುದು. ಪಾತಂಜಲಯೋಗದರ್ಶನವು ಚಿತ್ತವೃತ್ತಿಯನ್ನು ನಿರೋಧಿ

---

೭ ‘ Inequality there has always been in history all over the world but whenever the contrasts of wealth have been excessive and the ruling classes have neglected the building up of the prosperity and happiness of the middle-classes as well as of the peasantry and workers, the future of nations has been invariably threatened. ’

—*Sardar K. M Pannikkar*

ಸಲು ಹೇಳಿದ್ದಾದರೂ ಮೇಲಿನ ದೃಷ್ಟಿಯಿಂದಲೇ ಎಂಬುದು ನಿರ್ವಿವಾದವಾದುದು.

ಮನುವಿನ ಸ್ಮೃತಿಯ ಐತಿಹಾಸಿಕ ಯುಗದಲ್ಲೇ ಇದ್ದ ಬುದ್ಧನು ಹೇಳಿದ ಪಂಚಶೀಲಗಳಾದ ಅಹಿಂಸೆ, ಅಸ್ತೇಯ, ಬ್ರಹ್ಮಚರ್ಯ, ಸತ್ಯ, ಮದ್ಯನಿಷೇಧಗಳಿಗೂ ಮೇಲೆ ಹೇಳಿದ ಧರ್ಮಪಂಚಾಂಗಗಳಿಗೂ ಎಷ್ಟು ಹತ್ತಿರದ ಹೋಲಿಕೆಯಿದೆ ! ಎಂಬುದು ಸುಸ್ಪಷ್ಟ; ಮನುಮತಕ್ಕೆ ಬುದ್ಧಮತ ಅನುಮತವಾಗಿರುವುದು ಸುವೇದ್ಯ. ಆ ಯುಗದ ವಿಚಾರಮಥನದಿಂದ ಬೇರೆ ಬೇರೆ ಚಿಂತಕಮಂಡಲ ಗಳಲ್ಲಿ ಇದೇ ಮೇರೆಗೆ ಧರ್ಮಸಾರದ ಬಗ್ಗೆ ಏಕಮತ ವುಂಟಾದದ್ದು ಭಾರತೀಯ ಸಂಸ್ಕೃತಿಯ ಮೂಲಸೆಲೆ ಒಂದೇ ಎಂಬುದಕ್ಕೆ ನಿದರ್ಶನ. ಇಂದು ಭಾರತದ ಧೋರಣೆಯೆಂದು ಹೆಸರಾಗಿರುವ (೧) ರಾಷ್ಟ್ರಸ್ವಾಮ್ಯ ಮತ್ತು ಪ್ರದೇಶಪ್ರಭುತ್ವ ಆಯಾ ರಾಷ್ಟ್ರಕ್ಕಿದೆ ಎಂದು ಮನ್ನಿ ಸುವುದು; (೨) ರಾಷ್ಟ್ರಗಳು ಪರಸ್ಪರ ಆಕ್ರಮಣಕ್ಕೆಳಿ ಯದಿರುವುದು; (೩) ಅನ್ಯರಾಷ್ಟ್ರಗಳ ಒಳವ್ಯವಹಾರ ಗಳಲ್ಲಿ ಕೈಹಾಕದಿರುವುದು; (೪) ಪರಸ್ಪರ ಸಮಾನತೆ ಯಿಂದ ರಾಷ್ಟ್ರಗಳು ಪರಸ್ಪರ ಪ್ರಯೋಜನಕ್ಕಾಗಿ ದುಡಿಯು ವುದು; (೫) ರಾಷ್ಟ್ರಗಳು ಪರಸ್ಪರ ಶಾಂತ ಸಹಜೀವನ ನೀತಿಯನ್ನು ಹಿಡಿಯುವುದು — ಎಂಬ ಪಂಚ ಶೀಲಗಳು ವ್ಯಕ್ತಿಯ ಸ್ಥಾನದಲ್ಲಿ ರಾಷ್ಟ್ರವನ್ನಿಟ್ಟು ಅಳವಡಿಸಿದಂಥವು.

ನಿಮ್ಮ ಮನೆಯಲ್ಲಿ ನಿಮಗಿರುವ ಸಾರ್ವಭೌಮ ಅಧಿಕಾರವನ್ನೂ ನಿಮ್ಮ ನೆಲದ ಮೇಲಿನ ನಿಮ್ಮ ಒಡೆಯತನವನ್ನೂ ನಾನು ಗೌರವಿಸುತ್ತೇನೆ, ಒಪ್ಪುತ್ತೇನೆ ಎಂಬುದು ನಾನವನ್ನು ಕಸಿದುಕೊಳ್ಳಬರುವುದಿಲ್ಲ ಎಂಬ ಅಸ್ತೇಯವ್ರತಅಥವಾ ಹಾಗೆ ಕದ್ದು ಕಸಿದು ಹಿಂಸಿಸುವುದಿಲ್ಲ ಎಂಬ ಅಹಿಂಸಾವ್ರತ. ಅನಾಕ್ರಮಣಶೀಲವೂ ಅಹಿಂಸೆ - ಅಸ್ತೇಯಗಳ ಸ್ವರೂಪದ್ದೇ. ಅನ್ಯರ ಮನೆಯ ಆಂತರಿಕ ವ್ಯವಹಾರದಲ್ಲಿ ಕೈಹಾಕೆನೆಂಬುದೂ ಹಾಗೇ; ಅಥವಾ ನಾನು ಬ್ರಹ್ಮಚಾರಿಯಂತೆ ಜಿತೇಂದ್ರಿಯನಾಗಿರುತ್ತೇನೆ, ಆತ್ಮಸ್ವದಲ್ಲಿಯೇ ರಮಿಸುತ್ತೇನೆ, ಪರರ ಪದಾರ್ಥಗಳನ್ನು ಭೋಗಿಸ ಹೋಗೆನು ಎಂಬ ವ್ರತವೂ ಆದೀತು; ಇಂದ್ರಿಯೋತ್ತೇಜಕವಾದ ಮದ್ಯಾದಿಗಳನ್ನುಳಿದು ಶುಚಿವ್ರತದಲ್ಲಿರುತ್ತೇನೆ ಎಂದೂ ಆಗಬಹುದು. ತನ್ನಂತೆಯೇ ಪರರೆಂಬ ಸಮಾನಶೀಲತೆಯಿಂದ ಪರಸ್ಪರರ ಸ್ವಾತಂತ್ರ್ಯವನ್ನು ಭಂಗಗೊಳಿಸಹೋಗದಿರುವುದೂ ಅಹಿಂಸಾವ್ರತವೇ, ಅಭಯ ವ್ರತವೇ, ದಯಾಧರ್ಮವೇ; ಪರೋಪಕಾರವೂ ದಯೆಯಲ್ಲೇ ಅಡಕವಾಗುತ್ತದೆ. ನನ್ನಷ್ಟಕ್ಕೆ ನಾನು ಶಾಂತನಾಗಿರುತ್ತೇನೆ, ನಿನಗೆ ಬದುಕಗೊಟ್ಟು ನಾನು ಬದುಕುತ್ತೇನೆ ಎಂಬುದಾದರೂ ಅಹಿಂಸಾವ್ರತದ

---

೮ (೧) ಜೀವಿತುಂ ಯಃ ಸ್ವಯಂಚೇಚ್ಛೇತ್ ಕಥಂ-
ಸೋಽನ್ಯಂ ಪ್ರಘಾತಯೇತ್ ।
ಯದ್ಯದಾತ್ಮನ ಇಚ್ಛೇತ ತತ್ಪರಸ್ಯಾಪಿ ಚಿಂತಯೇತ್ ॥
—ಮ. ಭಾ.

ಪ್ರಭೇದವೇ ಆಗುತ್ತದೆ.[೮] ಈಗ ಸೂಕ್ಷ್ಮವಾಗಿ ಪರಾಮರ್ಶಿಸಿದರೆ ಕೊನೆಯ ನಾಲ್ಕು ಧರ್ಮಾಂಗಳು ಮೊದಲಿನದಾದ ಅಹಿಂಸಾಂಗದ ವಿವಿಧ ಅವತಾರಗಳು ಎಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ಮನುಧರ್ಮ ಎಂದರೆ ಅಹಿಂಸೆ; ಮಾನವತೆ — ಮಾನವೀಯತೆಗಳೆಂದರೂ ಅಹಿಂಸೆ. ಅಹಿಂಸೆಯೇ ಸತ್ಯ; ಸತ್ಯವೆಂದರೆ ಇರುವಿಕೆ : ಅಹಿಂಸೆಯಿಲ್ಲದಲ್ಲಿ ಬದುಕಿಲ್ಲ! ಮಾನಸ ಶಾಸ್ತ್ರೀಯವಾಗಿ ಪರಹಿಂಸಾ ಕಾರ್ಯವು ಸ್ವಹಿಂಸೆಯಾಗಿ ಅಂತ್ಯದಲ್ಲಿ ಪರಿಣಮಿಸದೆ ಎಂದೂ ಉಳಿಯದು. ಆದುದರಿಂದ ಹಿಂಸೆಯು ಅಸ್ತಿತ್ವಕ್ಕೆ ಅಥವಾ ಬಾಳಿಗೆ ವಿರುದ್ಧ. ಅಪೂರ್ಣವಾಗಿಯಾದರೂ ಮಾನವರ ಜೀವನವು ಸತತಧಾರೆಯಿಂದ ಮುಂಬರಿಯುತ್ತ ಬಂದಿರುವುದು ಈ ಅಹಿಂಸಾರೂಪದ ದೃಢತರ ಸತ್ಯದಿಂದಲೇ.[೯] ಅಹಿಂಸೆಯೆಂದರೆ ಮೂಲಭೂತವಾದ ಸತ್ಯ ಎಂದಾದ ಮೇಲೆ ಅದು ದೇವರಲ್ಲದೆ ಇನ್ನೇನಾದೀತು? ದೇವರಿಂದಲೇ ಜಗತ್ತು ನಡೆಯುತ್ತದೆ ಎಂದರೂ ಒಂದೇ;

---

೮ (೨) ಅಹಿಂಸಾ ಸತ್ಯಮಕ್ರೋಧಸ್ತ್ಯಾಗಃ ಶಾಂತಿರಪೈಶುನಂ।
ದಯಾ:ಭೂತೇಷ್ವಲೋಲುಪ್ತ್ವಂ ಮಾರ್ದವಂ ಹ್ರೀರಚಾಪಲಂ॥
ತೇಜಃ ಕ್ಷಮಾಧೃತಿಃ ಶೌಚಂ ಅದ್ರೋಹೋ ನಾತಿಮಾನಿತಾ।
ಭವಂತಿ ಸಂಪದಂ ದೈವೀಂ ಅಭಿಜಾತಸ್ಯ ಭಾರತ॥

—ಭ. ಗೀ.

೯ 'ಸತ್ಯೇನ ವಿಧೃತೋ ಲೋಕಃ ಸರ್ವಂ ಸತ್ಯೇ ಪ್ರತಿಷ್ಠಿತಂ'

—ಮ. ಭಾ.

ಸತ್ಯದಿಂದಲೇ ಸರ್ವವೂ ಸಾಗುತ್ತದೆ ಎಂದರೂ ಒಂದೇ; ಅಹಿಂಸೆಯಿಂದಲೇ ಬದುಕು ಬದುಕಿದೆ ಎಂದರೂ ಅಷ್ಟೇ — ಅದೇ ದೇವರು, ಅದೇ ಧರ್ಮ ಎಂದರೂ ಅಷ್ಟೆ! ದೇವವಾದಿಗಳಿಗೂ ದೇವವಿರೋಧಿಗಳಿಗೂ ಇಲ್ಲಿ ಯಾವ ತಕರಾರು ಉಳಿದೀತು?

ಸಾಮಾನ್ಯ ಧರ್ಮಗಳು ಎಷ್ಟು ಮಾನ್ಯ ಎಂಬುದನ್ನೀಗ ಕಂಡ ಹಾಗಾಯಿತು. ಅವು +ಬಾಳಿಗೆ ನೀರು - ಗಾಳಿ - ಬೆಳಕುಗಳಷ್ಟು ಆವಶ್ಯಕ. ಆದುದರಿಂದಲೋ ಏನೋ ಅವೀಗ ಬಹಳ 'ಸಾಮಾನ್ಯ' (ಸಸಾರ) ವಾಗಿ ಹೋಗಿಬಿಟ್ಟಿವೆ. ಸಾಮಾನ್ಯರಿಗಿಂತ ಅಲ್ಲವೆಂದು ಒಮ್ಮೆ ಹೇಳಿದರೂ ಸಾಮಾನ್ಯರಷ್ಟೇ ಆದರೂ ನಮ್ಮ ಕೆಲ ಮಾನ್ಯರಿಂದು ಅವನ್ನು ಅಸಾಮಾನ್ಯವೆಂದು ಆಗೀಗ ದೂರ ಇಡುತ್ತಾರೆ, ಮಹಾತ್ಮರಿಗಷ್ಟೇ ಮೀಸಲೆನ್ನುವಂತೆ ವರ್ತಿಸುತ್ತಾರೆ!

+ p. 39. [illegible]

p. 68. The capacity to tolerate [illegible] difference [illegible]

ರಾಜಧರ್ಮ

ಮನುವಿನ ವಿಶೇಷಧರ್ಮಗಳಲ್ಲಿ ರಾಜಧರ್ಮದತ್ತ ಈಗ ಹೊರಳೋಣ. ಏಕೆಂದರೆ ಅದು ನಾಯಕ ಧರ್ಮ. 'ಯಥಾ ರಾಜಾ, ತಥಾ ಪ್ರಜಾಃ' ಎಂಬುದು ಇಂದಿಗೂ ಸಲ್ಲುತ್ತದೆ.[೧೦] ಪ್ರಜಾಪ್ರಭುತ್ವದಲ್ಲಿಂದು ಪ್ರಜಾಪ್ರತಿನಿಧಿಗಳೇ ರಾಜರು, ನಾಯಕರು -- ಜನರಿಗೆ. . ಜನರು ತಮ್ಮನ್ನು ತಾವೇ ಆಳಿಕೊಳ್ಳಲಾರರು, ಅವರಿಗೆ ನೇತೃವೇ ನೇತ್ರ; ರಾಜ ಬೇಕು, ಸರಕಾರ ಬೇಕು, ಶಾಸಕರು ಬೇಕು — ಎಂದು ಅಂದೇ ಮನು ಹೇಳಿದ (VII—3); ಅರಾಜಕ ಪರಿಸ್ಥಿತಿಯಲ್ಲಿ ಬಲಿಷ್ಠರು ದುರ್ಬಲರನ್ನು ಶೋಷಿಸದೆ ಇರರು, ದೊಡ್ಡ ಮೀನು ಸಣ್ಣದನ್ನು ನುಂಗುವ ಮಾತ್ಸ್ಯ ನ್ಯಾಯ ರೂಢವಾದೀತು — ಎಂದ. (Law of the Jungle) — ಕಾಡಿನ ಕಾಯದೆ ರೂಢಿಗೆ ಬಾರದಂತೆ

---

೧೦ ಯದ್ಯದಾಚರತಿ ಶ್ರೇಷ್ಠಸ್ತತ್ತ ದೇವೇತರೋ ಜನಃ ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥

—ಭ. ಗೀ.

ತಡೆಯಬೇಕಾದರೆ ಧರ್ಮಜ್ಞನೂ ಆಚಾರಶೀಲನೂ ಆದ ಪ್ರಭು ಬೇಕೇಬೇಕು. ನಾಗರಿಕತೆಯ ಗರತಿತನವನ್ನು ಕಾಯುವ ಗಂಡರೆಂದರೆ ಶಾಸಕರು. ಅವರು ವೇದವೇತ್ತ ರಾಗಿರಬೇಕು. ಅರ್ಥಾತ್ ಕಾಯದೆ (ನೀತಿ) ಪಂಡಿತ ರಾಗಿರಬೇಕು; ದಂಡನೀತಿಜ್ಞರಾಗಿರಬೇಕು ಅರ್ಥಾತ್ ಯಾವ ಅತಿಗೂ ಒಲೆಯದೆ ಹದಿನಾರಾಣೆ ನ್ಯಾಯವನ್ನು ರಾಜಕೀಯ, ಆರ್ಥಿಕ, ನ್ಯಾಯಾಂಗೀನ ಕ್ಷೇತ್ರಗಳಲ್ಲಿ ಪ್ರಜೆಗಳಿಗೆ ದೊರಕಿಸಿ ಕೊಡುವ ತಜ್ಞ ಆಡಳಿತಗಾರರಾಗಿರ ಬೇಕು; ಕೃತ್ಯಾಕೃತ್ಯ ವಿವೇಕವನ್ನು ನಿರ್ಧರಿಸುವ ಬುದ್ಧಿ ವೈಶದ್ಯವನ್ನು ಬೆಳೆಯಿಸಿ ಕೊಡುವ ಧರ್ಮ್ಯವಾದ ತರ್ಕ ಶಾಸ್ತ್ರದ ರೀತಿ - ನೀತಿ - ವಿವರ - ವಿಜ್ಞಾನಗಳನ್ನು ಕಲಿತವ ರಾಗಿರಬೇಕು; ಆತ್ಮಸ್ವರೂಪವನ್ನು ಅರಿತುಕೊಳ್ಳುವ ವಿದ್ಯೆ ಅವರಿಗೆ ಗೊತ್ತಿರಬೇಕು ಅರ್ಥಾತ್ ತಮ್ಮ ಅಂತರ್-ಬಾಹ್ಯ ಶಕ್ತಿಗಳ ಸದ್ಯದ ಅಳತೆಯನ್ನೂ ಅವು ಸಾಧಿಸಬಹುದಾದ ಅತ್ಯುನ್ನತ ಆದರ್ಶಮಾನವನ್ನೂ ಅರಿತವರಾಗಿರಬೇಕು. ಕೃಷಿ - ಪಶುಪಾಲನ - ವಾಣಿಜ್ಯರೂಪದ ವಾರ್ತಾಶಾಸ್ತ್ರ- ವನ್ನು ಅರ್ಥಾತ್ ಮನುಷ್ಯರ ಜೀವನಕ್ಕೆ ಸಾಧನಗಳಾದ ವಿವಿಧ ಉದ್ಯಮ - ಉದ್ಯೋಗ - ವೃತ್ತಿಗಳ ವಿವರಪೂರ್ಣ ಪಾಂಡಿತ್ಯವನ್ನು ತಿಳಿದುಕೊಂಡಿರಬೇಕು. ಇದು ಮನು ಹೇಳಿದ ರಾಜಶಿಕ್ಷಣ. ನಮ್ಮ ಪ್ರಜಾಪ್ರತಿನಿಧಿಗಳ Qualifications ಯೋಗ್ಯತೆಗಳೆಂತಿರಬೇಕು ? ಎಂಬು

ದನ್ನು ಮನುವಿನ ಈ ಮಾತಿನಲ್ಲಿ ನಾವು ಕಂಡುಕೊಳ್ಳಬಹು ದಲ್ಲವೇ ? ಅನರ್ಹರಾದ ಶಾಸಕರು (ಪ್ರಜಾಕ್ರೋಧಕ್ಕೆ ತುತ್ತಾಗಿ) ಸರ್ವನಾಶಹೊಂದುತ್ತಾರೆ ಎಂಬ ಅಭಿಪ್ರಾಯ ವನ್ನವ ಸೂಚಿಸಿರುವುದು ಪ್ರಜಾಪ್ರಭುತ್ವಕ್ಕೆ ಅನುಗುಣವಾದ ಮಾತು (VII—40, 41). ದುಃಶಾಸಕರನ್ನೂ ದುರಧಿ ಕಾರಿಗಳನ್ನೂ ಮನೆಗೆ ಕಳಿಸದಿರುವುದು ಅಧರ್ಮವೆಂಬ ಅಂಶವಿದರಿಂದ ಹೊರಡುತ್ತದೆ. ಒಂದೇ ಮಾತಿನಲ್ಲಿ ಮನು ಮತವನ್ನಿಡುವುದಾದರೆ Philosopher-Kings — ತತ್ವಜ್ಞ ಶಾಸಕರೇ ನಿಜವಾದ ಶಾಸಕರು ಎನ್ನಬೇಕು; ಉಳಿದವರು ಅಲ್ಪಾರ್ಹರು, ಅನರ್ಹರು.

ಅಹಿಂಸೆಯನ್ನಾಧರಿಸಿದ್ದು ಸತ್ಯ, ನ್ಯಾಯ. ಅದು ಶಾಸ್ಯ - ಶಾಸಕವರ್ಗಗಳೆರಡರ ಹಿತಕ್ಕೂ ಪರಮ ಸಾಧನ. ಅನ್ಯೂನ - ಅನತಿರಿಕ್ತ ಪ್ರಮಾಣದಲ್ಲಿ— ತಪ್ಪಿಗೆ, ಕಾಯಿದೆ ಭಂಗಕ್ಕೆ ತಕ್ಕ ಅರ್ಥಾತ್ ಹೆಚ್ಚೂ ಆಗದ ಹಾಗೂ ಕಡ ಮೆಯೂ ಆಗದ — ಶಿಕ್ಷೆಯನ್ನು ವಿಧಿಸುವುದು ರಾಜ ಧರ್ಮದ ಆತ್ಮ (VII—25). ಕಾರ್ಯಾಂಗದ ಅಧಿ ಕಾರಿಗಳು ಉಗ್ರದಂಡರೂ ಆಗಬಾರದು, ಶಿಥಿಲದಂಡರೂ ಆಗಬಾರದು. ಇದೇ ಶಿಕ್ಷಣನ್ಯಾಯ, ಕಾಲಾಂತರದಲ್ಲಿ ಹಿತವನ್ನು ಉಂಟುಮಾಡುವ ಅಹಿಂಸಾಬುದ್ಧಿ. ಈ ಬಗೆಯ ಅಹಿಂಸಾತ್ಮಕ ಆಡಳಿತವೇ ದಕ್ಷ ಆಡಳಿತವಲ್ಲವೇ ? ದಂಡನೆಯು Preventive ಉತ್ತರವನ್ನು ಕಾಯುವೆಬದ್ದ,

ವಲ್ಲದ ವರ್ತನೆಗಳಿಗೆ ವಿಮುಖರಾಗುವಂತೆ ಮಾಡುವ ಲಕ್ಷಣವುಳ್ಳದ್ದಾಗಿರಬೇಕು ಎಂಬುದೂ ಸೂಚ್ಯವಾಗಿದೆ (VIII—279) . ಅದಕ್ಕೂ ಹೆಚ್ಚಾಗಿ ಆಯಾ ವ್ಯಕ್ತಿಗಳ ಸಂಸ್ಕೃತಿಯ ಮಟ್ಟವನ್ನೂ ತಪ್ಪಿನ ಗುರುತ್ವ-ಲಘುತ್ವವನ್ನೂ ಲೋಕಸಿದ್ಧ ನಾಗರಿಕ ನೀತಿಯ ದೃಷ್ಟಿಯಲ್ಲಿ ಅಳೆದು ನೋಡಿ ದಂಡ್ಯರನ್ನು ದಂಡಿಸಬೇಕು ಎಂಬುದು ಸ್ಪಷ್ಟವಾಗಿ ಮನುಸ್ಮೃತಿಯು ಧ್ವನಿಸುತ್ತದೆ ಎನ್ನಬಹುದು. ಇದು ಇಂದಿನ ಭಾರತ ಕಲಿಯಬೇಕಾದ ಪಾಠ.

ಮಂತ್ರಿಗಳೇ ಮೊದಲಾದ ಅಧಿಕಾರಿಗಳ ಆಯ್ಕೆಯಲ್ಲಿ ಇಟ್ಟುಕೊಳ್ಳಬೇಕಾದ ಅರ್ಹತೆಯ ಮಾನದಂಡವೂ ಗಣ್ಯವಾಗಿದೆ (VII—54). ಅವರ ಪ್ರಾಮಾಣಿಕತೆ ಹಾಗೂ ದಕ್ಷತೆಗಳು ಸುಪರೀಕ್ಷಿತವಾಗಿರಬೇಕು. ಮನು ಮನೋಧರ್ಮದ ಯುಗಕ್ಕೆ ಸೇರಿದ ಕೌಟಿಲ್ಯನು ಬಹಳ ಮಾರ್ಮಿಕವಾಗಿ ಉಚ್ಚಾಧಿಕಾರಿಗಳ ಅರ್ಹತಾಪರೀಕ್ಷೆಗಳನ್ನು ವಿವರಿಸಿದ್ದಾನೆ. ಇದು ಕೂಡ ಆಧುನಿಕ ಭಾರತವು ಅರಗಿಸಿಕೊಳ್ಳಬೇಕಾದ ಅಂಶ. ಏಕೆಂದರೆ ಆಯಾ ಅಧಿಕಾರಿಗಳು ಅವರವರ ಸ್ವಧರ್ಮವನ್ನು (ಸ್ವಕರ್ತವ್ಯವನ್ನು) ಚಾಚೂ ತಪ್ಪದೆ ಸಮರ್ಥವಾಗಿ ನಿರ್ವಹಿಸಿಕೊಂಡು ಹೋದರೆ ಮಾತ್ರ ಸ್ವರಾಜ್ಯದ ಗುರಿಯಾದ ಸುರಾಜ್ಯ ಸ್ಥಾಪನೆ ಶಕ್ಯ. ಪದ್ಯದಲ್ಲಿ ಅತ್ಯುತ್ತಮ ಪದಗಳು ಅತ್ಯುತ್ತಮ ಕ್ರಮದಲ್ಲಿ ಬದ್ಧವಾಗಿರಬೇಕು ಎಂಬ ವಾತ್ರಿನಂತೆಯೇ

ಸರಕಾರದಲ್ಲಿ ಅತ್ಯುತ್ತಮರು (ಸಾಂಸ್ಕೃತಿಕ ಶ್ರೀಮಂತಿಕೆಯುಳ್ಳ ಕುಬೇರರು ಅಥವಾ ಪುರುಷೋತ್ತಮರು) ಅತ್ಯುತ್ತಮ ಕ್ರಮದಲ್ಲಿ ನಿಯುಕ್ತರಾಗಿರಬೇಕು ಎಂಬುದು ಮನು ಹೃದಯ. ನವಭಾರತವೀಮಾತಿಗೆ ಎರಡಾಡೀತೇ ?

ಕೆಲವೆಡೆ ಇಂದು ಕಂಡು ಬರುವ ಜವಾಬುದಾರಿ ಸರಕಾರದ ಬೇಜವಾಬುದಾರಿಯನ್ನು ಟೀಕಿಸಲೋ ಎಂಬಂತೆ ದಂಡನೀಯರಿಗೆ ತಕ್ಕ ದಂಡನೆಯನ್ನು ಶಾಸಕರು ವಿಧಿಸದೆ ಹೋದರೆ ಅಪರಾಧಿಗಳ ಪಾಪವು ದಂಡನಾಧಿಕಾರಿಗಳಾದ ಶಾಸಕರಿಗೆ ಲೇಪಿಸುತ್ತದೆ ಎನ್ನುತ್ತಾನೆ ಮನು (VIII—316). ಅಪ್ರಾಪ್ತರ (ಅಪ್ರಾಪ್ತ ವಯಸ್ಕರ) ಅಪರಾಧಕ್ಕೆ, ಅಬಲೆಯರ ತಪ್ಪಿಗೆ ಅವರ ಪಾಲಕರು ದಂಡ ತೆರಬೇಕೆಂಬುದು ಇಂದೂ ರೂಢಿಯಲ್ಲಿರುವಾಗ ಪ್ರಜೆಗಳ ತಪ್ಪುಗಳಿಗೆ ಪ್ರಜಾಪಾಲಕರಾದ ನ್ಯಾಯ - ಕಾರ್ಯ - ಶಾಸನಾಂಗಗಳ ಮುಖ್ಯರೇ ಆತ್ಯಂತಿಕ ಹೊಣೆಗಾರರು ಎಂಬ ಧರ್ಮರಹಸ್ಯವು ಅಭೇದ್ಯವಲ್ಲವೇ ? ಸರಕಾರವೊಂದು ಪ್ರಚಾರೋಪದೇಶದ ಸಂಸ್ಥೆ ಎಂಬ ತಪ್ಪು ತಿಳಿವಳಿಕೆ ಅಳಿದ ಹೊರತು ಸರಕಾರಸ್ಥರು ಉಕ್ತ ಧರ್ಮರಹಸ್ಯವನ್ನು ಅರಗಿಸಿಕೊಳ್ಳಲಾರರು; ' ರಚನಾತ್ಮಕ ಟೀಕೆ ಬೇಕು, ವಿಘಾತಕ ಟೀಕೆ ಬೇಡ ' ಎಂದು ಮಂತ್ರಾಗಿ ಬಡಬಡಿಸುವುದನ್ನು ಬಿಡಲಾರರು; ಅಂತಹ ಗಳಹುವ ಅಭ್ಯಾಸವನ್ನು ಬಿಟ್ಟ ಹೊರತು ಅವರು ಸುಧಾರಿಸಲಾರರು.

ನ್ಯಾಯವಾಗಿ ಶಿಕ್ಷೆಗೆ ಗುರಿಯಾದವರು ಪುನಃ ಅಂಥ ಶಿಕ್ಷಾರ್ಹವಾದ ತಪ್ಪುಗಳನ್ನು ಮಾಡದೆ ಉಳಿಯಬೇಕಾದರೆ ಮನುವಿನ ಮನಃಶಾಸ್ತ್ರಜ್ಞಾನವು ನಮ್ಮ ಕಾರ್ಯ-ನ್ಯಾಯಾಂಗಸ್ಥರಿಗಿರುವುದು ಅತ್ಯಗತ್ಯ. ಕಳ್ಳನೆಂದು ಕೋರ್ಟು ತೀರ್ಪಿತ್ತ ಬಳಿಕ ರಾಜನು (ನ್ಯಾಯಾಧಿಕಾರಿಯು) ಅವನ ತಲೆ ಬೋಳಿಸಿ ರಾಜಮಾರ್ಗದಲ್ಲಿ ಓಡಿಸಿಕೊಂಡು ಹೋಗಬೇಕು. 'ನಾನು ಇಂಥ ವಸ್ತುವನ್ನು ಕದ್ದೆ, ನಾನು ಮಾಡಿದ್ದು ಹೀಗೆ, ನನಗೆ ಶಿಕ್ಷೆಯನ್ನು ವಿಧಿಸಿರಿ' ಎನ್ನುತ್ತ ಕಳ್ಳನು ಹೆಗಲಮೇಲೆ ಒನಕೆಯನ್ನೋ ಬಡಿಗೆಯನ್ನೋ ಶಕ್ತ್ಯಾಯುಧವನ್ನೋ ಅಥವಾ ಎರಡೂ ತುದಿಗಳು ಚೂಪಾಗಿರುವ ಕಬ್ಬಿಣದ ಸರಳನ್ನೋ ಹೊತ್ತುಕೊಂಡು ಓಡಬೇಕು (VIII–314, 315). ಏಕೆ? ಅವನೇ ಅಪರಾಧಿ — ಎಂಬುದು ಸಮಸ್ತ ಜನರಿಗೂ ತಿಳಿದರೆ ಅವರು ಅವನಿಗೆ ಅಂಥ ಅಪರಾಧವನ್ನು ಮಾಡಲು ಮತ್ತೆ ಅವಕಾಶಕೊಡಲಾರರು; ಅವನಿ(ಳಿ)ಗಾದರೂ ಮರ್ಯಾದೆ ಕಳೆದುಕೊಂಬುದೆಂದರೇನೆಂಬುದು ಚೆನ್ನಾಗಿ ಅರ್ಥವಾಗಿ ಮತ್ತೆ ಅಂಥ ಅಧಾರ್ಮಿಕ ವರ್ತನೆಗೆ ಕೈಹಾಕಲು ಪರಿಣಾಮಕರವಾಗಿ ಹೆದರುತ್ತಾನೆ (ಳೆ). ಈ ಮಾದರಿಯಲ್ಲಿ ಸಾರ್ವಜನಿಕವಾಗಿ ಸಾರಿಕೊಂಡು ಹೋಗುವ ತಪ್ಪೊಪ್ಪಿಗೆಯನ್ನು ರೂಢಿಗೆ ತಂದ ಹೊರತು ಭಾರತದಲ್ಲಿಂದು ಮೋಸಗಾರಿಕೆಯ ಪ್ರಮಾಣ ಕಡಿಮೆಯಾಗದು. ಈ ವಿಧಾನವು ಅನಾಗರಿಕವೆನ್ನಲು

ಇಂದಿನ ಭಾರತಕ್ಕೆ ಅಧಿಕಾರವಿಲ್ಲ — ಎಂದು ಮನೋ-ವಿಜ್ಞಾನಿ ಹೇಳದಿರಲಾರ; ನ್ಯಾಯದ ನೀತಿಯು ವಾಸ್ತವಿಕ ಮಾನಸ ಶಾಸ್ತ್ರೀಯ ಸತ್ಯವನ್ನು ಎಂದೂ ಕಡೆಗಣಿಸಲಾರ.

ಸುಳ್ಳುಸಾಕ್ಷಿ ಹೇಳುವುದು ಸಾಮಾನ್ಯವಾಗುತ್ತ ಬಂದ ಇಂದಿನ ಭಾರತದಲ್ಲಿ ಅದು ಎಷ್ಟು ಅನಾಗರಿಕ ಎಂಬುದನ್ನು (VIII—44) ಸಿತ್ಯವೂ ಪ್ರಚಾರ ಮಾಡಿದರೂ ಕಡಮೆಯೇ ಸರಿ.[೧೧] ವಚನಭಂಗ, ಅನೃತವಾದ, ಅಪಲಾಪ, ಅಪ-ಸಮರ್ಥನೆಗಳು ವಿದ್ಯಾವಂತರಲ್ಲೂ ದಿನೇದಿನೇ ವೃದ್ಧಿಯಾಗು-ತ್ತಿರುವಾಗ ಇಂದಿನ ನಾಗರಿಕತೆ ಸದ್ಗತಿಯನ್ನು ಹೊಂದಬೇಕಾ-ದರೆ ಈ ಬಗೆಗೂ ಗೌರವಚ್ಯುತಿಯಾಗುವಂಥ ಶಿಕ್ಷಾ ಪದ್ಧತಿಯನ್ನು ಕೂಡಲೇ ಜಾರಿಗೆ ತರುವುದಗತ್ಯ.

ಅಂಗಹೀನರೇ ಮೊದಲಾದ ಅನಾಥರ ಹಾಗೂ ದುರ್ಬಲರಾದ ಬಾಲ - ವೃದ್ಧ - ಸ್ತ್ರೀಯರ ಸಂರಕ್ಷಣೆಗೆ

---

೧೧ ‘The false witness was punished by a fine (the amputation of a limb, according to Megasthanese) without prejudice to religious penalties.’

—*Louis Renou : The Civilization in Ancient India*

ವಿಶೇಷ ವಿಧಿಗಳನ್ನು ಧರ್ಮಶಾಸ್ತ್ರಗಳಲ್ಲಿ ಕಾಣಬಹುದು (VIII—27, 149, 395). ಜೊತೆಗೆ ಆದರ್ಶ ಲೌಕಿಕ-(Gentleman) ಸಂಸ್ಕೃತ ಎಂದು ಅಂದು ಪ್ರಸಿದ್ಧನಾಗಿದ್ದ ಶ್ರೋತ್ರಿಯನಿಗೂ ಮನು ವಿಶೇಷ ಸಂರಕ್ಷಣೆಯನ್ನು ಹೇಳಿ-ದ್ದಾನೆ. ಇದೇಕೆ ? ಕೆಲವೆಡೆ ಸಭ್ಯತೆಯು ಆದರ್ಶಸೀಮೆಯು ಸಭ್ಯನನ್ನು (ಸಂಸ್ಕೃತನನ್ನು) ಅರಕ್ಷಿತತೆಗಿಳಿಸಬಹು-ದಾಗಿದೆ — ಸಭ್ಯತೆಗೆ ಬಗ್ಗದ ಜನ ಎದುರಾದಾಗ. ಮಹಾ ಕುಲೀನನಾದ ಆರ್ಯನಿಗೆ (ಸಂಸ್ಕೃತನಿಗೆ) ಇಂಥ ವಿಶೇಷ ರಾಜಾನುಗ್ರಹವನ್ನು ಆತ ಹೇಳಿದ್ದಾದರೂ ಉಕ್ತದೃಷ್ಟಿ ಯಿಂದಲೇ. ಈ ಸಂದರ್ಭವು ನಾಗರಿಕತೆಯು Effeminacy ಸ್ತ್ರೈಣತೆಯನ್ನು ಹೊರಗೆಡಹುತ್ತದೆ. ಸಂಸ್ಕೃತರು ಅಲ್ಪ ಸಂಸ್ಕೃತ ಅಥವಾ ಅಸಂಸ್ಕೃತರ ನಡುವೆ ಬಾಳುವೆ ಮಾಡು-ವಾಗ ದಾರಿದ್ರ್ಯಕ್ಕಿಳಿಯಬಹುದು, ಅಗೌರವಿತನಾಗಬಹುದು, ವ್ಯಾಧಿಗೆ ತುತ್ತಾಗಬಹುದು, ಅಂಗವಿಕಲತೆ ಹೊಂದಬಹುದು. ಹೀಗೆ ಭೌತಿಕ ಹಾಗೂ ಮಾನಸಿಕ ನಷ್ಟಕ್ಕೆ ಗುರಿಯಾ-ಗುವ ಸಂದರ್ಭವು ಸಾತ್ವಿಕರಿಗೆ ಬಹಳ ಎಂಬುದ ನ್ನರಿತ ಕಾರಣದಿಂದಲೋ — ಅಥವಾ ತಮ್ಮ ಆದರ್ಶ ಜೀವನಕ್ಕೆ ಲೋಕನಾಯಕರ ಮನ್ನಣೆಯಿಲ್ಲವೆಂದು ತಿಳಿದಾಗ ಸಂಸ್ಕೃತರು ಸಭ್ಯತೆಯ ಆದರ್ಶಗಳನ್ನು ಬಿಡುತ್ತ ಹೋಗ ಬಹುದು, ಅದನ್ನು ಕಂಡು ಅವರಿಗಿಂತ ಕನಿಷ್ಠರು ಮತ್ತಷ್ಟು ಕನಿಷ್ಠರಾಗುತ್ತ ಹೋಗಬಹುದು, ಇದೇ ಪ್ರಕ್ರಿಯೆ ಮುಂಬ-

ರಿದರೆ ಜನತೆ ಕೊನೆಯಲ್ಲಿ ಮಾತ್ಸ್ಯನ್ಯಾಯವನ್ನು ಅನುಸರಿಸಿ ಕ್ರಮಶಃ ನಾಶಹೊಂದುವ ಸ್ಥಿತಿಗಿಳಿಯಬಹುದು — ಇಲ್ಲವೆ ಸಂಸ್ಕೃತರು ಅನಾದರಕ್ಕೆ ಕೆರಳಿ ಪ್ರತೀಕಾರ ಮಾರ್ಗ ಹಿಡಿದರೆ ಅಸಂಸ್ಕೃತರಿಂದಾಗುವ ಸಾಮಾಜಿಕ ನಷ್ಟಕ್ಕಿಂತ ಹೆಚ್ಚಿನ ನಷ್ಟವು ಸಂಭವಿಸಬಹುದು ಎಂಬ ಕಾರಣದಿಂದಲೋ ಮನುವು ಪೂಜ್ಯರಾದ ಶ್ರೋತ್ರಿಯರನ್ನೂ ಆರ್ಯರನ್ನೂ ಮಹಾ ಕುಲೀನರನ್ನೂ ಸಮ್ಯಗನುಗ್ರಹಕ್ಕೆ ಪಾತ್ರರೆಂದು ದುರ್ಬಲರ ಪಟ್ಟಿಯಲ್ಲಿ ಸೇರಿಸಿದ್ದೆಂದು ತೋರುತ್ತದೆ. ಈ ದೃಷ್ಟಿಯಿಂದಲೇ ಬಹುಶಃ ಕಾಳಿದಾಸನು ತನ್ನ ರಘುವಂಶದಲ್ಲಿ ದೇವತಾವಿಶೇಷವಾದ ಕಾಮಧೇನುವನ್ನು ಸ್ವರ್ಗದಿಂದ ಭೂಮಿಗಿಳಿದು ಬರುವಾಗ ಹಾದಿಯಲ್ಲಿ ಅನ್ಯಕರ್ತವ್ಯ ಚಿಂತನದಲ್ಲಿ ಲೀನನಾಗಿದ್ದ ಕಾರಣದಿಂದ ನಮಸ್ಕರಿಸಲು ಮರೆತು ಅದರ ಶಾಪಕ್ಕೆ ದಿಲೀಪ ಮಹಾರಾಜನು ತುತ್ತಾದನೆಂದು ಹೇಳಿದ್ದಾನೆ. ಅವನ ಮನುಹೃದಯಜ್ಞತೆಯ ಪ್ರಕಾರ ಪೂಜ್ಯಪೂಜಾವ್ಯತಿಕ್ರಮವು ಸಮಾಜದ್ರೋಹ, ನಾಗರಿಕತೆಗೆ ಗಂಡಾಂತರವುಂಟುಮಾಡುವಂಥದು. ಇಲ್ಲಿ ನಾವು **Positive Social Virtue** — ವಿಧಾಯಕವಾದ ಸಾಮಾಜಿಕ ಶೀಲದ ಅತ್ಯನಿವಾರ್ಯತೆಯನ್ನು ಕಾಣಬಹುದು. ಅಪೂಜ್ಯರ ಪುರಸ್ಕಾರ, ಪೂಜ್ಯರ ತಿರಸ್ಕಾರ ಎಲ್ಲಿ ದಿನೇ ದಿನೇ ವರ್ಧಿಸುತ್ತ ಹೋಗುವುದೋ ಆ ದೇಶದ ಅವನತಿ ಕಟ್ಟಿಟ್ಟದ್ದು ಎಂಬ ಎಚ್ಚರಿಕೆಯನ್ನು ಮನು ಕೊಟ್ಟಿದ್ದಾನೆ

P 71 — How [illegible]
It is useless to pretend [illegible]
[illegible] social [illegible]!

ಎನ್ನಬಹುದು. ಆಧುನಿಕ ಭಾರತೀಯ ನಾಗರಿಕತೆಯಲ್ಲಿ ಆದರವುಳ್ಳ ಶಾಸಕರಿಗಿದು ಪರಮಪಾಠ. ಇಂದಿನ ಅರ್ಧ ಮಾರ್ಧ ಅರಾಜಕವಾದ ಸಾಮಾಜಿಕ ವರ್ತನೆಯ ದಿನಮಾನ ದಲ್ಲಿ ಪ್ರತಿಯೊಬ್ಬ ಪ್ರಜೆಯೂ ಈ ನಾಗರಿಕತೆಯ ಜೀವಾಳ ವನ್ನು ಶ್ರವಣ - ಮನನ - ನಿಧಿಧ್ಯಾಸಗಳಿಂದ ಆಚಾರದಲ್ಲಿ ತರುವುದಗತ್ಯ. ಇದು ಸಮಾಜಧರ್ಮದ ಪರಮ ರಹಸ್ಯ. ಸುಶೀಲರನ್ನು ಕಾಯೇನ ವಾಚಾ ಮನಸಾ ಸತ್ಕರಿಸುವುದೂ ದುಃಶೀಲರನ್ನು ಅದೇ ಪ್ರಕಾರ ದಂಡಿಸುವುದೂ ಸಾಂವಿಧಾನಿಕ, ಧರ್ಮಸಂಸ್ಥಾಪಕ ಎಂಬುದನ್ನು ಶಾಸಕರೂ ಶಾಸ್ಯರೂ ಹೃದ್ಗತಮಾಡಿಕೊಳ್ಳಬೇಕು. ಮನುವಿನ ಈ ಕೊಡುಗೆ ಅಮೂಲ್ಯ.

ಶ್ರೇಷ್ಠರ ಶ್ರೇಷ್ಠತೆ ಬೆಳೆಯುವಂತೆ ತನು - ಮನ - ಧನದಿಂದ ನೆರವಾಗುವುದು ಮತ್ತು ಕನಿಷ್ಠರ ಕನಿಷ್ಠತೆ ಅಳಿಯುವಂತೆ ಹಾಗೇ ಮನೋವಾಕ್ಕಾಯ ಕರ್ಮಗಳಿಂದ ಸತತವಾಗಿ ದುಡಿಯುವುದು ವ್ಯಷ್ಟಿ - ಸಮಷ್ಟಿಗಳೆರಡರ ಹಿತಕ್ಕೂ ಅಪರಿಹಾರ್ಯ ಎಂಬುದು ಮಾನಸಶಾಸ್ತ್ರೀಯವಾದ ವ್ಯಾವಹಾರಿಕ ಸತ್ಯ. " Eternal Vigilance is the price of Liberty ನಿತ್ಯವೂ ಮಾಡುವ ಪ್ರತ್ಯಕ್ಷವೀಕ್ಷಣ ಎಂಬುದು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ತರಬೇಕಾದ ಬೆಲೆ " ಎಂಬುದಕ್ಕಿಂತಲೂ " Eternal Vigilance is the price of Civilization — ನಾಗರಿಕತೆಯನ್ನುಳಿಸಿಕೊಳ್ಳಲು ನಾಗ

ರಿಕರ ನೀತಿ - ನಡತೆಗಳ ಮೇಲೆ ಸ್ವ-ಪರಭೇದವಿಲ್ಲದೆ ಎಲ್ಲರೂ ಸದಾ ಜಾಗರೂಕರಾಗಿ ನೋಡುತ್ತಿರುವುದು ನಾವು ಅನಿವಾರ್ಯವಾಗಿ ತೆರಬೇಕಾದ ಮಹಾಮೂಲ್ಯ" — ಎಂಬುದೇ ಹೆಚ್ಚೆನ್ನಬೇಕು. ಪೂಜ್ಯಪೂಜಾವ್ಯತಿಕ್ರಮವು ಪರೋಕ್ಷಾಪರೋಕ್ಷವಾಗಿ ಕ್ರಮೇಣ ಸರ್ವರ ಸರ್ವನಾಶಕ್ಕೆ ಹೇತು. ಪೂಜ್ಯರ ಅಸಂತೋಷವು ನಾಗರಿಕತೆಗೆ ಕೊಟ್ಟ ಶಾಪ; ಅಪೂಜ್ಯ ಜನರ ಸಂತೋಷವು ಆದರ ನಾಶಕ್ಕೆಂದು ಕೊಟ್ಟ ಬೆಂಕಿ. ಒಂದು ನಾಗರಿಕತೆಯು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಮಾಡಬೇಕಾದ ಮಹಾದೇವಪೂಜೆ ಯೆಂದರೆ ನಿಂದ್ಯಾನಿಂದ್ಯಗುಣವಿವೇಕವೇ. ಅಹಿಂಸೆಯು ಅನಿಂದ್ಯ, ಹಿಂಸೆಯು ನಿಂದ್ಯ; ಅಹಿಂಸಾಚಾರಪರರು ಸತ್ವ ದಿಂದ ಹುಟ್ಟಿದ ನಿಜವಾದ ಜ್ಞಾನವುಳ್ಳವರು,[೧೨] ಹಿಂಸಾ ಪರಾಯಣರು ತಮದಿಂದ ಹುಟ್ಟಿದ ಅಜ್ಞಾನ - ಜ್ಞಾನಭ್ರಾಸ ಗಳನ್ನುಳ್ಳವರು. ಅಹಿಂಸಾಸಿದ್ಧಿಯುಳ್ಳವರು ಶ್ರೋತ್ರಿ- ಯರು, ಕುಲೀನರು, ಆರ್ಯರು, ಸಂಸ್ಕೃತರು, ನಾಗರಿ- ಕರು; ಅವರ ಸಂರಕ್ಷಣೆಯೆಂದರೆ ಅಹಿಂಸಾಧರ್ಮದ ಸಂರಕ್ಷಣೆ, ನಾಗರಿಕತೆಯ ಸಂಗೋಪನ.

ಈ ಧೋರಣಕ್ಕನುಗುಣವಾಗಿ ಪ್ರಜೆಗಳು ತಮ್ಮ ತಮ್ಮ

---

೧೨ 'ಸತ್ವಾತ್ ಸಂಜಾಯತೇ ಜ್ಞಾನಂ'

—ಭ. ಗೀ.

ಧರ್ಮಗಳನ್ನು ತಪ್ಪದೆ ಪಾಲಿಸುತ್ತಿರುವಂತೆ ನೋಡಿಕೊಳ್ಳುವುದೇ ರಾಜಧರ್ಮದ ರಾಜಮಾರ್ಗ. ಕ್ರಿ. ಪೂ. ಮೂರನೆಯ ಶತಮಾನದಲ್ಲಿದ್ದ (ಮನು - ಬುದ್ಧ - ಕೌಟಿಲ್ಯ ಯುಗಕ್ಕೆ ಸೇರಿದ) ಅಶೋಕಚಕ್ರವರ್ತಿಯು ಪ್ರಜೆಗಳೆಲ್ಲರೂ ದಯಾ - ದಾನ - ಸತ್ಯ - ಪಾವಿತ್ರ್ಯ - ಮಾರ್ದವ - ಶಾಂತಿ - ಪ್ರಸಾದ - ಸಾಧುಶೀಲ - ಜಿತೇಂದ್ರಿಯತ್ವಗಳನ್ನು ಪಾಲಿಸುತ್ತಿರಬೇಕೆಂದು ಶಿಲಾಶಾಸನ ಕೊರೆಯಿಸಿದನು. ಸಂಸ್ಕೃತ ಸಾಹಿತ್ಯದಲ್ಲಿ ಬರುವ ಧೀರೋದಾತ್ತ ನಾಯಕರೆಲ್ಲರೂ ಮೇಲೆ ಹೇಳಿದ ಬಗೆಯ ಧರ್ಮಶೀಲರು, ಆದರ್ಶ ರಾಜರು. ಧರ್ಮಶಾಸ್ತ್ರಗಳು ವಾಚ್ಯವಾಗಿ ಉಪದೇಶಿಸಿದ್ದನ್ನು ಹೀಗೆ ಕವಿಗಳು ಕಲಾರೂಪದಲ್ಲಿ ಧ್ವನಿಸಿದರು; ಜೀವನ ಮತ್ತು ಲಲಿತವಾಙ್ಮಯಾದಿ ಕಲೆಗಳ ಸಹಕಾರವು ಹಿತಕರವಾದ ಆದರ್ಶಗಳನ್ನು ಜನರ ಮುಂದೆ ಕಡೆದು ನಿಲ್ಲಿಸಿ, ಅವರಲ್ಲವನ್ನು ಜನಪ್ರಿಯಗೊಳಿಸುತ್ತ ಬಂದುದರ ಫಲವಾಗಿಯೇ ಹಿತಾಹಿತವಿವೇಕವಿಂದು ನಮ್ಮಲ್ಲಿ ಇಷ್ಟಾದರೂ ಉಳಿಯುವಂತಾಗಿದೆ.[೧೩]

---

೧೩ ಆದಿರಾಜಯಶೋಬಿಂಬಂ ಆದರ್ಶಂ ಪ್ರಾಪ್ಯ ವಾಙ್ಮಯಂ ।
ತೇಷಾಮಸನ್ನಿಧಾನೇಽಪಿ ನ ಸ್ವಯಂ ಪಶ್ಯ ನಶ್ಯತಿ ॥

—ದಂಡಿ : ಕಾವ್ಯಾದರ್ಶದಲ್ಲಿ

ಯೋಧಧರ್ಮ

ರಾಜಧರ್ಮದಲ್ಲಿ ಧರ್ಮಯುದ್ಧದ ಪದ್ಧತಿಯನ್ನು ಹೇಳಿದವನೂ ಮನುವೇ. ಅಲೆಕ್ಸಾಂಡರನನ್ನು ಎದುರಿಸಿದ ಪುರೂರವನು ಈ ಯೋಧಧರ್ಮದವನಾಗಿದ್ದ. ಗುಪ್ತಾ-ಯುಧ, ವಿಷಲಿಪ್ತ ಆಯುಧ, ಜ್ವಾಲಾಮಯ ಆಯುಧ ಮುಂತಾದವುಗಳು ನಿಷಿದ್ಧ; ಷಂಢ, ಶರಣಾಗತ, ಹೆದರಿ ಓಡಿ ಹೋದವ, ನೋಟಕ, ನಿದ್ರಾಪರವಶ, ನಿಃಶಸ್ತ್ರ, ನಿಷ್ಕವಚ, ಅನ್ಯಾಸಕ್ತ, ಭಗ್ನಶಸ್ತ್ರ, ಆರ್ತ, ಭಯಗ್ರಸ್ತ, ಆಪದ್ಗತ ಮುಂತಾದವರೊಡನೆ ನಿಜಧೀರನು ಸೆಣಸಲು ಹೋಗಬಾರ ದೆಂದ ಮನುವಿಗೆ ಗೊತ್ತಿದ್ದಷ್ಟು ಮಾನವತೆ ಇಂದಿನ ನಮಗೆ ಗೊತ್ತಿದೆಯೇ ? ಧರ್ಮಯುದ್ಧದ ಅತಿರೇಕವೇ ಮಹಮ್ಮದ್ ಗೋರಿಗೆ ಜಯವನ್ನು ದೊರಕಿಸಿಕೊಟ್ಟ ಐತಿಹಾಸಿಕ ದೃಷ್ಟಾಂತವನ್ನು ನೆನೆದರೆ, ನಾಗರಿಕತೆಯ ಉಚ್ಚಮಟ್ಟದಲ್ಲಿ ತಲೆಹಾಕುವ ಸ್ತ್ರೈಣತೆಯ ಅಂಶವು ಪುನಃ ಕಣ್ಣಿಗೆದುರಾಗು-ತ್ತದೆ. ಈ ಸ್ತ್ರೈಣತೆಯು ಅವಿವೇಕ; ನಾಗರಿಕತೆಯು, ಸಂಸ್ಕೃತಿಯ ಆಭಾಸ ಎನ್ನದೆ ಗತ್ಯಂತರವಿಲ್ಲ. ' ಯೋ ದೇಶ - ಕಾಲ - ಕಾರ್ಯವ್ಯಪೇಕ್ಷೆಯಾ ಪಂಡಿತಃ

ಸ ಪುಮಾನ್ ' ಎಂಬ ಪಾತ್ರಾಪಾತ್ರವಿವೇಕದ ದೃಷ್ಟಿಯಿಲ್ಲದ ಕಾಲದಲ್ಲಿ ಇಂಥ ಧರ್ಮಾಭಾಸವು ಧರ್ಮವೆನಿಸಿ ಮನುಷ್ಯರ ಸೋಲಿಗೆ ಕಾರಣವಾಗುತ್ತದೆ. ಗಾಂಧಿಯವರು ಹುತಾತ್ಮ-ರಾದಾಗ ' It is dangerous to be too good " ಎಂದು ಬರ್ನಾಡ್ ಷಾ ಹೇಳಿದ ಹಾಗೆ, ' ಅತಿ ಸರ್ವತ್ರ ವರ್ಜಯೇತ್ ' ಅಲ್ಲವೆ? ವೈಯಕ್ತಿಕ ಹಿತಾಹಿತಗಳ ವಿವೇಕದ ಪ್ರಕಾರ ಅತಿಸಾತ್ವಿಕತೆಯು ಸಾಧುವೆನಿಸ ಬಹುದಾದರೂ ಸಮಷ್ಟಿಯಲ್ಲಿ ಬದುಕಬೇಕೆಂದಿರುವ ಎಲ್ಲ ವ್ಯಕ್ತಿಗಳ ದೃಷ್ಟಿಯಿಂದ ಎಷ್ಟೋ ವೇಳೆ ಕರ್ತವ್ಯಬದ್ಧ ವ್ಯಕ್ತಿಯೊಬ್ಬನ ಅಥವಾ ಗುಂಪೊಂದರ ಅತಿಸಾತ್ವಿಕತೆಯು ಲೌಕಿಕಮಾನದಲ್ಲಿ ಹಲವುಸಲ ಅಷ್ಟೊಂದು ಒಳಿತಿಗಾಗದು. ರಾಜಾದಿನಾಯಕರೇ ಇದಕ್ಕೆ ದೃಷ್ಟಾಂತ. ಅವರ ನೇತೃಧರ್ಮಕ್ಕದೊಮ್ಮೆ ವಿರುದ್ಧವಾದೀತು — ನೇಯರಿಗೆ ಹಾನಿ ಎನಿಸಿದಾಗ.

ಬಹೂದಯದಲ್ಲೇ ಸರ್ವೋದಯವಿರುವುದು ವ್ಯವ-ಹಾರ್ಯವಾದುದರಿಂದ ಧರ್ಮಾಧರ್ಮವಿವೇಚನೆಯಲ್ಲಿ ಸಮಷ್ಟಿದೃಷ್ಟಿಗೂ ವ್ಯಷ್ಟಿದೃಷ್ಟಿಗೂ ವಿರೋಧ ಬಂದಾಗ ಮೊದಲಿನದರ ಹಿತದೃಷ್ಟಿಗೆ ವಿರೋಧವುಂಟಾಗದಿರುವಂತೆ ನಡೆದುಕೊಳ್ಳುವುದು ಎರಡನೆಯದಕ್ಕೆ ನ್ಯಾಯಬದ್ಧವೆನಿಸು-ತ್ತದೆ; ವ್ಯಷ್ಟಿಯ ಅಭಿಪ್ರಾಯವನ್ನು ಸಮಷ್ಟಿ ಸ್ವೀಕರಿಸಿದಾಗ ಮಾತ್ರ ಇಂತಹ ತೊಂದರೆ ಉಂಟಾಗದು. ವ್ಯಕ್ತಿಯ

ಕಾರ್ಯಸ್ವಾತಂತ್ರ್ಯಕ್ಕೆ ಗಡಿಗೆರೆ ಎಳೆಯುವ ನಿಯಮವಿದು.[೧೪] ವ್ಯಕ್ತಿಯು ತನಗೆ ಕಂಡಂತೆ ವಿಚಾರಮಾಡಬಹುದು, ಅಂಥ ವಿಚಾರವನ್ನು ಅನಿರ್ಬದ್ಧವಾಗಿ ಉಚ್ಚಾರಮಾಡಬಹುದು. ಆದರೆ ಆಚಾರದಲ್ಲಿ ತನ್ನ ಸುತ್ತುಮುತ್ತಲಿನ ಮಹಾಭಾಗರ (Majority) ಬಗೆಗೆ ತಾನು ಮಾಡಬೇಕಾಗಿರುವ ಕರ್ತವ್ಯಕ್ಕೆ ಲೋಪ - ಆಗಮ - ಆದೇಶಗಳುಂಟಾಗದಂತೆ ನೋಡಿಕೊಳ್ಳುವುದು ಅಗತ್ಯವಲ್ಲವೇ ? ಸ್ವದೇಶದ ಹಿತಕ್ಕೆ ವಿರುದ್ಧವಾದುದು ಎಂದೂ ಸ್ವಧರ್ಮವಾಗದು.

---

೧೪ "Acts, of whatever kind, which without justifiable casue do harm to others may be, and in the more important cases absolutely require to be, controlled by the unfavourable sentiments, and, when needful by the active interference of mankind. The liberty of the individual must be thus far limited; he must not make himself a nuisance to other people."

—*John Stuart Mill : on Liberty.*

ಶ್ರದ್ಧಾಧರ್ಮ

ಧರ್ಮವನ್ನು ‘ಅಲೌಕಿಕೋಪಾಯ’ ಎಂದು ಭಾರತವು ಗ್ರಹಿಸಿದ್ದರ ಅರ್ಥವನ್ನು ಮನುವು ಸುಳ್ಳುಸಾಕ್ಷಿ ಹೇಳಬಾರದೆಂದು ವಿಧಿಸುವಾಗ (VIII—82) ಅರಿತುಕೊಳ್ಳಬೇಕಾಗುತ್ತದೆ. ಸುಳ್ಳು ಸಾಕ್ಷಿಗಾರನು ‘ವರುಣನ ಪಾಶದಿಂದ ಬದ್ಧನಾಗುತ್ತಾನೆ; ಹಾಗೆ ಅವನು ನೂರಾರು ಜನ್ಮಗಳವರೆಗೆ ವಿವಶನಾಗಿ ಬದುಕಬೇಕಾಗುತ್ತದೆ’ — ಅರ್ಥಾತ್ ದುಃಖಿಯಾಗಿರಬೇಕಾಗುತ್ತದೆ : ‘ಸರ್ವಂ ಪರವಶಂ ದುಃಖಂ, ಸರ್ವಂ ಆತ್ಮವಶಂ ಸುಖಂ’ (IV—160) ಎಂಬುದು ಮನುವಿನ ಸ್ವಾತಂತ್ರ್ಯಸೂತ್ರ. ‘ಎಂಥವನ ಮನವನ್ನೂ ಓದಬಲ್ಲೆ’ ಎಂಬ ಮನಃಶಾಸ್ತ್ರಜ್ಞನಿನ್ನೂ ಹುಟ್ಟಿಲ್ಲ. ಆದುದರಿಂದ ಆತ್ಮಸಾಕ್ಷಿಯನ್ನು ಆಧರಿಸದೆ ಮಾನವ ವ್ಯವಹಾರಕ್ಕೆ ಗತ್ಯಂತರವಿಲ್ಲ. ಮನಃಸಾಕ್ಷಿಯನ್ನು ಅದುಮಬಹುದು; ಧರ್ಮ - ಆತ್ಮ - ಪರಮಾತ್ಮರ ಸ್ಥಾನಮಾನಗಳೊಂದೇ ಎಂಬ ಶ್ರದ್ಧೆಯಿದ್ದಾಗ ಆತ್ಮಸಾಕ್ಷಿಯನ್ನು ಮನುಷ್ಯನೆಂದೂ ವಂಚಿಸಲಾರ. ಕನಕದಾಸರು ಬಾಳೆಹಣ್ಣನ್ನು ತಿಂದ ಕತೆ ಇದಕ್ಕೆ ನಿದರ್ಶನ.

P. 71. The ultimate foundation of liberty, then, is that it is a condition of spiritual life, p. 73. "a right is itself morally a liberty!"

ದೈವಶ್ರದ್ಧೆಯ ಮಹಿಮೆ, ಅಪ್ರತಿಹತ ಪ್ರಯೋಜನ ಮತ್ತು ಅನಿವಾರ್ಯತೆ ಮನುವಿಗೆ ಗೊತ್ತು (VIII—86). ತರ್ಕವು ಅಪ್ರತಿಷ್ಠ ಎಂಬುದು ತರ್ಕಸಿದ್ಧವಾಗಿರುವಾಗಲಂತೂ ದೈವಶ್ರದ್ಧೆ ಸುಪ್ರತಿಷ್ಠವಾಗುತ್ತದೆ.[೧೫] ಇಲ್ಲವಾದರೆ ಯಾವ ಸರ್ವಾಧಿಕಾರಿಯೂ ಎಲ್ಲ ಸಾಕ್ಷಿಗಾರರಿಂದಲೂ ಸತ್ಯವನ್ನೇ ಹೇಳಿಸಬಲ್ಲೆನೆಂದು ಹೇಳಲಾರನಾದುದರಿಂದ ಸುಳ್ಳುಸಾಕ್ಷಿಗೆ ದೃಢವಾದ, ಅಭೇದ್ಯವಾದ ಪ್ರತಿಬಂಧವೇ ಇಲ್ಲದಂತಾಗುತ್ತದೆ. ಸುಳ್ಳೆಂಬ ತೂತನ್ನು ಭದ್ರವಾಗಿ ಮುಚ್ಚಿದ ಹೊರತು ಬಾಳುವೆ ಎಂಬ ಕುಂಭವು ಸುಖಪೂರ್ಣವಾಗದು; ನಮ್ಮ ನ್ಯಾಯದಾನಪದ್ಧತಿಯೆಂಬುದು ತೂತುಕೊಡದಿಂದ ಗಿಡಕ್ಕೆ ನೀರೆರೆಯ ಹೋದಷ್ಟೇ ಸ್ಥಿತಿಗಿಳಿದೀತು; ಅರ್ಥ-ಕಾಮಾಸಕ್ತಿಗಳನ್ನು ಒಂದು ಗಳಿಗೆಯ ಮಟ್ಟಿಗಾದರೂ ಬಿಡಬಲ್ಲ ಜೀವಿ ಆ ಗಳಿಗೆಯಲ್ಲಾದರೂ ಶುದ್ಧಾತ್ಮ. ಅವನಿಗೆ ಮಾತ್ರ ಧರ್ಮಜ್ಞಾನವಾಗಲು ಸಾಧ್ಯ (II—13).

---

೧೫ " Plato believes that a nation cannot be strong unless it belives in God . . . A living God , . . can stir or frighten the self-seeking individualist into some moderation of his greed, some control of his passion ".

—*Willdurant : The Story of Philosophy*

ನಿಷ್ಪಕ್ಷಪಾತ ಬುದ್ಧಿ ಅನ್ಯನಿಗಿರುವುದಸಾಧ್ಯ. ಮನುಷ್ಯನ ಅರ್ಥ - ಕಾಮ - ಮುಕ್ತ ಶುದ್ಧಸ್ವರೂಪವೇ ಆತ್ಮ. ಅದಕ್ಕೆ ಬೆಲೆಯಿಲ್ಲದಾಗ ಜೀವನಕ್ಕೆ ಎಲ್ಲಿಯ ಬೆಲೆ? ಆತ್ಮವು ಇಂದ್ರಿಯಪ್ರತ್ಯಕ್ಷಕ್ಕೆ ಮೀರಿದ್ದಾದುದರಿಂದ ಅದೂ, ಅದು ಮಾತ್ರ ಕೊನೆಯದಾಗಿ ತಿಳಿದುಕೊಳ್ಳಬಹುದಾದಂಥ ಸೂಕ್ಷ್ಮತೆಯುಳ್ಳ ಧರ್ಮವೂ ಅಲೌಕಿಕ, ಅತೀಂದ್ರಿಯ, ಮನೋವಾಗತೀತ. ಆತ್ಮಸಾಕ್ಷಿಗೆ ಸ್ಥಾನವಿಲ್ಲದ ಸಮಾಜದಲ್ಲಿ ಪ್ರಾಮಾಣಿಕತೆಯೆಂಬುದೊಂದು ಟೊಳ್ಳುಗಟ್ಟಿ. 'ಯೋ ಯತ್ + ಶ್ರದ್ಧಃ ಸ ಏವ ಸಃ — One becomes what he believes — ಮಾನವನು ತಾನು ನಂಬಿದಂತೆಯೇ ಆಗುವನು' ಎಂಬುದು ಮಾನಸಶಾಸ್ತ್ರ-ಸಿದ್ಧವಾದ ಅನುಭವದ ಮಾತು. ತಾನು ಮರ್ತ್ಯನಷ್ಟೇ ಎಂದು ನಂಬಿದವ ಮರ್ತ್ಯನಷ್ಟೇ; ತಾನು ಅಮರನಾದೇನೆಂದು ನಂಬಿದವನು ಅಮರನಾದಾನು!

P. 67 — [illegible]

P. 74 — Self-regarding acts are free in so far as they are [illegible] principle [illegible] (liberty) [illegible] impossibility of [illegible] character [illegible]

+ ವರ್ಣಾಶ್ರಮಧರ್ಮ

ಮನು ಮೊದಲಾದ ಧರ್ಮಶಾಸ್ತ್ರಕಾರರು ಹೇಳಿದ ವರ್ಣ - ಜಾತಿಗಳ ಕಡೆಗೆ ದೃಷ್ಟಿಯನ್ನೀಗ ತಿರುಗಿಸೋಣ. ವರ್ಣ - ಜಾತಿ ಭೇದಗಳ ದೆಸೆಯಿಂದ ಶ್ರಮವಿಭಜನೆಯ ತತ್ತ್ವವು ಅಮಲಿನಲ್ಲಿ ಬಂದು ಹಾನಿಕರವಾದ ಸ್ಪರ್ಧೆಯು ಉದ್ಯಮ - ಉದ್ಯೋಗ ಕ್ಷೇತ್ರಗಳಲ್ಲಿ ತಲೆಹಾಕದಂತಾಯಿತು ಎಂಬ ಸನಾತನ ಸಮರ್ಥನೆಯೊಂದು ಕಡೆ ಇದೆ; ಇನ್ನೊಂದು ಕಡೆ ಅವುಗಳ ದೆಸೆಯಿಂದ 'ಹಾಳರ್ಧ ಹೊಲೆಯರೆಂದು, ಬೀಳರ್ಧ ಹೆಣ್ಣು ಎಂದು — ಹೋಳು ಹೋಳಾಗಿಹುದು, ಆಳು ಬಾಳಾಗಿಹುದು' ಎಂಬಂತಹ ಮೇಲು - ಕೀಳು ಎಂಬ ಭಾವನೆ ಬೆಳೆದ, ಸಾಮಾಜಿಕ ಐಕ್ಯ ಅಳಿದ, ಜಾತಿ ದ್ವೇಷ ನೆತ್ತಿಗೇರಿದ ಅಪದಶೆ ಬಂದಿತೆಂಬ ಖಂಡನೆಯೂ ಇದೆ. ಇವೆರಡರಲ್ಲಿ ಒಂದೊಂದು ಐತಿಹಾಸಿಕ ಅವಧಿಯಲ್ಲಿ ಒಂದೊಂದು ಸತ್ಯ ಎನ್ನಬಹುದು: ಸನಾತನಮತವು ಪ್ರಾಚೀನ ಸತ್ಯ, ನೂತನಮತವು ಅರ್ವಾಚೀನ ಸತ್ಯ -

+ [illegible]

ಅಂದಿಗಂದು, ಇಂದಿಗಿಂದು.[೧೬] ಧರ್ಮಶಾಸ್ತ್ರಗಳ ಇತಿಹಾಸವನ್ನು ಬರೆದ ಮಹಾಮಹೋಪಾಧ್ಯಾಯ ಕಾಣೆಯವರ ಮೂಲಶೋಧ ಇಂತಿದೆ :

---

೧೬ ಅಂದು ಇಂದುಗಳನ್ನು ಕೂಡಿಸಿ ಮಾತನಾಡಿದರೆ ಎರಡೂ ಪಾಕ್ಷಿಕ ಸತ್ಯ ಅಥವಾ ಅರೆನನ್ನಿಗಳೆನಿಸುತ್ತವೆ. ಜೊತೆಗೆ, ಜನ್ಮಾಂತರ - ಕರ್ಮಾಂತರಗಳಲ್ಲಿ ನಂಬಿಗೆಯುಳ್ಳ ಯಾವ ಭಾರತೀಯ ಧರ್ಮದವರೂ ಗುಣ - ಕರ್ಮಗಳು ಜನ್ಮಸಿದ್ಧವಾಗುವುದರಿಂದ ಆನುವಂಶಿಕ ವರ್ಣ - ಜಾತಿಗಳ ಸಿದ್ಧಾಂತವನ್ನು ಖಂಡಿಸಲಾರರು. ಆದರೆ ಅಲ್ಲಿ ಗಾಂಧಿಯವರು ಮಾಡಿಕೊಂಡ ವಿವೇಕವನ್ನು ಮಾಡಿಕೊಳ್ಳಲವಕಾಶವಿದೆ. ವರ್ಣಾಶ್ರಮಧರ್ಮವು, ಅವರ ಪ್ರಕಾರ, ಆರೋಗ್ಯಕರವಾದ ಜನ್ಮಸಿದ್ಧ ಶ್ರಮವಿಭಜನೆ. ಸದ್ಯದ ಜಾತಿಗಳ ಕಲ್ಪನೆಯು ಮೂಲದ ಅಪಲಾಪ. ವರ್ಣಾಶ್ರಮಧರ್ಮವು ಮನುಷ್ಯನು ಭೂಮಿಯಲ್ಲಿ ಹುಟ್ಟಿ ಮಾಡಬೇಕಾದದ್ದೇನನ್ನು ಎಂಬುದನ್ನು ತಿಳಿಸುತ್ತದೆ; ಧನಾರ್ಜನೆಗೂ ಮಿಗಿಲೆನಿಸುವಂತಹ ತನ್ನ ಹುಟ್ಟಿನ ಮೂಲಸತ್ಯವನ್ನು, ಪರಮಾರ್ಥವನ್ನು ತಿಳಿದುಕೊಳ್ಳುವುದು ಮಾನವನ ಪರಮಕರ್ತವ್ಯವೆಂಬುದನ್ನದು ಸಾರುತ್ತದೆ. ಅದೊಂದು ಆಧ್ಯಾತ್ಮಿಕ ಅರ್ಥಶಾಸ್ತ್ರ. ಮನುಷ್ಯನು ತನ ಜೀವನದ ಅತ್ಯುತ್ತಮ ಭಾಗವನ್ನು ತನಗಾಗಿ ಬಳಸಿಕೊಳ್ಳದೆ ದೇವರಿಗಾಗಿಯೂ ಜಗತ್ತಿಗಾಗಿಯೂ ಬಳಸಲದು ಅವಕಾಶವೀಯುತ್ತದೆ. ಜಾತಿಗೂ ಧರ್ಮಕ್ಕೂ ಸಂಬಂಧವಿಲ್ಲ. ಜಾತಿಯು ಆಧ್ಯಾತ್ಮಿಕ ಹಾಗೂ ರಾಷ್ಟ್ರೀಯ ಅಭಿವೃದ್ಧಿಗೆ ಸರ್ವಥಾ ಬಾಧಕ.

ಮೂಲತಃ ' ವರ್ಣ ' ದ ಕಲ್ಪನೆಯು ಕುಲ (Race), ಸಂಸ್ಕೃತಿ (Culture), ಚಾರಿತ್ರ (Character) ಮತ್ತು ವೃತ್ತಿ (Profession) ಗಳನ್ನು ಆಧರಿಸಿದೆ. ಮುಖ್ಯವಾಗಿ ಅದು ಮನುಷ್ಯನ ನೈತಿಕ ಹಾಗೂ ಬೌದ್ಧಿಕ ಯೋಗ್ಯತೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆ. ಅದು ಮಾಡಿದ ಸಮಾಜವರ್ಗೀಕರಣವು ಹೆಚ್ಚುಕಡಮೆ ಸ್ವಾಭಾವಿಕವೆನ್ನಬಹುದು. ಸ್ಮೃತಿಗಳಲ್ಲಿ ಸಹ ವರ್ಣದ ಆದರ್ಶವು ಕರ್ತವ್ಯಗಳಿಗೂ, ಸಮಾಜ - ಸಮುದಾಯಗಳ ಪ್ರಯತ್ನದ ಉನ್ನತತರಮಟ್ಟಕ್ಕೂ ಕೊಟ್ಟಷ್ಟು ಪ್ರಾಶಸ್ತ್ಯವನ್ನು ಆನುವಂಶಿಕ ಅಥವಾ ಜನ್ಮಸಿದ್ಧವೆನಿಸುವ ಹಕ್ಕು ಹಾಗೂ ವಿಶೇಷಾಧಿಕಾರಗಳಿಗೆ ಕೊಟ್ಟಿಲ್ಲ. ಜಾತಿಪದ್ಧತಿಯಾದರೋ ಹುಟ್ಟು ಹಾಗೂ ಆನುವಂಶಿಕತೆಗಳಿಗೆ ಸರ್ವಪ್ರಾಧಾನ್ಯವನ್ನು ಕೊಡುತ್ತದೆ; ಮತ್ತು ಸಂಬಂಧಿಸಿದ ಕರ್ತವ್ಯಗಳನ್ನು ಮಾಡಲು ಪ್ರಯತ್ನಿಸದೆ ಕೇವಲ ಅಂಥ ವಿಶೇಷ ಹಕ್ಕುಗಳಿಗೇ ಅಂಟಿಕೊಳ್ಳುವ ಮನೋಧರ್ಮದತ್ತ ಒಲೆಯುತ್ತದೆ.

ಕುಲದ ಪ್ರಶ್ನೆಯೇ ಅಳಿದಿರುವ ಇಂದಿನ ಭಾರತದಲ್ಲಿ ಗುಣ - ಕರ್ಮಾನುಸಾರ ವರ್ಣವರ್ಗಗಳನ್ನು ಗುರುತಿಸುವ ನೈತಿಕ ಸ್ವಾತಂತ್ರ್ಯವನ್ನು ಯಾರೂ ವಹಿಸಬಹುದು. ಜಾತಿಯನ್ನಂತೂ ನಮ್ಮ ರಾಜ್ಯಸಂವಿಧಾನವು ಮನ್ನಿಸದು. ಆದುದರಿಂದ ಜಾತಿಗಳಿಂದು ಕೇವಲ ಸಾಮಾಜಿಕ ಗುಂಪು

ಗಳಾಗಿವೆ; ಮತಾಚಾರ್ಯರ ಸಂಪ್ರದಾಯಗಳೇ ಅವುಗಳ ವಿಂಗಡಣೆಯ ನಿಯಾಮಕಗಳಾಗಿವೆ. ಅವುಗಳ ಮೂಲಕವೇ ಜಾತೀಯ ದ್ವೇಷವನ್ನು ಎಬ್ಬಿಸಿ, ಗುಂಪುಗಳ ಅವಿಚಾರಬದ್ಧ ಐಕಮತ್ಯವನ್ನು ಕೆಲವೊಮ್ಮೆ ಘಟಿಸಿ, ಆ ಈ ರಾಜಕೀಯರೂ ವ್ಯಾವಹಾರಿಕರೂ ಸ್ವಾರ್ಥವನ್ನು ಪರಹಾನಿಕರವಾಗಿ ಸಾಧಿಸಿಕೊಳ್ಳುವುದನ್ನು ನಾವಿಂದು ಸಿಲ್ಲಿಸಬೇಕಾಗಿದೆ.

ಆಶ್ರಮಧರ್ಮವೆಂಬುದನ್ನು ಭಾರತೀಯರು ಈಗಲೂ ಹೆಮ್ಮೆಯಿಂದ ಕಾಣಬಹುದಾಗಿದೆ.[೧೭] ಮನುಷ್ಯನು ತನ್ನ ಆಯುಷ್ಯವನ್ನು ಸ್ವಾಭಾವಿಕವಾಗಿ ನಾಲ್ಕು ಮಟ್ಟಗಳ ಬೆಳವಣಿಗೆಗೆ ಮೀಸಲಿಟ್ಟುಕೊಳ್ಳುವುದು ಯೋಜನಾಬದ್ಧವಾದ ಜೀವನ. ಬಾಲ್ಯದಲ್ಲಿ ವಿದ್ಯಾರ್ಜನೆ ಮಾಡುವುದು, ಯೌವನದಲ್ಲಿ ಧರ್ಮಕ್ಕೆ ಅವಿರುದ್ಧವಾಗಿ (ಕಾಯದೆಶೀರ್) ಗೃಹಸ್ಥಜೀವನವನ್ನು ನಡೆಸಿಕೊಂಡು ಹೋಗುವುದು (ಅಥವಾ ಗೃಹಿಣಿಯ ಜೀವನವನ್ನು ಸಾಗಿಸುವುದು), ಮುಪ್ಪಿನಲ್ಲಿ (ಅರುವತ್ತನ್ನು ತಲುಪಿದ ಬಳಿಕ) ಮೌನವಾಗಿ ಜೀವನದ ಮೂಲಸತ್ಯದ ಚಿಂತನವನ್ನು ಹಿಡಿಯುವುದು ಮತ್ತು ಅಂತ್ಯದಲ್ಲಿ ಪಕ್ವಬುದ್ಧಿಯ ಯೋಗದಿಂದ ಶಾಂತವಾಗಿ

---

೧೭ ‘The Āśrama system conveys the spirit of the Indian social order better’

—*Lois Renou*

ಮರಣವನ್ನು ಸ್ವೀಕರಿಸುವುದು — ಎಂಬೀ ವ್ಯವಸ್ಥೆ
ನಿತ್ಯನೂತನವಲ್ಲವೇ ? ದ್ವಿಜತ್ವದ ಕಲ್ಪನೆಯೂ ಹಾಗೇ
'ವಿದ್ಯಾವಿಹೀನಃ ಪಶುಃ' ಎಂಬ ತತ್ವವನ್ನು ಎತ್ತಿ ಹಿಡಿ
ಯುತ್ತದೆ. ಈ ದೃಷ್ಟಿಯಿಂದಲೇ ವರ್ಣ - ಆಶ್ರಮಧರ್ಮ
ವನ್ನು ಗಾಂಧಿಯವರು ಮೆಚ್ಚಿದ್ದು.

ಪ್ರಜಾಧರ್ಮ

ಊಟ - ಉಡಿಗೆ, ಆಹಾರ - ವ್ಯವಹಾರಗಳ ಶೌಚವೂ ಅದೇ ಮೇರೆಗೆ ಸಂಸ್ಕಾರದಿಂದ ಸಂಪನ್ನವಾಗಿರಬೇಕೆಂಬುದನ್ನು ಮನು ಒತ್ತಿ ಹೇಳುತ್ತಾನೆ. ಇದರಲ್ಲಿ Health and Sanitation — ಆರೋಗ್ಯ ಮತ್ತು ನೈರ್ಮಲ್ಯಗಳ ವಿಷಯವೂ Social Etiquette — ಸಾಮಾಜಿಕ ಸಭ್ಯವರ್ತನಾ ನಿಯಮಗಳೂ ಅಡಕವಾಗುತ್ತವೆ. ಧರ್ಮಶಾಸ್ತ್ರಗಳು ಮುಖ್ಯವಾಗಿ ಆಚಾರದ ಕೈಪಿಡಿಗಳಾಗಿ ಪರಿವರ್ತನ ಹೊಂದುತ್ತ ಹೋಗಲು ಅವು **ಆಚಾರಕ್ಕೆ ತರಲಾರದ ವಿಚಾರ ಅಪ್ರಯೋಜಕ** ಎಂಬುದನ್ನಾಧರಿಸಿದ್ದೇ ಕಾರಣ. ಆಚಾರವು ಬಹಳ ವ್ಯಾಪಕಾರ್ಥವುಳ್ಳದ್ದು. ಅದರಲ್ಲಿ ಉಪಚಾರ (Formality), ಸತ್ಕಾರ (Respectable treatment), ಸದಾಚಾರ (Good Conduct) ಮುಂತಾದ ಎಲ್ಲವೂ ಅಡಕವಾಗುತ್ತವೆ. ಕಾವ್ಯಬಂಧದಲ್ಲಿ ಔಚಿತ್ಯಕ್ಕೆ ಎಷ್ಟು ಸ್ಥಾನವಿದೆಯೋ ಜೀವನದಲ್ಲಿ ಆಚಾರಕ್ಕೆ ಅಷ್ಟೇ ಸ್ಥಾನವಿದೆ. ಬ್ರಹ್ಮಚಾರಿಯ ನಡತೆ, ಗೃಹಸ್ಥ - ಗೃಹಿಣಿಯರ ನಡತೆ, ವಾನಪ್ರಸ್ಥ ಹಾಗೂ ಸನ್ಯಾಸಿಗಳ ನಡತೆಗಳಲ್ಲದೆ ಕುಟುಂಬದಲ್ಲಿಯ ಸದಸ್ಯರ ಪರಸ್ಪರ ನಡ-

ವಳಿಕೆಗಳೂ ಆಚಾರದಲ್ಲಿ ಅಂತರ್ಗತವಾಗುತ್ತವೆ. ದೇವ - ದ್ವಿಜ - ಗುರು - ಶಿಷ್ಯ - ಹಿರಿಯ - ಕಿರಿಯ - ಸ್ತ್ರೀ-ಪುರುಷ- ಪಿತೃ - ಪುತ್ರ - ಸಭಾಧ್ಯಕ್ಷ - ಸಭಾಸದಸ್ಯರೆಲ್ಲರ ವರ್ತನಾ ಮರ್ಯಾದೆಗಳೆಲ್ಲವೂ ಉಕ್ತವಾದ ಆಚಾರದ ಪ್ರಕರಣವು ' ಸಿವಿಕ್ಸ್ ' ಶಾಸ್ತ್ರಕ್ಕಿಂತಲೂ ವ್ಯಾಪಕವಾದುದು; ಅದೊಂದು ನಾಗರಿಕಧರ್ಮ, ಸತ್ಪ್ರಜಾಧರ್ಮ.

ಆಚಾರದ ಮೂಲವಿರುವುದು ಶುದ್ಧಿಯಲ್ಲಿ, ಪಾವಿತ್ರ್ಯ ದಲ್ಲಿ. ಅದರಿಂದಲೇ ಗಾಂಧಿಯವರು ' Purity is beauty — ಪಾವಿತ್ರ್ಯವೇ ಸೌಂದರ್ಯ, ನೈರ್ಮಲ್ಯವೇ ಸೊಬಗು ' ಎಂದು ಹೇಳಿದ್ದು. ಅಪ್ರಾಮಾಣಿಕತೆ, ಅನಾರ್ಜವಗಳು ಆಂತರಿಕ ಅಶುಚಿಗಳು, ಸಂಮಿಶ್ರಸ್ಥಿತಿ ಗಳು. ಅದರಿಂದಲೇ ಅಲ್ಲೂ ಗಾಂಧಿಯವರು ' Secrecy is sin — ಸದಾ ಸರ್ವನನ್ನೂ ಗುಪ್ತವಾಗಿಟ್ಟುಕೊಳ್ಳುವ ಅತಿವೃತ್ತಿ ಪಾಪಕರ ' ಎಂದದ್ದು. ಯುಕ್ತವು ಶುಚಿ; ಅಯುಕ್ತವಾದ, ಅಸಮರಸವಾದ ಮಿಶ್ರಣವು ಅಶುಚಿ. ಅಶುಚಿಯು ಅರುಚಿ. ಅರುಚಿ ಅರಸಿಕತೆ. ಯುಕ್ತ, ಉಚಿತ, ಸಮಂಜಸ, ಹದ ಎನ್ನುವಂತಹ ವರ್ತನಾ ನಿಯಮ ಗಳನ್ನು ಆಚಾರಧರ್ಮವೆನ್ನಬಹುದು. ಇದು ಸಾಂದ ರ್ಭಿಕ. ದೇಶ - ಕಾಲ - ಕಲಾ - ಲೋಕ - ನ್ಯಾಯ - ಆಗಮಗಳಿಗೆ ವಿರುದ್ಧವಾದ ಯಾವ ಅಂಶವೂ ಕಾವ್ಯದಲ್ಲಿ (ಸಾಹಿತ್ಯದಲ್ಲಿ) ಬರಬಾರದೆಂಬಂತೆ ಜೀವನದಲ್ಲೂ ಅಂಥ

ಅಂಶಗಳು ಜುಗುಪ್ಸಾವಹ; ಮನ್ವಾದಿ ಧರ್ಮಶಾಸ್ತ್ರಕಾರರು ಹೇಳಿದ ಗ್ರಾಹ್ಯ - ತ್ಯಾಜ್ಯ ಆಚಾರಗಳ ಬಹುಭಾಗವನ್ನು ನಾವು ಇಂದಿಗೂ ಭಾರತದ ಶಿಷ್ಟರ ನಡತೆಯಲ್ಲಿ ಕಾಣಬಹು-ದಾಗಿದೆ ಈ ಪಿತ್ರಾರ್ಜಿತ ಸಂಸ್ಕಾರ ಸಂಪನ್ನತೆ ಎಂಬುದು ಭಾರತೀಯ ನಾಗರಿಕತೆಗೆ ಮನು ಕೊಟ್ಟ ದೊಡ್ಡ ಕಾಣಿಕೆ ಯಲ್ಲವೇ ?

ಆಹಾರದ ವಿಷಯವನ್ನೆತ್ತಿಕೊಂಡರೆ, ಮಾಂಸ - ಮದ್ಯ ಗಳನ್ನು ಮನು ನಿಷೇಧಿಸದಿದ್ದರೂ ಅವನ್ನು ಬಿಟ್ಟರೆ ಮಹಾಫಲವುಂಟೆಂದಿದ್ದಾನೆ (V—56). ಬೆಳ್ಳುಳ್ಳಿ, ನೀರುಳ್ಳಿ, ಕೆಂಪು ಬೆಳ್ಳುಳ್ಳಿ, ಅಣಬೆ, ಕೊಳಕಿನಲ್ಲಿ ಬೆಳೆದ ಸಸ್ಯಪದಾರ್ಥಗಳು ಮುಂತಾದವನ್ನು ನಿಷೇಧಿಸಿರುವುದು ಶೌಚವಿಧಾನ (V—5). ಭಗವದ್ಗೀತೆಯಲ್ಲಿ ಹೇಳಿದಂತೆ ಆಯುಷ್ಯ, ಸತ್ವ, ಬಲ, ಆರೋಗ್ಯ, ಸುಖ, ಪ್ರೀತಿಗಳನ್ನು ಬೆಳೆಯಿಸುವಂತಹ ರಸ್ಯ, ಸ್ನಿಗ್ಧ, ಸ್ಥಿರ, ಹೃದ್ಯ ಆಹಾರ ಪದಾರ್ಥಗಳೇ ಮನುವಿನ ಮತದಲ್ಲೂ ಸಾತ್ವಿಕ, ಶ್ರೇಷ್ಠ ಎಂದು ತಿಳಿದುಕೊಂಡರೆ ತಪ್ಪಾಗದು. ಕ್ಷೀಣಬಲರು ನಿಷ್ಕರುಣರಾಗುವಂತೆಯೇ ದಡಿಗರೂ ನಿಷ್ಕರುಣರಾಗುವುದು ಲೋಕಪ್ರಸಿದ್ಧ. ಆದುದರಿಂದ ಈ ಎರಡು ಅತಿದಶೆ-ಗಳಿಗೂ ಒಯ್ಯದಿರುವ ನಿರ್ಮಲ - ಸೌಮ್ಯ ಆಹಾರಗಳ ಸೇವನೆ ಶರೀರಶಾಸ್ತ್ರದ ದೃಷ್ಟಿಯಿಂದಷ್ಟೇ ಅಲ್ಲದೆ, ಅದಕ್ಕೂ ಹೆಚ್ಚಾಗಿ ದೇಹದ ಒಳಗೂ ಹೊರಗೂ ಸಾತ್ವಿಕ ಆವರಣವನ್ನು

ನಿರ್ಮಿಸಿಕೊಡುವ ಕಾರಣದಿಂದ ಮಾನಸಶಾಸ್ತ್ರದ ಹಾಗೂ ನೀತಿಶಾಸ್ತ್ರದ ದೃಷ್ಟಿಗಳಿಂದಲೂ ಗಣ್ಯ. ಮೈಥುನಕ್ಕೆ ಹೇಗೆ ಉತ್ತಮಾಧಮಾದಿ ವಿವಾಹಸಂಸ್ಕಾರಗಳಿರುವುವೋ ಹಾಗೇ ಆಹಾರಕ್ಕೂ ಉತ್ತಮ - ಮಧ್ಯಮ - ಅಧಮ (ಸಾತ್ವಿಕ - ರಾಜಸ - ತಾಮಸ) ಮಟ್ಟಗಳಿರುವುದು ಸಹಜ. ಆಹಾರ - ನಿದ್ರಾ - ಭಯ - ಮೈಥುನಗಳೆಂಬ ಪ್ರಾಣಿಧರ್ಮಗಳ ನಿರ್ವಹಣವು ಅವರವರ ಸಂಸ್ಕಾರದ ಮಟ್ಟಕ್ಕೆ ತಕ್ಕ ಹಾಗೇ ನಡೆಯುತ್ತಿರುವುದು ಇಂದಿಗೂ ಇದೆ. ಉತ್ತಮತ್ವವನ್ನು ಬಯಸುವವರು ಈ ನಾಲ್ಕರ ಅನುಭವ ವನ್ನೂ ಉತ್ತಮ ವಸ್ತುಗಳಿಂದ ಹಾಗೂ ಉತ್ತಮ ರೀತಿ ಯಿಂದ ಪಡೆಯುವ ಯೋಜನೆಯನ್ನು ತಾವೇ ಹಾಕಿ ಕೊಳ್ಳುತ್ತಾರೆ. ಧರ್ಮಭೀರುಗಳೆಂದಾದರೂ ಧನಿಕಭೀರು ಗಳಾದಾರೇ ? ಹಾಗೇ.

ಸರ್ವಾಶ್ರಮಿಗಳಿಗೂ ಆಶ್ರಯದಾತನಾದ ಗೃಹಸ್ಥನ ಆಶ್ರಮಧರ್ಮದಲ್ಲಿ ಅತಿಥಿಸತ್ಕಾರಕ್ಕೆ ಬಹಳ ಮಹತ್ವವಿದೆ. ಈಗಲೂ ವಿದೇಶೀಯರಿಲ್ಲಿ ಬಂದು ಭಾರತೀಯರ ಸತ್ಕಾರ ಶೀಲವನ್ನು ಕೊಂಡಾಡುವಂತಾಗಲು ನಮ್ಮ ಸಂಸ್ಕೃತಿ ನಾಯಕರಾದ ಮನ್ವಾದಿ ಧರ್ಮಜ್ಞರು ಅದನ್ನು ನಮ್ಮಲ್ಲಿ ಅಂದೇ ಬಿತ್ತಿ ಹೋದದ್ದೇ ಕಾರಣ. ತಮಗಾಗಿಯೇ ಅಡಿಗೆ ಮಾಡಿಕೊಳ್ಳುವ ಜನರು ಅನ್ನವನ್ನು ತಿನ್ನರು — ಅವರು ತಿನ್ನುವುದೆಲ್ಲಾ ಪಾಪವನ್ನೇ (III—118) ಎಂದ

ನಾಗರಿಕತೆಯ ಮುಂದೆ ಮನೆಗೆ ಬಂದವರನ್ನು ಹೋಟೇಲಿಗೆ ಅಟ್ಟುವ ನಾಗರಿಕತೆಯನ್ನು ಇಟ್ಟು, ಬೇಕಾದವರು ಬೇಕಾದ ಹಾಗೆ ಬೆಲೆ ಕಟ್ಟಬಹುದು! ಭೋಜನವು ಭೋಗ-ವ್ಯಂಜಕ; ಯಜ್ಞವು ದಾನ - ತ್ಯಾಗಗಳ ವ್ಯಂಜಕ. ಭೋಗ್ಯಗಳನ್ನು ಅರ್ಥಾತ್ ಪಂಚೇಂದ್ರಿಯಗಳ ಹಸಿವನ್ನು ನೀಗಿಸುವ ವಸ್ತುಗಳನ್ನು ಯಜ್ಞಮಾಡಿ, ಸತ್ಪಾತ್ರದಲ್ಲಿ ದಾನಮಾಡಿ, ಉಳಿದುದನ್ನು ಮನುಷ್ಯನು ಭೋಗಿಸುವುದೇ ಭಾರತದ ಹಿಮಾಲಯೋಪಮವಾದ ಆದರ್ಶ.[೧೮] ಗೌರೀ-ಶಂಕರವನ್ನೇರಿದ ತೇನಸಿಂಗರೆಷ್ಟು ವಿರಳವೋ ಈ ಆದರ್ಶವನ್ನು ಸಂಪೂರ್ಣವಾಗಿ ಪಾಲಿಸುವವರೂ ಅಷ್ಟೇ ವಿರಳ. ಕನ್ಯಾದಾನ, ಅನ್ನದಾನ, ಧನ - ಕನಕದಾನ ಇತ್ಯಾದಿ ಅಷ್ಟಭೋಗ್ಯಗಳ ದಾನವನ್ನೂ ಪ್ರಶಂಸಿಸಿರುವುದು ಬ್ರಾಹ್ಮ-ಯಜ್ಞಧರ್ಮದ ದೃಷ್ಟಿಯಿಂದಲೇ — ಅದೇ ಸುಕೃತ,

---

೧೮ ೧) ತೇನ ತ್ಯಕ್ತೇನ ಭುಂಜೀಥಾಃ ॥

—ಈಶಾವಾಸ್ಯ ಉಪನಿಷತ್

೨) ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವ-ಕಿಲ್ಬಿಷೈಃ ।
ಭುಂಜತೇ ತೇ ತ್ವಘಂ ಪಾಪಾ ಯೇ ಪಚಂತ್ಯಾತ್ಮಕಾರಣಾತ್ ॥

—ಭ. ಗೀ.

೩) ಕೇವಲಾಘೋ ಭವತಿ ಕೇವಲಾದೀ ॥

—ವೇದ

ರಸ, ಆತ್ಮ: ಪರಹಿತವೇ ಸ್ವಹಿತ ಎಂಬ ಪರಮಧರ್ಮ;[೧೯] ಸಜ್ಜನರನ್ನು ಸಂತೋಷಗೊಳಿಸುವುವೆಲ್ಲವೂ ಸದ್ಧರ್ಮಕಾರ್ಯ ಗಳಲ್ಲವೇ ?

ತ್ಯಾಗವೇ ಸೇವೆ, ಸೇವೆಯೇ ಧರ್ಮಸಾರ. ತ್ಯಾಗ ಧರ್ಮವು Ethico - spiritual ನೈತಿಕವೂ ಹೌದು, ಆಧ್ಯಾತ್ಮಿಕ ಲಕ್ಷಣವುಳ್ಳದ್ದೂ ಹೌದು. ನೈತಿಕವಾಗಿ ಯೋಗ - ಕ್ಷೇಮ - ವೃದ್ಧಿ - ವ್ಯಯರೂಪದ ಭಾರತೀಯ ಅರ್ಥನೀತಿಯ ಕೊನೆಯ ಹಂತವನ್ನು ಸಂಚಿತ ಆಸ್ತಿಗೆ ಕೊಡಿಸುವ ವಿಧಾನವೆಂದರೆ ತ್ಯಾಗವೇ. ಅದು ಸಮಾಜ ಹಿತವನ್ನು ಕಾಯುವ ನೀತಿ. **Economic Imperialism** ಆರ್ಥಿಕ ಸಾಮ್ರಾಜ್ಯವಾದ ಎಂಬ ಪೆಡಂಭೂತವಾಗಿ ವಿಕಾಸ ಹೊಂದುವ ಅಥವಾ ಧನಿಕ ಸರ್ವಾಧಿಕಾರಿತ್ವ ಇಲ್ಲವೆ ಸಂಕುಚಿತ - ಅಪ್ರಬುದ್ಧ ಬಂಡವಳಶಾಹಿಯಾಗಿ ಜಗಿ- ದೇಳುವ ಪ್ರಭುತ್ವದ ಗರ್ಭಸ್ವರೂಪವು ವ್ಯಕ್ತಿಯ ಕೇವಲ ಸ್ವಾರ್ಥದ ಸಾಧನೆಯಲ್ಲಡಗಿದೆ -- ಗುಂಪೊಂದು ವ್ಯಕ್ತಿ

---

೧೯ (೧) ‘Man becomes all the truer the more he realises himself in others’.

— *R. Tagore in ‘Nationalism’*

(೨) ಸಂತೋಷಂ ಜನಯೇತ್ ಪ್ರಾಜ್ಞಸ್ತದೇವೇಶ್ವರ-
ಪೂಜನಂ.

ಯಂತೆ ವರ್ತಿಸಿದಾಗ, ಒಕ್ಕಟ್ಟಿನಿಂದ ವ್ಯವಹರಿಸಿದಾಗ. ಅದರಿಂದಲೇ ವ್ಯಕ್ತಿಯ ಲಾಭಬಡಿಕತನವು ನಿಸರ್ಗಸಹಜ ವಾಗಿರುವ ಭಾರತ ದೇಶದಲ್ಲಿ " Live and let Live — ಬದುಕು ಮತ್ತು ಬದುಕಗೊಡು " ಎಂಬುದನ್ನು ಹೇಳದೆ ತ್ಯಾಗವನ್ನು ಅರ್ಥಾತ್ " Let live and then Live — ಅನ್ಯರಿಗೆ ಬದುಕಗೊಟ್ಟು ಅನಂತರ ನೀನು ಬದುಕು " ಎಂಬ ವ್ಯಕ್ತಿಧರ್ಮವನ್ನು ಪದೇ ಪದೇ ಒತ್ತಿ ಹೇಳಲಾಗಿದೆ. ಅದು ಸಂಗತ್ಯಾಗವನ್ನು, ಅನಾಸಕ್ತಿಯನ್ನು, ಲೌಕಿಕವಾದ ಅಲ್ಪ ಆದರ್ಶಗಳನ್ನು ಬೆಂಬತ್ತಿ ಹೋಗುವ ಪ್ರವೃತ್ತಿಯ ಪರಿವರ್ತನವನ್ನು ಕ್ರಮೇಣ ಸಂಸ್ಕೃತನಲ್ಲಿ ಬೇರೂರುವಂತೆ ಮಾಡುತ್ತದೆ. ಆದುದರಿಂದ ಭಾರತದ ಆದರ್ಶ ಪುರುಷ ರೆಲ್ಲಾ ತ್ಯಾಗಿಗಳು; ಅವರೇ ಯೋಗಿಗಳು, ಭಗವಂತರು, ಮಹಾತ್ಮರು! ಮಹಾತ್ಮರಲ್ಲದೆ ಮತ್ತಾರು ಆಧ್ಯಾತ್ಮಿಕರು ?

ಶಿಕ್ಷಣಧರ್ಮ

Students' Indiscipline — ವಿದ್ಯಾರ್ಥಿಗಳ ಶಿಸ್ತುಗೇಡಿತನದ ಬಗ್ಗೆ ಮಾರುದ್ದ ಲೇಖನ - ಭಾಷಣಗಳು ಹೊರಬೀಳುತ್ತಿರುವ ಇಂದಿನ ದಿನಮಾನದಲ್ಲಿ ಭಾರತೀಯ ಗುರುಕುಲವು ನೀತಿಗೆ ಕೊಟ್ಟ ಪ್ರಾಧಾನ್ಯವನ್ನು ಲೆಕ್ಕಿಸದೆ, ಸದ್ಯದ ಪದ್ಧತಿಯಲ್ಲೇ ಶಿಕ್ಷಣವನ್ನು ಸಾಗಿಸಿಕೊಂಡು ಹೋಗುತ್ತಿರುವುದು ಎಂಥ ವ್ಯಾಹತಿ (Contradiction), ವಿರುದ್ಧವರ್ತನೆ ಎಂಬುದು ವಿಚಾರವಂತರಿಗೆ ತಿಳಿಯದಿರದು. ಉಚ್ಚಪದಗಳಲ್ಲಿರುವ ಶಿಕ್ಷಣದ ಆಡಳಿತಗಾರರೂ ಶಿಕ್ಷಕರೂ ಮಾತಾಪಿತೃಗಳೂ ಪಾಲಕರೂ ನಿರ್ಮಿಸಿದ ಶಿಕ್ಷಣಾವರಣದ ಪರಿಣಾಮವಾಗಿಯೇ ವಿದ್ಯಾರ್ಥಿಗಳಿಂದು ಬಯಸಿದಷ್ಟು ಜ್ಞಾನಿಗಳೂ ಶೂರರೂ ದಕ್ಷರೂ ಪ್ರಾಮಾಣಿಕರೂ ಸಭ್ಯರೂ ಆಗುತ್ತಿಲ್ಲ. ಧರ್ಮಶಾಸ್ತ್ರಗಳ ಆಳಿಕೆಯಲ್ಲಿದ್ದ ಸರ್ವಾಂಗತಃ ಸುಬದ್ಧವಾದ ಜೀವನಪದ್ಧತಿ ನಮ್ಮದಲ್ಲ; ಜೀವನದ ಎಲ್ಲ ವಿಭಾಗಗಳನ್ನೂ ಏಕಸೂತ್ರಬದ್ಧಗೊಳಿಸುವ ಸಮಾಜವ್ಯವಸ್ಥೆಯನ್ನು (ಕಾಲಾನುಗುಣವಾಗಿ) ಹೊಸದಾಗಿ ರಚಿಸಿಕೊಳ್ಳದೆ ಆವರಣವು ಸುಧಾರಿಸದು.

ಆದರ್ಶರೂಪದಲ್ಲಿ ಬಣ್ಣಿಸಲಾದ ಭಾರತದ ಗುರು-ಶಿಷ್ಯರ ಭಾಂಧವ್ಯವನ್ನು ಹೊಗಳದ ಆಧುನಿಕನಿರಲಾರ. ನಾಗರಿಕತೆಯ ಬುನಾದಿಯಾದ ವಿದ್ಯೆಯನ್ನು ಕುರಿತು ಮನುವೇನೆನ್ನುತ್ತಾನೆ ? " ಅಜ್ಞಾನಿಯೊಬ್ಬ ಶಿಶು " ಎಂದನವ (II—153). ಅಶಿಕ್ಷಿತ - ಅಪಶಿಕ್ಷಿತರಿಂದ ತುಂಬಿದ ಭಾರತಕ್ಕೆ ಈಗಲೂ ಆ ಮಾತು ಖಾರವಾದ ಎಚ್ಚರಿಕೆಯೆನಿಸಿದೆ. ಮನುವಿನ ಕಾಲದಲ್ಲಿ ಉತ್ತಮರಾಗಲು ವೇದಾ-ಭ್ಯಾಸ ಬೇಕಾಗಿತ್ತು. ಆದರಿಂದ ಅವನದನ್ನೇ ಎತ್ತಿ ಹೇಳಿದ. ವೇದವಾಙ್ಮಯವೇ ಅಂದಿನ ಉತ್ತಮ 'ವೇದ' ಅರ್ಥಾತ್ ಜ್ಞಾನ ಎನಿಸಿತ್ತು : ಇಂದಿಗೂ ಉತ್ತಮರಿಗೆ ಉತ್ತಮ ಜ್ಞಾನ ಭಾಂಡಾರವೆನಿಸೀತು — ಉತ್ತಮ ರೀತಿಯಿಂದ ಕಲಿತರೆ. ವಿಷಯದ ನೀತಿಮತ್ತೆಯೊಡನೆ ವಿಷಯ ವಿವರಣದ ವ್ಯವಸ್ಥೆಯಲ್ಲಿಯೂ ನೀತಿಗೆ (ಸಾಮಾನ್ಯ ಧರ್ಮಕ್ಕೆ) ಅತ್ಯಂತ ಹೆಚ್ಚಿನ ಸ್ಥಾನವಿತ್ತೆಂಬುದು ಗಮನಾರ್ಹವಾದ ಅಂಶ.[೨೦]

---

೨೦ (1) 'We see here the great part which moral ideas played in ancient education'. (2) 'It was an all-round education, which brought into play, all the resources of the individual'.

— *L. Renu: The Civilization in Ancient India.*

ಏಕೆಂದರೆ ಮನಃಶಾಸ್ತ್ರರೀತ್ಯಾ ಗಾಂಧಿಯವರೆಂದ ಹಾಗೆ ಸಾಧನವು ಪವಿತ್ರವಾಗಿರದಲ್ಲಿ ಸಾಧ್ಯವು ಸಿದ್ಧಿಗೆ ಮುಟ್ಟುವ ಹಾದಿಯಲ್ಲೇ ಅಪವಿತ್ರವಾಗುತ್ತ ಹೋಗಿ, ಸಿದ್ಧಿಯ ಆಭಾಸವನ್ನಷ್ಟೇ ಮನುಷ್ಯನು ಸಾಧಿಸುವಂತಾಗುತ್ತದೆ. ಆದುದರಿಂದ ವಿದ್ಯಾದಾನದ ಪದ್ಧತಿಯು ಅತ್ಯಂತ ಮಹತ್ವವುಳ್ಳದ್ದು. ಅಲ್ಲಿ ಆದರ್ಶ ಶಿಕ್ಷಕನನ್ನು ಆಯ್ದುಕೊಳ್ಳುವುದೂ ಒಮ್ಮೆ ಹಾಗೆ ಆಯ್ದುಕೊಂಡ ಬಳಿಕ (ಆಚಾರ್ಯದೇವ) ಆಚಾರ್ಯನೇ ದೇವರೆಂದು ತಿಳಿವ ಶ್ರದ್ಧೆ-ನಿಷ್ಠೆಗಳೂ ಆವಶ್ಯಕ. ಈ ಸೂತ್ರವನ್ನು ವ್ಯವಹಾರದಲ್ಲಿ ತರಲು ಈಗ ಯಾರು ಎಲ್ಲಿ ಎಷ್ಟು ಪ್ರಯತ್ನವನ್ನು ಮಾಡುತ್ತಿದ್ದಾರೆ? ಶೀಲಕ್ಕೆ ತಕ್ಕಂತೆ ಜ್ಞಾನವಿದ್ದೀತಲ್ಲದೆ ಜ್ಞಾನಕ್ಕೆ ತಕ್ಕಂತೆ ಶೀಲವಿರಲಾರದು. ಗುರುತರವಾದ ಶೀಲಸಂಪನ್ನತೆಗೆ ತಕ್ಕ ಧನ-ಸ್ಥಾನ-ಮಾನಗಳನ್ನಿತ್ತು ನಿಯಮಿಸಲಾದ ಆದರ್ಶೋನ್ಮುಖರಾದ ತಜ್ಞರನ್ನು ನಾವಿಂದು ಎಷ್ಟು ಉಚ್ಚವಿದ್ಯಾನಿಲಯಗಳಲ್ಲಿ ಯಾವ ಪ್ರಮಾಣದಲ್ಲಿ ಕಂಡೇವು? ಕಾರಣಾಭಾವದಲ್ಲಿ ಕಾರ್ಯಾಭಾವವು ಸಹಜ. ಜೊತೆಗೆ ಶಿಕ್ಷಣದ ಏಕಾಂಗೀನತೆಯೂ ಅಪೂರ್ಣಶಿಕ್ಷಿತತೆಗೆ ದೊಡ್ಡದೊಂದು ಕಾರಣ. ಮೊದಲೇ ಹೇಳಿದಂತೆ ನೀತಿಶಿಕ್ಷಣಕ್ಕಿಂದು ವಿಶಿಷ್ಟ ಸ್ಥಾನವಿಲ್ಲ. ದೈಹಿಕ ಶಿಕ್ಷಣವು ಅವ್ಯವಸ್ಥಿತವೂ ವರದಿ-ಮಾತ್ರ-ಸತ್ಯವೂ ಆಗಿರುವುದು ಅನುಭವಸಿದ್ಧ. ಸಂಸ್ಕಾರಕ್ಕೆ ಸಹಜವಾದ

ವೃತ್ತಿಶಿಕ್ಷಣವನ್ನು ತಕ್ಕ ವಯಸ್ಸಿನಲ್ಲೇ ಸಫಲವಾಗಿ ಸರ್ವರಿಗೂ ಕೊಡುವ ಅನುಕೂಲವನ್ನು ಮೊದಲೇ ಮಾಡಿಲ್ಲ. ಆಹಾರ - ವ್ಯವಹಾರಗಳೆಲ್ಲಾ ಅನಿಯಂತ್ರಿತ — ಗುರುವಿಗೂ ಶಿಷ್ಯನಿಗೂ ಎಲ್ಲರಿಗೂ ! ಮನುವಿನ ಕಾಲದ ಗುರುಕುಲದಲ್ಲಿ ಇವೆಲ್ಲಾ ಇಲ್ಲ. ಅಲ್ಲಿ ಎಲ್ಲವೂ ನಿಯಮಬದ್ಧ — ದಿನದ ೨೪ ತಾಸುಗಳಲ್ಲೂ, ವರ್ಷದ ಮುನ್ನೂರ-ರವತ್ತು ದಿನಗಳಲ್ಲೂ ! ೧೨ ವರ್ಷಗಳ ಕಾಲದಲ್ಲಿ ಬ್ರಹ್ಮ-ಚಾರಿಯು ಸ್ನಾತಕನಾಗಬಲ್ಲ — ಅವನ ಆಚಾರ್ಯ ಶುಶ್ರೂಷೆಯ ಫಲವಾಗಿ.[೨೧] ಕಾಲೇಜಿನಲ್ಲಿಯೂ ಮುಖ್ಯ ವಿಷಯದ ಅಧ್ಯಾಪಕರಲ್ಲೂ ಅಂಥ ಮಹಾಚಾರ್ಯನನ್ನು ಕಾಣಲಾರದ ವಿದ್ಯಾರ್ಥಿಯೆಂತು ಸತ್ಪ್ರಜೆಯಾಗಿ ಭಾರತದಲ್ಲಿ ಕಡೆಯತನಕ ಉಳಿದಾನು ? ಒಳ್ಳಿದರಿಗೆ ಕಳ್ಳರ ಸ್ಥಾನ, ಕಳ್ಳರಿಗೆ ಒಳ್ಳಿದರ ಸ್ಥಾನ — ಎಂಬ ನ್ಯಾಯವು ನೆಲೆನಿಂತ ಕಡೆಗಳಲ್ಲಿ **ಆಚರಣೆಯು ಆಚಾರವುಳ್ಳ ಆಚಾರ್ಯನು** ಬದುಕಿಯಾನೇನು ? ಆಚಾರವಿಲ್ಲದಲ್ಲಿ ಧರ್ಮವಿದ್ದೀತೇನು? ಧರ್ಮವಿಲ್ಲದೆ ಯಾವ ಸಂಸ್ಥೆಗೆ ಜಯ ದೊರಕೀತು ? ಅಧರ್ಮದ ಮಗು ಅಶಿಸ್ತು; ಅನ್ಯಾಯದ ಮಗು ಅರಾಜ

---

೨೧ ಮನುವಿನ ಪ್ರಕಾರ ವೇದತ್ರಯದ ಅಭ್ಯಾಸ ಮುಗಿಯುವುದು ೩೬ ವರ್ಷಗಳ ಗುರುಕುಲವಾಸದಲ್ಲಿ. ಒಂದೊಂದು ವೇದ ಶಾಖಾಭ್ಯಾಸಕ್ಕೆ ೧೨ ವರ್ಷಗಳು. ಏಕವೇದಿಯಾದರೂ ೧೨ ವರ್ಷ ಗುರ್ವಾಜ್ಞಾಪಾಲಕನಾಗಿ ಅಧ್ಯಯನ ಮುಗಿಸಿದವ.

ಕತೆ. ಕೇವಲ ಸುದ್ದಿರೂಪದ ಜ್ಞಾನವು ಭಾರತದಲ್ಲಂತೂ ' ಜ್ಞಾನ ' ವಲ್ಲ. ಮನಸ್ಸು - ಮಾತು - ಕಾರ್ಯಗಳ ಏಕರೂಪತೆ ಕಂಡುಬರದ ಮನುಷ್ಯನಿಲ್ಲಿ ' ಜ್ಞಾನಿ ' ಎನಿಸಿದ್ದಿಲ್ಲ. ತಾಮಸಿಕ ಜ್ಞಾನಿಗಳ ಸಂಖ್ಯೆ ಹೆಚ್ಚಿದಾಗಲೆಲ್ಲಾ ಭಾರತವು ಗ್ಲಾನಿ ಹೊಂದಿತು. ಸಾತ್ವಿಕ ಆಚಾರ್ಯರಿಲ್ಲದಲ್ಲಿ ಸಾತ್ವಿಕ ವಿದ್ಯಾರ್ಥಿಗಳೆಲ್ಲಿದ್ದಾರು ? ಕೇವಲ ಅರ್ಥ - ಕಾಮ - ಕೀರ್ತ್ಯಾಸಕ್ತ ಸ್ಪರ್ಧಾಲುಗಳ ಈರ್ಷ್ಯಾಮಯ ಶಿಕ್ಷಣಜಗತ್ತಿನಲ್ಲಿ ಭಾರತೀಯನಿಗೆಂತು ಸ್ವಧರ್ಮದ ಅರಿವಾದೀತು ?[೨೨] ಸ್ವಧರ್ಮವರಿಯದವನ ಭಾರತೀಯತೆಗೆ ಅರ್ಥವೇನುಳಿಯಿತು ? ಸ್ವಧರ್ಮವನ್ನರಿತವನೇ ಮಾನವಧರ್ಮಜ್ಞ. (Aptitude) ಸ್ವಪ್ರವೃತ್ತಿಜ್ಞನಾಗಿ ತನ್ನ ಕರ್ತವ್ಯವನ್ನು ಕಂಡುಕೊಂಡು ಬಾಳುವ ಭಾರತೀಯತೆ ಇಲ್ಲವಾದುದೇ ಶಿಥಿಲ ಆಡಳಿತ, ಶಿಥಿಲ ಶೀಲ ಅಲ್ಲಿ ಇಲ್ಲಿ ಕಂಡು ಬರಲು ಕಾರಣ.

---

೨೨ ' Let me repeat that India may take what She desires from the West or elsewhere, provided that She is not false to her own **Racial Soul (Swadharma)** '.

—Sir John Woodroffe

ಸ್ತ್ರೀ-ಪುರುಷಧರ್ಮ

ಸಾಮಾಜಿಕ ಹಾಗೂ ಕೌಟುಂಬಿಕ ಸಮುದಾಚಾರಗಳ ಬಗ್ಗೆ ನಾವು ಧರ್ಮಶಾಸ್ತ್ರಗಳನ್ನೇ ತೆರೆದು ಓದಬೇಕಾಗಿಲ್ಲ. ಮನುಹೃದಯಜ್ಞರಾದ ವಾಲ್ಮೀಕಿ - ವ್ಯಾಸ - ಭಾಸ - ಕಾಳಿದಾಸ ಮುಂತಾದ ಋಷಿಗಳೂ, ಕವಿಗಳೂ ನಮ್ಮೆದುರು ಕಡೆದಿಟ್ಟ ಅತ್ಯಂತ ಸುಂದರವಾದ ನಾಯಕ ಕುಟುಂಬಗಳೂ ಮಠಗಳೂ ಆಶ್ರಮಗಳೂ ಪ್ರಜಾ-ರಾಜಸಂಬಂಧದ ಚಿತ್ರಗಳೂ ಯಥೇಷ್ಟವಾಗಿವೆ. ತನ್ನ ಕುಲದಲ್ಲಿ ಶ್ರೇಷ್ಠರೆಂದು ಪ್ರಸಿದ್ಧರಾದವರ ಸತ್‌ಕೀರ್ತಿಯನ್ನು ಹೆಚ್ಚಿಸುವಂತಹ ಸಡತೆ ಪುರುಷನಿಗಿರಬೇಕೆಂದೂ ಪತಿವ್ರತೆಯಾದ ವೀರಪತ್ನಿಯಾಗಿ ವೀರಮಾತೆಯಾಗುವ ಮಹತ್ವಾಕಾಂಕ್ಷೆ ಸ್ತ್ರೀಗಿರಬೇಕೆಂದೂ ಪ್ರಾಚೀನ ಕಾಲದ ಅಭಿಜಾತ ಸಾಹಿತ್ಯವು ಉದ್ದಕ್ಕೂ ಹೇಳುತ್ತ ಬಂದಿದೆ. ಕಾಳಿದಾಸನು ರೂಪಿಸಿದ ನಾಯಿಕೆಯರನ್ನು ಇಂದಿನ ಪಾಶ್ಚಾತ್ಯ ವಿದ್ವಾಂಸರೂ ವಿದುಷಿಯರೂ ಬಾಯಿತುಂಬ ಹೊಗಳುತ್ತಾರೆ. ಸ್ತ್ರೀ - ಪುರುಷರ ಹಕ್ಕು-ಬಾಧ್ಯತೆಗಳ ವಿಷಯದಲ್ಲಿ ಭಿನ್ನಾಭಿಪ್ರಾಯವುಳ್ಳ ಆಧುನಿಕ ವಿದ್ವಜ್ಜನರೂ ಧೀರೋದಾತ್ತ ಪುರುಷರ ಮತ್ತು ಸಾಧ್ವಿಯರ ಚರಿತ್ರೆಗಳನ್ನು ಹೃತ್ಪೂರ್ವಕ

ವಾಗಿ ಮೆಚ್ಚದೆ ಉಳಿದಿಲ್ಲ. ಆ ಮಾದರಿಯ ಪುರುಷರನ್ನೂ ಸ್ತ್ರೀಯರನ್ನೂ ರೂಪಿಸಿದ ಸಾಮಾಜಿಕ - ಆರ್ಥಿಕ - ಧಾರ್ಮಿಕ ಆವರಣವನ್ನು ವಿಮರ್ಶಿಸುವಾಗ ಕಾರ್ಯಗಳ ಔನ್ನತ್ಯವು ಕಾರಣಗಳ ಔನ್ನತ್ಯದ ವ್ಯಂಜಕ ಎಂಬುದನ್ನು ಅನೇಕ ಸಲ ಮರೆತು ಬಿಡುವುದುಂಟು. ಹಾಲಿನ ಉತ್ತ-ಮಿಕೆ ಹಸುವಿನ ಉತ್ತಮಿಕೆಗೆ ಸಾಕ್ಷಿಯಲ್ಲವೇ ?

ನಾಗರಿಕತೆಯ ರೂಪಣದಲ್ಲಿ ಮನುಷ್ಯ ಒಂದು ಅಂಗ, ಪದ್ಧತಿ ಇನ್ನೊಂದು ಅಂಗ (Man and the System). ಈ ಎರಡೂ ಅಂಗಗಳು ಯುಕ್ತವಾಗಿದ್ದರೆ ಉತ್ತಮ ನಾಗರಿಕತೆ ಫಲಿಸುವುದು. ಹಾಗಲ್ಲದೆ ಮನುಷ್ಯ ಯೋಗ್ಯ ನಾದರೂ ಅವನ ಜೀವನಯೋಜನೆಯು ತತ್ವಪದ್ಧತಿಯು ಅಷ್ಟೇನೂ ಚೌಕಶುದ್ಧವಾಗಿಲ್ಲ — ಅವನ Philosophy of Socio-political and Ethico-economic life ಸಾಮಾಜಿಕ – ರಾಜಕೀಯ – ನೈತಿಕ – ಆರ್ಥಿಕ ಜೀವನ ಸಿದ್ಧಾಂತಗಳು ನೆಟ್ಟಗಿಲ್ಲ ಎಂಬುದೊಂದು ವಿಕಲ್ಪ; ಹಾಗ ಲ್ಲದೆ ಮನುಷ್ಯ ಯೋಗ್ಯನಾಗಿಲ್ಲವಾದರೂ ಅವನ ಉಕ್ತ ಜೀವನವಿಧಾನಗಳು ತುಂಬ ಚೌಕಶುದ್ಧ, ನ್ಯಾಯಬದ್ಧ, ಆದರ್ಶ, ಪ್ರಬುದ್ಧ ಎನಿಸಿರುವುದು ಇನ್ನೊಂದು ವಿಕಲ್ಪ (Alternative). ಈ ಎರಡು ತರಹದ ಸನ್ನಿವೇಶಗಳು ಎದುರಾದಾಗ ಇವುಗಳಲ್ಲಿ ಯಾವುದು ಹೆಚ್ಚು ಉತ್ತಮ ಜೀವನಕ್ಕೆ ಪೋಷಕ ? ಎಂಬುವನ್ನು ಪರಾಮರ್ಶಿಸುವ

ಆಗಮ್ಯವು ಇತಿಹಾಸದ ವಿವಿಧ ಯುಗಗಳಲ್ಲಿ ವಿವೇಕಿಗಳಲ್ಲಿ ತಲೆದೋರುತ್ತದೆ. ಇಂತಹ ಸಂದರ್ಭಗಳಲ್ಲಿ ತರ್ಕಶುದ್ಧ-ವೆಂದು ತೋರದ, ಆದರೆ ಮನಃಶಾಸ್ತ್ರ ಶುದ್ಧವಾದ "ಸಾಧನ ಪಾವಿತ್ರ್ಯವು ಸಿದ್ಧಿಯ ಪಾವಿತ್ರ್ಯಕ್ಕೆ ಕಾರಣ" ಎಂಬ ನೀತಿ-ಯನ್ನೇ ಹಿಡಿಯುವುದು ನ್ಯಾಯ. ಏಕೆಂದರೆ ಆಗಮಾನುಸಾರಿ ತರ್ಕಕ್ಕಷ್ಟೇ ವೇದಾಂತದ ಆಚಾರ್ಯರು ಪುರಸ್ಕಾರ ವಿತ್ತಂತೆ ವಿಚಾರ - ವಿಚಾರಾತೀತ ಎಂಬೆರಡೂ ಅಂಶಗಳಿಂದ ಕೂಡಿದ ಜೀವನದ ನ್ಯಾಯನಿರ್ಣಯವನ್ನು ಮಾಡುವಾಗ ಮನಃಶಾಸ್ತ್ರಾನುಗುಣವಾದ ತರ್ಕಕ್ಕಷ್ಟೇ ಮಾನ್ಯತೆ ಕೊಡು-ವುದು ವಸ್ತುಸ್ಥಿತಿಯಿಂದ ನಮ್ಮನ್ನು ಬಹಳ ದೂರ ಒಯ್ಯಲಾರದು. ಬದಲಾವಣೆಯೇ ಸ್ವಭಾವವಾಗಿರುವ ಈ ಜಗತ್ತಿನಲ್ಲಿ ವಸ್ತು - ವ್ಯಕ್ತಿ - ತತ್ವಗಳ ಸ್ವರೂಪವು ಮನುಷ್ಯನ Understanding Capacity ಗ್ರಹಣಶಕ್ತಿ ಬದಲಾಗುತ್ತ ಹೋದಹಾಗೆ ಬದಲಾಗುತ್ತ ಹೋಗುತ್ತದೆ. ಆದುದರಿಂದ ವ್ಯಕ್ತಿಯೋಗ್ಯತೆ - ತತ್ವಯೋಗ್ಯತೆಗಳೆರಡರಲ್ಲಿ (ಅತ್ಯಯ ಪ್ರಸಂಗ ಬಂದಾಗ) ಎರಡನೆಯದಕ್ಕಿಂತ ಮೊದ-ಲನೆಯದಕ್ಕೇ ಯಾವಾಗಲೂ ಜ್ಞಾನಿಲೋಕವು ಮತ ಹಾಕು ತ್ತದೆ. ವ್ಯಕ್ತಿಯ ವ್ಯಕ್ತೀಕರಣಕ್ಕೆ ಜೀವನದ ಮಾನಸ - ಶಾರೀರಿಕ ಕಾರ್ಯಗಳೇ ಮಾಧ್ಯಮಗಳಲ್ಲವೆ ? ಅಲ್ಲದೆ, ವ್ಯಕ್ತಮಾಡುವ ಮಾಧ್ಯಮಕ್ಕಿಂತ ವ್ಯಕ್ತವಾಯ್ತೆಂದು ನಾವು ತಿಳಿದುಕೊಂಬ ವ್ಯಕ್ತಿ - ವಸ್ತು - ಕಲ್ಪನೆ ಯಾವಾ-

ಗಲೂ ವ್ಯಾಪಕತರವಾದುದು. ಆದುದರಿಂದ ನಾಗರಿಕತೆ ಗಿಂತ ಮನುಷ್ಯನು ಹೆಚ್ಚು ಅಂಶಗಳಿಂದ ಕೂಡಿದವನಾಗಿ ರುತ್ತಾನೆ; ಅವನಲ್ಲಿ ನಾಗರಿಕತೆ, ತತ್ವಸಿದ್ಧಾಂತಗಳಲ್ಲಿ ಪೂರ್ಣವಾಗಿ ಪ್ರಕಟವಾಗದ ಎಷ್ಟೋ ಗುಣಗಳು, ಧರ್ಮ ಗಳು, ಸ್ವರೂಪಾಂಶಗಳು ಅಡಗಿರಬಹುದು. ಈ ವಿಚಾರ ದಿಂದಲೇ ಅಲೆಕ್ಸಿಸ್ ಕೆರೆಲ್ಲರು ಮನುಷ್ಯನಿನ್ನೂ ಪೂರ್ಣ ಜ್ಞಾತನಾಗಿಲ್ಲ ಎಂದದ್ದು.

ಮೇಲಿನ ಮಾತುಗಳಿಂದ, ಮನುಹೃದಯವನ್ನು ಅಂದಿನ ಭಾರತೀಯ ಶ್ರೇಷ್ಠರ ಜೀವನವು ವ್ಯಕ್ತಮಾಡಿದಷ್ಟು ಚೆನ್ನಾಗಿ ಇತಿಹಾಸವು ಬರೆದಿಟ್ಟ ಗ್ರಾಂಥಿಕ ನಿಯಮಗಳು ವ್ಯಾಖ್ಯಾನಿಸಲಾರವು; ಆ ನಿಯಮಗಳನ್ನಾದರೂ ಅಂದಿನ ಜನ ಅರ್ಥಮಾಡಿಕೊಂಡಂತೆ ಇಂದಿನ ನಾವು ಅರ್ಥಮಾಡಿ ಕೊಳ್ಳಲಾರೆವು — ಎಂಬ ಅಂಶವೂ ಹೊರಬೀಳುವುದು. ಆದುದರಿಂದ ಅಭಿಜಾತ ವಾಙ್ಮಯವು ಚಿತ್ರಿಸಿಟ್ಟ ಮಹಾ ಪಾತ್ರಗಳ ಮೂಲಕವೇ ನಾವು ಮನುವಿನ ಶ್ಲೋಕಗಳನ್ನು ಹೆಚ್ಚು ಸಮರ್ಪಕವಾಗಿ ಅರ್ಥಮಾಡಿಕೊಳ್ಳಬಲ್ಲೆವು. ರಾಮ, ಧರ್ಮರಾಯ, ಭೀಷ್ಮ, ದಿಲೀಪ, ರಘು, ಅಜ, ದುಷ್ಯಂತ, ಪುರೂರವ, ನಳ ಹಾಗೂ ಸೀತೆ, ದ್ರೌಪದಿ, ಸಾವಿತ್ರಿ, ಅರುಂಧತಿ, ಲೋಪಾಮುದ್ರೆ, ದಮಯಂತಿಯರು ಮಾನವ ನಾಗರಿಕತೆಯ ಉತ್ತಮ ಪ್ರತೀಕಗಳು. ಮನು-ವಿನ ಗ್ರಂಥವು ಕೇವಲ ನಿಕಷ್ಟಚಿ. ಅದನ್ನು ಆಧರಿಸಿ

ಬಾಳಿದ ಮಹಾಪುರುಷರೂ ಮಹಾಸತಿಯರೂ ಇಂದೂ ರಸ್ಯಮಾನ ಪಾತ್ರಗಳಾದರೆ, ಆ ಗ್ರಂಥದಲ್ಲಿ ಇಂದಿಗೂ ಸ್ಫೂರ್ತಿ ಕೊಡತಕ್ಕ ನೈತಿಕ ಅಂಶಗಳಿವೆ ಎಂಬುದು ಶತ ಸಿದ್ಧ. ಉದಾಹರಣೆಗಾಗಿ ಶಕುಂತಲೆಯನ್ನು ತೆಗೆದು ಕೊಂಡರೆ, ಅವಳು ಉತ್ತಮ 'ಸಾಧ್ವಿ' ಎಂದೆನಿಸಿದ್ದಾಳೆ, ಸ್ತ್ರೀತ್ವದ ಪರಮಾದರ್ಶ ಎನಿಸಿದ್ದಾಳೆ. ಮನುವಿನ ಪ್ರಕಾರ (V—165) ಯಾವಳು ಮನಸ್ಸು - ವಾಕ್ - ದೇಹಗಳನ್ನು ಸದಾ ಸಂಯಮದಲ್ಲಿಟ್ಟುಕೊಂಡು (ಅರ್ಥಾತ್ ಅವನ್ನು ಯಾವಾಗಲೂ ಗಂಡನಲ್ಲೇ ನಿಷ್ಠವಾದವನ್ನಾಗಿ ಇಟ್ಟು ಕೊಂಡು), ಗಂಡನನ್ನು ಬಿಟ್ಟು ಅವು ಚಲಿಸದಂತೆ ಅಂಕೆ ಯಲ್ಲಿಟ್ಟುಕೊಂಡು ವರ್ತಿಸುವಳೋ ಅಂಥ ಅನುಕೂಲ ಸ್ತ್ರೀಯೇ ಸಾಧ್ವಿ; ಅಂಥವಳಿಗೆ ಗಂಡನ ಲೋಕ ಅರ್ಥಾತ್ ಗತಿ ದೊರಕುತ್ತದೆ. ಅಂಥ ವೀರಪತ್ನಿ - ವೀರಮಾತೆ ಎನಿಸಿದ ಶಕುಂತಲೆಯ ಮಗ ಭರತನ ದೇಶವಿದು ! ಅವನು **ಸರ್ವದಮನ !**

ಮನುವು ಬಾಲ್ಯವಿವಾಹವನ್ನು ಹೇಳಿದ್ದಾನೆಂಬ ಆರೋಪವಿದೆ. ಅದಕ್ಕೆ ವಿವೇಕಾನಂದರಂಥ ವಿವೇಕಿಗಳು "We marry and then love ನಾವು (ಭಾರತೀಯರು) ಮದುವೆಯಾದ ಬಳಿಕವೇ ಪ್ರೀತಿಸುತ್ತೇವೆ" ಎಂದು ಉತ್ತರಿಸಿದ್ದುಂಟು. ಆದರೆ ಮನುವು ಹೆಣ್ಣಿಗೆ ಮದುವೆಯ ವಯಸ್ಸು ೮ ಅಥವಾ ೧೨ ಎಂದೂ ಗಂಡಿಗೆ ೨೪ ಅಥವಾ

೩೦ ಎಂದೂ ಹೇಳಿದರೆ, ಅದೇ ಯುಗಕ್ಕೆ ಸೇರಿದ ಕೌಟಿಲ್ಯನು ಹೆಣ್ಣಿಗೆ ೧೨ ಆಗಬೇಕು, ಗಂಡಿಗೆ ೧೬ ಆದರೆ ಸಾಕು ಎಂದೂ ಹೇಳಿದ್ದುಂಟು. ಜಾತಕ ಕಥೆಗಳಲ್ಲಿ ಹೆಣ್ಣಿನ ಮದುವೆಯ ವಯಸ್ಸು ಸಾಮಾನ್ಯವಾಗಿ ೧೬ ವರ್ಷ ಎಂದು ಹೇಳಿದೆ. ಈ ಸಂಗತಿಗಳನ್ನು ನೋಡಿದರೆ ಮದುವೆಯು ದೇಶ - ಕಾಲ - ಸಾಮಾಜಿಕ ಪರಿಸ್ಥಿತಿಗಳಂತೆ ಬದಲಾಗುವ ವಯೋನಿಯಮವುಳ್ಳದ್ದೆಂಬುದು ಸ್ಪಷ್ಟವಾಗುತ್ತದೆ. ಪ್ರಾಚೀನ ಕಾಲದಲ್ಲಾದರೂ ವೈದ್ಯ ಹಾಗೂ ಕಾಮ-ಶಾಸ್ತ್ರಗಳು ಜನನಶಾಸ್ತ್ರದ ದೃಷ್ಟಿಯಿಂದ ಪ್ರೌಢರ ವಿವಾಹವನ್ನೇ ಹೇಳಿದ್ದನ್ನು ನೋಡಿದರೆ ಮನುವು ಹೇಳಿದ ಮಾತು ಅಂದಿನ ಒಂದು ಕಡೆಯ ರೂಢಿಯ ಅಭಿಲೇಖವಷ್ಟೇ ಎಂದು ಕೊಳ್ಳಬಹುದು.

ಎರಡನೆಯದಾಗಿ, ಸ್ತ್ರೀಯರನ್ನು ಗೌರವಿಸುವ ದೇಶವೇ ನಾಗರಿಕ ದೇಶ ಎಂಬ ಅಭಿಪ್ರಾಯವನ್ನು ಹೇಳಿದ ಮನುವೇ ಸ್ತ್ರೀಗೆ +ಸ್ವಾತಂತ್ರ್ಯವಿಲ್ಲ ಎಂದು ಹೇಳಿದ್ದು ಹೇಗೆ ? ಎಂಬುದೊಂದು ಕುತೂಹಲಜನಕವಾದ ಪ್ರಶ್ನೆ. ಒಂದು ಮೂರ-ನೆಯ ಅಧ್ಯಾಯದ ಐವತ್ತಾರನೆಯ ಶ್ಲೋಕವಾದರೆ ಇನ್ನೊಂದು ಐದನೆಯ ಅಧ್ಯಾಯದ ೧೪೮ನೆಯ ಶ್ಲೋಕ. ಈ ಸಂದರ್ಭದಲ್ಲಿ ಹಿಂದೆ ಹೇಳಿದ ಸಾಧ್ವಿಯ ಲಕ್ಷಣವನ್ನು ನೆನೆಪುಕೊಳ್ಳಬೇಕು. ಅವಳ ಬಗ್ಗೆ ಹೇಳುವಾಗ ಮನುವು (V—154) ಗಂಡನ ಗುಣಾವಗುಣಗಳನ್ನು ಲೆಕ್ಕಿಸದೆ

mine — the liberty of man is different from the liberty of woman [illegible] because of the difference in their personalities.

ಅವನು ಎಂಥವನಾದರೂ ಅವನನ್ನು ಉಪಚರಿಸುವುದು, ಸತ್ಕರಿಸುವುದು ಸಾಧ್ವಿಯ ಲಕ್ಷಣ; ಒಮ್ಮೆ ಗಂಡನೆಂದು ವರಿಸಿದ (ಆಯ್ದುಕೊಂಡ) ಬಳಿಕ ಅವಳ ಮನೋದೈಹಿಕ ತೃಪ್ತಿಗಳಿರುವುದು ಅವನಿಗೆ ಸ್ತ್ರೀಲಿಂಗವಿಶಿಷ್ಟವಾದ ವ್ಯವಹಾರಗಳಲ್ಲಿ ಸದಾ ಅನುಕೂಲೆಯಾಗಿ ವರ್ತಿಸುವುದರಲ್ಲಿಯೇ — ಎಂಬ ಮನಃಶಾಸ್ತ್ರವನ್ನೂ ಕಾಮಶಾಸ್ತ್ರವನ್ನೂ ಹೇಳಿದ್ದಾನೆ. ಸ್ತ್ರೀಗೆ ಸ್ವಾತಂತ್ರ್ಯವಿಲ್ಲ ಎಂದರೆ ವ್ಯವಹಾರ ಜೀವನದಲ್ಲಿ ಅವಳು ರಕ್ಷಣೀಯಳು ಎಂದಿಷ್ಟೇ ಅರ್ಥ. ಇದು ನಿಸರ್ಗನಿಯಮದಷ್ಟೇ ನಿಯತವಾಗಿದೆ — ಮಾನವರಲ್ಲಿ, ಸಂಸ್ಕೃತರಲ್ಲಿ ವಿವಾಹಧರ್ಮವನ್ನು ಪವಿತ್ರವೆಂದು ಸತ್ಪ್ರಜೋತ್ಪಾದನೆಯ ದೃಷ್ಟಿಯಿಂದ ಒಪ್ಪಿಕೊಂಡವರಲ್ಲಿ. ರಕ್ಷಕತ್ವವನ್ನು ಬಿಟ್ಟ ಗಂಡನ ಹೆಂಡತಿಗೆ ರಕ್ಷಿತಧರ್ಮವಿಲ್ಲವೆಂಬುದನ್ನು ಹೊಸದಾಗಿ ಯಾರೂ ಹೇಳಬೇಕಾಗಿಲ್ಲ; ಆಗಲೂ ಆ ಧರ್ಮವನ್ನವಳು ಇಟ್ಟುಕೊಂಡರೆ ಅಂಥವಳು ಮಹಾಸತಿ ಎನಿಸುತ್ತಾಳೆ. 'ಯತ್ರ ನಾರ್ಯಸ್ತು ಪೂಜ್ಯಂತೇ' ಎಂಬ ಮಾತಿನಲ್ಲೇ ಗೌರವಿಸುವ ಅಥವಾ ಗೌರವಿಸದಿರುವ ಕರ್ತೃತ್ವವು ಪುರುಷಕೋಟಿಯದೆಂಬುದು ವ್ಯಕ್ತವಾಗುತ್ತದೆ. ಪುರುಷನೇ ಸ್ತ್ರೀಗುಣದ **Recognising**+ **Agent** ಮನ್ನಣೆಕಾರ ಎಂಬುದು ಅನುಭವಸಿದ್ಧ. ಆದುದರಿಂದ ಅವನೊಡನಾಟವಿಲ್ಲದಲ್ಲಿ ಅವಳ ಜೀವನದ ಮೌಲ್ಯಕ್ಕೆ ಸಾರ್ಥಕತೆಯಿಲ್ಲ ಎಂಬ ಧ್ವನಿ ಈಗಲೂ ಭಾರ-

+ P. 119 of Hobhouse [illegible] ... helplessness ... [illegible] ... authority to man [illegible]

ತೀಯ ನಾಗರಿಕತೆಯಲ್ಲಿದೆ. ಇತರ ದೇಶಗಳಲ್ಲೂ ಇದನ್ನು ಗುರುತಿಸಬಹುದು. ಕೇವಲ ಸ್ತ್ರೀಯ ಮೆಚ್ಚುಗೆಯಿಂದಲೇ ಜೀವನದ ಸಾರ್ಥಕತೆಯನ್ನು ಕಾಂಬ ಪುರುಷಹೃದಯಗಳು ಬಹಳ ಕಡಮೆ ಎನ್ನಬಹುದು. ಜೊತೆಗೆ ವ್ಯವಹಾರವಿನ್ನೂ ಸ್ತ್ರೀಯ ಅಬಲತೆಗೆ ಪ್ರಮಾಣವಾಗಿಯೇ ಇದೆ. ಆದರೆ ರಕ್ಷಣೀಯತೆಯನ್ನು ದಾಸ್ಯವೆಂದು ಅನುಭವಿಸುವುದಾಗಲಿ ದಾಸ್ಯವೆಂದು ಹೇರುವುದಾಗಲಿ ಮನುಷ್ಯ ಮಾನ್ಯವಾದ ಧರ್ಮವಲ್ಲ. ಹೇಳುವುದಷ್ಟೇ ಶಾಸ್ತ್ರವಾಗಿ, ಹಾಕುವುದು ಗಾಳವನ್ನೇ ಎಂಬ ಇತಿಹಾಸಾವಧಿಯಲ್ಲಿ ಯಾವ ಆದರ್ಶಶಾಸ್ತ್ರವೂ ಯಾರನ್ನೂ ರಕ್ಷಿಸದು. ವ್ಯಕ್ತಿಗಳ ನೈತಿಕ ಅರ್ಹತೆಗೆ ಮೀರಿದ ಪ್ರಮಾಣದಲ್ಲಿ ಸ್ವಾತಂತ್ರ್ಯ ಅವರಿಗೆ ದೊರೆತರೆ ಇತರರ ಜೀವನಸ್ವಾತಂತ್ರ್ಯಕ್ಕೂ ತಮ್ಮ ಸುಖಕ್ಕೂ ಅವರು ಕಂಟಕರಾಗಿಯೇ ತೀರುವುದು ನಿಸರ್ಗಸಹಜ. ಸ್ತ್ರೀ-ಪುರುಷರ ಸಮಾನತೆಯನ್ನು ಸಾರಿದ ಈ ಸ್ವತಂತ್ರಯುಗದಲ್ಲಿಯೂ ಸ್ತ್ರೀಯು ಮಾನಸ - ಶಾರೀರಿಕವಾದ ಸಂಸ್ಕೃತ ಸುಖವನ್ನು* ಹೆಚ್ಚು ಪ್ರಮಾಣದಲ್ಲಿ ಉಣ್ಣುತ್ತಿದ್ದಾಳೆ ಎಂದು ವಿಜ್ಞಾನಶುದ್ಧವಾಗಿ ಹೇಳುವುದು ಕಷ್ಟ. ಏಕೆ ? ಸಾಮಾನ್ಯ ಸ್ಥಿತಿಯನ್ನು ಅಂದಾಜುಮಾಡುವಾಗ ಸರಾಸರಿ ತೆಗೆದುಕೊಳ್ಳಲು ಬಹುಸಂಖ್ಯ ಪ್ರಯೋಜ್ಯರ (Subjects of Experiment) ಸ್ವ-ಪರ ಲಾಭ - ಹಾನಿಗಳನ್ನು ನಾಗರಿಕತೆಯ ಉತ್ಕರ್ಷಾಪಕರ್ಷಗಳ ಮಾನದಿಂದ, ವಸ್ತುನಿಷ್ಠ

ತ್ರಯಸ್ಥ ದೃಷ್ಟಿಯಿಂದ ತೂಗಿನೋಡಬೇಕಾಗುತ್ತದೆ. ಇಂದಿನ ಮತಾಧಿಕಾರದಿಂದ ಸಂಪನ್ನರಾದ ಬಹುಸಂಖ್ಯರ ಪಾಡಿಗೂ ಇಂದಿನ ಹೊಸದಾಗಿ ಪಡೆದ (?) ಸ್ವಾತಂತ್ರ್ಯವುಳ್ಳ ಸ್ತ್ರೀಯರ ಪಾಡಿಗೂ ಸಮಷ್ಟಿದೃಷ್ಟಿಯಿಂದ ತೂಗಿನೋಡಿದರೆ ಬಹಳ ವ್ಯತ್ಯಾಸವು ಕಂಡುಬರುವುದಿಲ್ಲ. ಈ ಮಾತಿನ ಸತ್ಯತೆಯನ್ನು ಬಡ ಭಾರತೀಯ ಸ್ತ್ರೀ-ಪುರುಷರ ಜೀವನ ಪರಿಸ್ಥಿತಿಯಲ್ಲಿ ನಿಂತುಕೊಂಡಾಗ ಮಾತ್ರ ಅರಿತುಕೊಳ್ಳಲು ಶಕ್ಯವಾದೀತು. **ರೊಕ್ಕಸ್ಥರು ಸ್ವಾತಂತ್ರ್ಯವನ್ನು ಅಸಮಾಜವಾದೀಯ ಸಮಾಜದಲ್ಲಿ ಯಾವಾಗಲೂ ಕೊಳ್ಳಬಲ್ಲರು !** Money buys many more things than people generally imagine — ಸಾಮಾನ್ಯರು ಊಹಿಸುವುದಕ್ಕಿಂತ ಹೆಚ್ಚಿನ ವಸ್ತುಗಳನ್ನು ರೊಕ್ಕ ಕೊಳ್ಳುತ್ತದೆ : ಸ್ವಾಚ್ಛಂದ್ಯ ಕೂಡ ಧನಾಧೀನ — ಇಂದಿನ ಅರಾಜಕ ಸಾಮಾಜಿಕ ಜೀವನದಲ್ಲಿ ! ಇಂದಿನ ಸ್ತ್ರೀಗೇನಾದರೂ ಕೆಲಮಟ್ಟಿಗೆ ಕೆಲವೆಡೆ ಉತ್ತಮಸ್ಥಿತಿ ಬಂದಿದ್ದರೆ ಹಿಂದಿನಂತೆಯೇ ಪುರುಷರ ಪ್ರಬುದ್ಧ ವಿಚಾರ - ವ್ಯವಹಾರಗಳಿಂದ; ಕಾಯದೆಯೂ ಅದರ ಫಲವೇ ಆದರೂ ಕಾಯದೆ ಜಾರಿಯಲ್ಲಿ ಬಂದು ಫಲಿಸಿದ್ದಕ್ಕಿಂತ ಹೆಚ್ಚು ಸ್ತ್ರೀಯ ಮೇಲಿನ ದಯೆ ಪುರುಷರ ನಿತ್ಯದ ವ್ಯವಹಾರದಲ್ಲಿ ಕೆಲಸ ಮಾಡುತ್ತಿರುವುದೇ ಹೆಚ್ಚು ಪ್ರಭಾವಿ. ಸಾಮಾಜಿಕ - ಕೌಟುಂಬಿಕ ಜೀವನದ ಇಡಿನೋಟ ಹಿಡಿದು ಸಾಗಿದರೆ

ತೋರುವುದಿದು : ಮದ್ಯನಿರೋಧ, ಮಾಂಸವಿರೋಧ, ವೇಶ್ಯಾವೃತ್ತಿಯ ಪ್ರತಿಬಂಧ ಮತ್ತು ಸ್ತ್ರೀಸ್ವಾತಂತ್ರ್ಯದಾನ ಗಳು ಯಾವಾಗಲೂ ಕಾಯದೆಯಿಂದ ಸಾಧ್ಯವಾಗಲಾರವು. ಈ ವಿಷಯಗಳಲ್ಲಿ ರಾಷ್ಟ್ರೀಯ ಆವಶ್ಯಕತೆ ಉಂಟಾದಾಗ ಲೆಲ್ಲಾ ನೈತಿಕ ಚಳವಳವನ್ನು ಪ್ರಬಲವಾಗಿ ಕೈಕೊಳ್ಳುವು ದೊಂದೇ ಪರಿಣಾಮಕರವಾದ ಉಪಾಯ.

P. 84. Liberty of conscience [illegible] [illegible]:

In general we must [illegible] [illegible] (people) from violating anything that we take to be an essential condition of the [illegible] [illegible] [illegible] [illegible] define [illegible] right [illegible] [illegible] [illegible] methods.

In shaping this system of rights = the system of harmonised [illegible] the requirements of spiritual growth form the highest [illegible] and spiritual liberty [illegible] them.

Self discipline in liberty

85. Proper cultivation of personality in this sense [illegible] that the [illegible] Good [illegible] [illegible] of this principle is the highest and duty of [illegible] [illegible] the individual [illegible] [illegible] [illegible] [illegible]. A [illegible] [illegible] [illegible]

ಶಾಸನಧರ್ಮ

ಮೇಲಿನ ವಿಚಾರವು ಮನುಪಕ್ಷೀಯ. ಆದರೆ ಅದು ಶಾಶ್ವತಧರ್ಮಕ್ಕೆ ವಿರುದ್ಧವಾಗಿ ವ್ಯವಹಾರದಲ್ಲಿ ಬಂದಾಗ ತ್ಯಾಜ್ಯ; ಹಾಗೆ ಬಾರದಿದ್ದಾಗ ಗ್ರಾಹ್ಯ. ಪಂಚಮಹಾಧರ್ಮಗಳ ಭಂಗವೇ ಯುರೋಪಿನಲ್ಲಾದರೂ ಕ್ರಾಂತಿಗಳನ್ನು ಎಬ್ಬಿಸಿದ್ದು. ಅವಕ್ಕೆ ಭಂಗ ಬಂತೋ ಇಲ್ಲವೋ ಎಂಬುದನ್ನು ಜನತೆಯಲ್ಲಿಯ ಯಾವ ನೂರೂ ಮುಕ್ಕಾಲು ಮಂದಿಯೂ ನಿರ್ಣಯಿಸಲಾರರು. ಜನತಾತ್ಮವು ದಂಗೆಯೆದ್ದಾಗ ಐತಿಹಾಸಿಕ ನಿರ್ಣಯವನ್ನು ಎಲ್ಲ ಸಂಗತಿಗಳ ಮೇಲೂ ಅದೇ ಭದ್ರವಾಗಿ ಕೊಟ್ಟುಬಿಡುತ್ತದೆ. ಅಂಥ ಹೊಸ ಸದಾಚಾರದ ನೇತೃ 'ನಾನಾಗಬೇಕು ತಾನಾಗಬೇಕು' ಎಂದು ಜನರು ಪ್ರಯತ್ನಿಸುವುದೂ ಯೋಗ್ಯ, ಅವರ ಭಿನ್ನಮತಗಳ ಪ್ರಕಟನೆಯೂ ಯೋಗ್ಯ. ಆದರೆ ಜನಾಂತರಂಗವನ್ನರಿಯದೆ, ಅದು ಕೆಲವೇ ಪಂಡಿತರು ಯೋಜಿಸಿದ ಸುಧಾರಣೆಯನ್ನು ಸ್ವಾಗತಿಸಿ ಜೀರ್ಣಿಸಿಕೊಂಬಷ್ಟು ಪಕ್ವವಾಗದೆ ಇರುವಾಗ ಮಾಡಿದ ಸಮಾಜ ಸುಧಾರಣೆಯ ಕಾಯದೆ (ಚಳವಳವಲ್ಲ, ಪ್ರಚಾರವಲ್ಲ,

ಉಪದೇಶವಲ್ಲ, ವ್ಯಾವಹಾರಿಕ ಆದರ್ಶ ಉದಾಹರಣೆಗಳಲ್ಲ !) ಅಪ್ರಯೋಜಕ ಮತ್ತು ಕೆಲವೊಮ್ಮೆ ಹಾನಿಕರ ಎಂಬುದನ್ನು ದಿವಂಗತ ಡಾ. ಶ್ಯಾಮಪ್ರಸಾದ ಮುಖರ್ಜಿಯವರಂಥ ಭಾರತದ ಹಿತಚಿಂತಕರು ಸಮರ್ಥವಾಗಿ ಪ್ರತಿಪಾದಿಸಿದ್ದಾರೆ.+ ಅಶಾಶ್ವತಧರ್ಮಗಳನ್ನೆಂದೂ ಯಾರೂ ಶಾಶ್ವತವೆನ್ನಲಾರರು. ವರ್ಣಾಶ್ರಮಾದಿ ಧರ್ಮಗಳನ್ನಲ್ಲದೆ ಜಾತಿಗಳ ಧರ್ಮಗಳನ್ನೂ ಶಾಶ್ವತವೆಂದು ಮನು ಹೇಳಿದಂಥ ಭಾವ ತೋರಿದರೆ, ಅದು ವರ್ಣ - ಜಾತಿಗಳಿಂದ ಭಾರತವು ಗಣ್ಯವಾದ ಯಾವ ತೊಂದರೆಯನ್ನೂ ಅನುಭವಿಸದಿದ್ದ ಕಾಲದಲ್ಲಿ. ಪರಸ್ಪರವಾದ ಯಾವ ವ್ಯವಹಾರವೂ ಇಬ್ಬಣಗಳೂ ಏಕಾರ್ಥಕವಾಗಿ ತಿಳಿದು, ಭಾವಿಸಿ, ಜೀವಿಸುವಾಗಲೇ ವಾಸ್ತವಿಕ ಸತ್ಯವೆನಿಸುತ್ತದೆ. ಶೋಷ್ಯ - ಶೋಷಕ ಅನುಭವಗಳಾದರೂ ಹಾಗೇ; ಪೋಷ್ಯ - ಪೋಷಕ ಅನುಭವಗಳಾದರೂ ಅಷ್ಟೇ.

ಈ ಮಾತುಗಳನ್ನಾಡಲು ಕಾರಣವೇನೆಂದರೆ ಹಿಂದಿನ ಧಾರ್ಮಿಕ ಮತಗಳ ಬಹಿಷ್ಕಾರಕ್ಕಿಂತಲೂ, ಅನ್ಯಾಯವಾದ ಒಂದು ಕಾಯದೆಯು ಉಂಟುಮಾಡುವ ಕ್ರೂರ ಪರಿಸ್ಥಿತಿ ಅವರ್ಣನೀಯ ಎಂಬುದೇ ಆಗಿದೆ. ಅಂಥ ಒಂದು ಕಾಯದೆ ಹತ್ತು ಹೆಜ್ಜೆ ಮುಂದೆ ಹೋದ ನೈತಿಕ ನಾಗರಿಕತೆಯನ್ನು ಒಂದೇ ಏಟಿಗೆ ಹಿಂದೆಳೆದೀತು. ಅದರಲ್ಲೂ ನಿಸರ್ಗ, ಜನಾಂತರಂಗದ ಸಂಸ್ಕಾರ, ಇತಿಹಾಸದ ಪರಿಸ್ಥಿತಿ

ಗಳನ್ನು ವಿವರವಾಗಿ ನೋಡದೆ ಉದ್ದೇಶಸಾಧಕವಾಗುವಂತೆ ವ್ಯವಸ್ಥಿತವಾಗಿ ಅಮಲಿಸಲ್ಲಿ ತರಲಾರದಂಥ, ಸದಾದರ್ಶವೆಂದು ಕೆಲವರು ತಿಳಿದುಕೊಂಡ, ಕಾಯದೆಯನ್ನು ಮಾಡುವುದು ನೀತಿಶೋಷಕ. ಮನುವಿನ ಪ್ರಪಂಚದಲ್ಲಿ ಆಳರಸರಿಗೆ ಕಾಯದೆಮಾಡುವ ಸ್ವಾತಂತ್ರ್ಯವಿದ್ದಿದ್ದಿಲ್ಲವೆಂಬುದನ್ನು ನೆನಪಿಟ್ಟುಕೊಳ್ಳಬೇಕು. ಅಂದರೆ Public Opinion ಜನಾಭಿಪ್ರಾಯವನ್ನು ಗೂಢಚಾರಾದಿಗಳಿಂದ ತಿಳಿದೇ ರಾಜನು ಕೆಲವೊಮ್ಮೆ ಸ್ಮೃತೀತರವಾದ ಅವಶ್ಯಕ ಆಜ್ಞೆಗಳನ್ನು ಹೊರಡಿಸಬಲ್ಲವನಾಗಿದ್ದ. ಇದರರ್ಥವೇನೆಂದರೆ, ಭದ್ರವಾದ ನಾಗರಿಕತೆಯ ತಳಹದಿಯು ನೀತಿಪ್ರಧಾನವಾದ ಶಿಕ್ಷಣವಲ್ಲದೆ ಕಾಯದೆಯಲ್ಲ — ಎಂಬುದೇ ಆಗಿದೆ. **ಕಾಯದೆಯು ನೀತಿಗೆ ಕೇವಲ ಪೂರಕ.**+ ಅದರಿಂದಲೇ ಹಿಂದಿನ ಭಾರತವು "ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುಃ ಸಾಕ್ಷಾನ್ಮಹೇಶ್ವರಃ" ಎಂದು ಹೇಳಿದ್ದು. ಎಲ್ಲ ಪ್ರವಾದಿಗಳೂ ಮಹಾಚಾರ್ಯರು; ಅವರೇ ನಾಗರಿಕತೆಗಳ ವಕ್ತಾರರು.

ಧರ್ಮವನ್ನು ವಿಶಾಲಾರ್ಥದಲ್ಲಿ "Way of Life — ಜೀವನದ ಮಾರ್ಗ" ಎಂದು ಧರ್ಮಜ್ಞರೆಂದುದುಂಟು. ಅದು ಜನತೆಯ ಸಂಸ್ಕೃತಿಯಾದಾಗ ಅದನ್ನು ರಾಜ ಧರನಿಸಿ ಅದನ್ನೇ ಅಮಲಿನಲ್ಲಿ ತರಬೇಕೆಂದು ವಿಜಿಗೀಷುಗಳಾದ (Conquerors) ರಾಜರಿಗೆ ಉಪದೇಶಮಾಡ

ಲಾಗಿದೆ. ಇದನ್ನು ಅರಿತರೆ ಲೋಕಮತಕ್ಕೆ ಹಿಂದಿನ ಕಾಯಿದೆತಜ್ಞರು ಎಷ್ಟು ಮನ್ನಣೆ ಕೊಡುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ಪ್ರಜಾಪ್ರಭುತ್ವದ ಈ ಯುಗದಲ್ಲಿ ಪ್ರಜಾಭಿಪ್ರಾಯ (ಬಹುಮತ) ಯಾವುದೆಂಬುದನ್ನು ತಿಳಿದುಕೊಳ್ಳಲು ಯೋಗ್ಯ ಮಾರ್ಗಗಳಿಂದ ಪ್ರಯತ್ನಿಸದೆ, ಪ್ರತಿಯೊಬ್ಬನೂ ತಾನೇ ಜನಪ್ರತಿನಿಧಿ ಎಂದು ಅಧಿಕಾರ ಸ್ಥಾನದಲ್ಲಿದ್ದಾಗ ಭಾವಿಸಿಕೊಂಡು ಕಾರ್ಯಾಸಕ್ತನಾಗುವ ಅಧರ್ಮ ಅತ್ಯಂತ ಹಾನಿಕರ.

+ The good of each cannot be finally determined without reference to the good of all who stand in mutual relation, i.e., the common good, and conversely in determining the comprehensive harmony the good of each is reckoned alike. In the ultimate sense equality of consideration is an essential element in the common good. Conversely, the conditions of harmony in that many people are functioning in diverse ways entail diversities of behaviour and of treatment and this is the sole and sufficient ground for differentiation.

— The Elements of Social Justice by L. T. Hobhouse — p. 10[illegible]

+ All members of the community, thus simply as members, have an equal share in the common good, while any difference in what is due to them or from them must itself be a difference required by the common good. — x-o —

ಆತ್ಮಧರ್ಮ

ಕೊನೆಯದಾಗಿ, ಅಧ್ಯಾತ್ಮವಿದ್ಯೆಗೆ ಹೆಸರಾದ ಭಾರತೀಯ ನಾಗರಿಕತೆಯನ್ನು ಮನು ಹೇಗೆ ಪ್ರತಿನಿಧಿಸುತ್ತಾನೆ ಎಂಬುದನ್ನು ನೋಡೋಣ — ಮುಕ್ತಾತ್ಮನ ಧರ್ಮವೇನೆಂಬುದನ್ನು ಅವಲೋಕಿಸೋಣ :

ಧರ್ಮ - ಅರ್ಥ - ಕಾಮಗಳ ಸಾಧನೆಯ ರೀತಿ, ಮಾರ್ಗ, ಧರ್ಮ ಎಂಬುದನ್ನು ವಿವರಿಸಿದ್ದಲ್ಲದೆ ಮನುವು ಮಾನವ ಜೀವಿತದ ಪರಮಮೌಲ್ಯ, ಪರಮಾರ್ಥ, ಪರಮಾದರ್ಶ ಎನಿಸಿದ ಮೋಕ್ಷ ಅಥವಾ **Absolute Liberty** — ನಿರಪೇಕ್ಷ ಸ್ವಾತಂತ್ರ್ಯದ ಮನಃಸ್ಥಿತಿ, (ಮನೋಧರ್ಮ, ಮನಃಸಾರ,ಶುದ್ಧಚೇತನಾಸ್ವರೂಪ) ಅಥವಾ ಆತ್ಮಾವಸ್ಥೆಯು ಮನುಷ್ಯನಲ್ಲಿ ಚಾಲಕಶಕ್ತಿಯಾಗಿ ಅವನ ಇಡಿ ನಿಷ್ಠೆಯನ್ನು ಆಕ್ರಮಿಸಿದಾಗ ಅವನ ಒಳ - ಹೊರ ಲಕ್ಷಣಗಳೆಂತಿರುವುವೆಂಬುದನ್ನು ಆರನೆಯ ಅಧ್ಯಾಯದಲ್ಲಿ (**VI—44**) ಹೇಳಿದ್ದಾನೆ. ಅಶನಕ್ಕೆ ಮಣ್ಣಿನ ಭಿಕ್ಷಾಪಾತ್ರೆ ಹಿಡಿದುತಿರುಗುವುದು, ವಸತಿಗೆ ಮರದನೆರಳನ್ನಾಧರಿಸುವುದು, ವಸನಕ್ಕೆ ಹಳೆಯ ಹರಕು ಅರಿವೆಯನ್ನು ಬಳಸುವುದು (ಕೇವಲ

ಕೌಪೀನ ಧಾರಿಯಾಗಿ ತಿರುಗುವುದು) ಮತ್ತು ಯಾರನ್ನೂ ಸಹಾಯಕರೆಂದು ಅವಲಂಬಿಸದಿರುವುದು (ಏಕಾಕಿಯಾಗಿ ಇರುವ ಮನೋಭಾವ ತಾಳಿರುವುದು), ಬೇಕಾದವರು - ಬೇಡವಾದವರು ಎಂಬ ಭೇದಬಿಟ್ಟ ಸಾಮ್ಯವಾದಿಯಾಗಿ ಜೀವಿಸುವುದು – ಮುಕ್ತನ ಲಿಂಗ ಅಥವಾ ಗುರುತು, ಲಕ್ಷಣ ಇಂಥ ಜೀವನಮಾರ್ಗವು ಮುಮುಕ್ಷುವಿಗೂ ಮುಕ್ತನಿಗೂ ಸಾಧಾರಣ. ಭಾರತದಲ್ಲಿ ವೇದಾಂತದ ಆಚಾರ್ಯತ್ರಯದ ಉದಯವಾದ ಕಾಲದಿಂದ ಮುಕ್ತಚೇತನೆಯ ಸ್ವರೂಪವು ಅತ್ಯಂತ ವಿವಾದಾಸ್ಪದವಾಯಿತು. ಆದರೆ ಮುಕ್ತರ ಬಾಹ್ಯ ಲಕ್ಷಣವಂತೂ ಇಂದಿಗೂ ಮೇಲೆ ಹೇಳಿದಂತೆ ಬಹುಸಂಖ್ಯರ ಅಭಿಪ್ರಾಯಕ್ಕೆ ಸಮ್ಮತವಾಗಿಯೇ ಇದೆ. ನೀತಿಶಾಸ್ತ್ರ - ಮಾನಸಶಾಸ್ತ್ರಗಳ ದೃಷ್ಟಿಯಿಂದ ಉಕ್ತ ಮುಕ್ತಜೀವನ ಪದ್ಧತಿ ಅತ್ಯಂತ ಸಾಧುವೆನಿಸುತ್ತದೆ — ಅದೊಂದೇ ಸಾಧುವೆನಿಸುತ್ತದೆ — ಮುಕ್ತರಿಗೆ ಮಾನ್ಯತೆ ಇರುವ ರಾಷ್ಟ್ರ-ದಲ್ಲಿ. ಇದೇ ಯೋಗಜೀವನದ ಬಾಹ್ಯಶೀಲ.

ಶರೀರಿಗಳಿಗೆ ಮರಣವು ಪ್ರಕೃತಿ, ಜೀವಿತವು ವಿಕೃತಿ; ಕ್ಷಣದ ಮಟ್ಟಿಗೆ ಉಸಿರಾಡಿಸುತ್ತ ಬದುಕಲಾದರೆ ಜೀವಿಗೆ ಅಷ್ಟೇ ಲಾಭ — ಎಂದು ಕಾಳಿದಾಸ ಕೂಡ ಆತ್ಯಂತಿಕವಾದ ಮಾನವಜೀವಿತದ ವಿಕಾಸಪದವನ್ನು ಹೇಳಿದ್ದು ಮನ್ವನುಕೂಲವಾಗಿಯೇ. ಪ್ರಪಂಚವನ್ನು ಮೀರಿ ಮತ್ತು ಎತ್ತರಕ್ಕೇರಿ ನೋಡುವ ಮಾನವವ್ಯಕ್ತಿತ್ವದ ದೃಷ್ಟಿಯಲ್ಲಿ

ಮುಕ್ತಸ್ಥಿತಿ ಅತ್ಯಂತ ಆರೋಗ್ಯಕರವಾದ ಪರಮ ಪದವಿ. ಪ್ರಪಂಚಪ್ರಜ್ಞೆಯನ್ನು ಮೀರಿ ನಿಷ್ಪ್ರಪಂಚಪ್ರಜ್ಞೆಗೇರುವುದೂ ಮರ್ತ್ಯಪ್ರಜ್ಞೆಯಿಂದ ಅಮರ್ತ್ಯಪ್ರಜ್ಞೆಗೇರುವುದೂ ಪ್ರತ್ಯೇಕ ಜೀವಪ್ರಜ್ಞೆಯಿಂದ ವಿಶ್ವಾತ್ಮಪ್ರಜ್ಞೆಗೇರುವುದೂ ಸಹಜವಾದ ಮಾನವವಿಕಾಸದ ಕ್ರಮ. ಮುಕ್ತಿಯ ಅಂತಃಸ್ವರೂಪ ವಿದು. ಏಕೆಂದರೆ, ಮನುವಿನ ಪ್ರಕಾರ (XII—118) ತನ್ನಲ್ಲಿ ಎಲ್ಲವನ್ನೂ (ಸತ್ತನ್ನೂ ಅಸತ್ತನ್ನೂ) ನೋಡ-ಬೇಕು, ಸಮಾಧಾನಶೀಲನಾಗಿರಬೇಕು; ಹೀಗೆ ಸರ್ವ ವನ್ನೂ ಆತ್ಮಸ್ಥವನ್ನಾಗಿ ನೋಡಿದರೆ ಮನುಷ್ಯನ ಮನಸ್ಸು (ರಾಗ - ದ್ವೇಷಗಳಿಂದ ಮುಕ್ತವಾಗಿ) ಅಧರ್ಮಾಚರಣೆಗೆ ಒಲೆಯದು; ಸರ್ವಭೂತಗಳಲ್ಲಿ (XII—91) ಆತ್ಮವನ್ನೂ (ತನ್ನನ್ನೂ) ಆತ್ಮದಲ್ಲಿ (ತನ್ನಲ್ಲಿ) ಎಲ್ಲ ಚರಾಚರ ಗಳನ್ನೂ ಸಮದೃಷ್ಟಿಯಿಂದ ಏಕಕಾಲದಲ್ಲಿ ಭಾವಿಸಬಲ್ಲ ಪ್ರಜ್ಞಾವಂತನಾದವ ಸ್ವಾರಾಜ್ಯವನ್ನು (ಸ್ವಸ್ವರೂಪ ಸ್ಥಿತಿ ಯನ್ನು) ಅರ್ಥಾತ್ ಮೋಕ್ಷವನ್ನು ಅನುಭವಿಸುತ್ತಾನೆ. Consciousness — ಚೇತನೆಯ ಅಥವಾ ಪ್ರಜ್ಞೆಯ ಉಕ್ತ ಅವಸ್ಥೆಯ ಲಕ್ಷಣವನ್ನು ಗಮನಿಸಿದರೆ ಮನು ಹೇಳುವ ಮೋಕ್ಷದ ಕಲ್ಪನೆ ಸ್ಪಷ್ಟವಾಗುವುದು. ಅದು ನಿಜವಾದ ಜೀವನ್ಮುಕ್ತಪ್ರಜ್ಞೆ, ವಿಶ್ವಕುಟುಂಬಿತ್ವ ಅಥವಾ ವಿಶ್ವವೇ ನಾನೆಂಬ ಏಕೀಕೃತ ಪ್ರಜ್ಞೆ; ಭಿನ್ನಾತ್ಮನಾಗಿದ್ದೆನೆಂದು ಭಾವಿಸುತ್ತಿದ್ದ ವ್ಯಕ್ತಿಗೆ ಏಕಾತ್ಮಪ್ರತ್ಯಯಸಾರದ ಸಾಕ್ಷಾತ್ಕಾರ..

ವಾಗುವುದು — Absolute universalisation of the individual Consciousness. "ನಾನು ಜಗತ್ಪ್ರಜೆ" ಎಂದುಕೊಂಡು ಹೆಮ್ಮೆಪಡುವ ಇಂದಿನ ನವ್ಯಕಲ್ಪನೆಯನ್ನು ಪ್ರಚಾರಮಾಡುತ್ತ ಬದುಕುವ ಆ ಈ ಸದಾತ್ಮರ ಮಟ್ಟಕ್ಕಿಂತ ಮನುದರ್ಶನ ಎಷ್ಟು ಎತ್ತರ ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಈ ಆತ್ಮಸ್ಥಿತಿಯನ್ನು ಅಗ್ನಿಯೆಂದೂ ಮನುವೆಂದೂ ಪ್ರಜಾಪತಿಯೆಂದೂ ಇಂದ್ರನೆಂದೂ ಪ್ರಾಣವೆಂದೂ ಬ್ರಹ್ಮವೆಂದೂ ಶಾಶ್ವತಪದಾರ್ಥವೆಂದೂ ಬೇರೆಬೇರೆ ಜನರು ಬೇರೆಬೇರೆ ರೀತಿಯಿಂದ ಭಾವಿಸಿ ಉಪಾಸಿಸುತ್ತಾರೆ. (XII—123). ಈ ಪರಮ ಆತ್ಮವೆಂಬುದರಲ್ಲಿ ಎಲ್ಲ ದೇವತೆಗಳೂ ಅಡಕವಾಗುತ್ತಾರೆ, ಅದರಲ್ಲೇ ಎಲ್ಲವೂ ಇವೆ; ಅದೇ ಶರೀರಗಳ ಕರ್ಮಯೋಗವನ್ನು ಹುಟ್ಟಿಸಿದ್ದು (XII—119). ಅದೇ ಪುರುಷ, ಪುರುಷೋತ್ತಮ, ಸರ್ವಪ್ರಶಾಸನ ಕರ್ತೃ, ಅಣುವಿಗಿಂತ ಅಣುತರ (ಸರ್ವಾತ್ಮತ್ವದ ದೆಸೆಯಿಂದ), ತಪ್ತಕಾಂಚನದಂತೆ ದೀಪ್ತಿಯುಳ್ಳದ್ದು, (ಸ್ವಪ್ನಬುದ್ಧಿಗಲ್ಲ) ಸ್ವಪ್ನಪ್ರಜ್ಞೆಗೆ ಸದೃಶವಾದ ಪ್ರಜ್ಞೆಗೆ ಗಮ್ಯ (XII—122) ಎಂದು ಮುಂತಾಗಿ ಸುಲಭ ಸಂಸ್ಕೃತದಲ್ಲಿ ಅವಿವಾದಾಸ್ಪದವಾಗಿ ಮನುವು ಮಾನವನ ಚೇತನೆಯ ವಿಕಾಸದ ಅಂತ್ಯ ಘಟ್ಟವು 'ಸರ್ವೋಽಹಂ' ಅಥವಾ 'ಎಲ್ಲಪ್ಪ' — 'ಎಲ್ಲಾ ಎಂದು ಸರ್ವಭಾವದಿಂದ (ಸರ್ವ ಜ್ಞಾನಸಾಧನಗಳಿಂದಲೂ)

ಭಾವಿಸಿ ಬಾಳುವ ಬೃಹತ್ತಮವಾದ ನಿತ್ಯಸ್ಥಿತಿ — ಎಂದು ಹೇಳಿ ಮಾರ್ಗದರ್ಶನ ಮಾಡಿದ್ದು ನಿತ್ಯನೂತನ.

ಒಮ್ಮೆ ಆಧುನಿಕನು ತಾನು 'ವಿಶ್ವನಾಗರಿಕ' ಎಂದು ಭಾವಿಸಿಕೊಂಡು ಬಾಳುವುದರ ಸಾಧ್ಯತೆಯನ್ನೊಪ್ಪಿ-ಯಾನು. ಆವನಿಗೆ ಮುಕ್ತನ 'ಚರಾಚರೋಽಹಂಭಾವ' ಗಮ್ಯವಾಗದೆ ಹೋಗಬಹುದು. ಆದರೆ ನಾವಿಂದು Understanding — ಗ್ರಹಣ ಮಾಡಿಕೊಳ್ಳುವುದು ಎಂಬುದರ೨೩ ನಿಜವಾದ ಪೂರ್ಣಾರ್ಥವನ್ನು ತಿಳಿ-ದರೆ, 'ಭಾವಿಸಿಕೊಳ್ಳುವುದು' ಎಂಬ ಪದದ ಅರ್ಥ

---

೨೩ " For to understand the culture is to understand the people, and this means an imaginative understanding. Such understanding can never be complete; either it is abstract and the essence escapes—or else it is *lived*; and in so far as it is *lived*, the student will tend to identify himself so completely with the people whom he studies, that he will lose the point of view from which it was worthwhile and possible to study it "–T. S. Eliot in " Notes towards the Definition of Culture ".

ಚೆನ್ನಾಗಿ ಆಗುವದು. ತನ್ನಿಂದ ಭಿನ್ನವಾದ ಅನ್ಯ ವಸ್ತು - ವ್ಯಕ್ತಿ - ಮನಃಸ್ಥಿತಿಗಳನ್ನು ಸರಿಯಾಗಿ ತಿಳಿದುಕೊಳ್ಳುವಲ್ಲಿ ತಾದಾತ್ಮ್ಯಭಾವ ಅಥವಾ ತಲ್ಲೀನಭಾವ ತಾಳುವುದಗತ್ಯ ಎಂಬುದು ಮಾನಸಶಾಸ್ತ್ರಕ್ಕೂ ಅನುಭವಕ್ಕೂ ಸಮ್ಮತ. ಅಂಥ ತಾದಾತ್ಮ್ಯಭಾವವನ್ನು ಒಬ್ಬನು ಒಂದು ಕ್ಷಣ ಅಥವಾ ಗಳಿಗೆ, ತಾಳಬಹುದಾದರೆ ಅದನ್ನು ಅಭ್ಯಾಸ ಬಲದಿಂದ ಸಾಕಷ್ಟು ಸತತಗೊಳಿಸಿಕೊಳ್ಳುವುದು ಅಸಾಧ್ಯ ವೆನ್ನಲು ಬರದು. ನಾವು ಜೀವಿಸಿರುವಾಗ ಅಂಥ ಸಿದ್ಧಿ ಪರಿ ಪೂರ್ಣವಾಗಿ ಆಗದೆ ಹೋದರೂ ಅದರ ಮಾರ್ಗದಲ್ಲಿ ಬಹುದೂರ ಹೋಗುವುದಾದರೂ ಸಾಧ್ಯ. ಮನುಷ್ಯ ಸಮಾಜದ ಹಿತಾಹಿತಗಳೇ ತನ್ನ ಹಿತಾಹಿತಗಳು ಎಂಬ ಭಾವವನ್ನು ಅರಗಿಸಿಕೊಂಡ ಅಧ್ಯಾತ್ಮಸಿದ್ಧನಾದರೂ ಸರ್ವಾರಾಧ್ಯನೆನ್ನಿಸಿಕೊಳ್ಳಲಡ್ಡಿಯಿಲ್ಲ. ಇದು ಮಾನವ ಧರ್ಮದ ಸಾರ, ರಸ, ಸಿದ್ಧಿ. ಈ ದೃಷ್ಟಿಯಿಂದಲೇ ಮನುವು (V—109) ಶರೀರಶುದ್ಧಿ ನೀರಿನಿಂದ, ಮನಃ-ಶುದ್ಧಿಯು ಸತ್ಯದಿಂದ, ಜೀವಾತ್ಮನ ಶುದ್ಧಿಯಾಗುವುದು ವಿದ್ಯೆ - ತಪಸ್ಸುಗಳಿಂದ ಮತ್ತು ಬುದ್ಧಿಯ ಶುದ್ಧಿಯು ಜ್ಞಾನ-ದಿಂದ — ಎಂದು ಹೇಳಿದ್ದು. ಜ್ಞಾನವು ಸತ್ವಸ್ವರೂಪದ್ದು (XII—26). ಸತ್ವವೆಂದರೆ ನಮ್ಮ ಸಾರಭೂತ ಆಂತ-ರಿಕ ಭಾವದಲ್ಲಿ ಗೋಚರವಾಗುವ ಒಂದು ವಿಧದ ಪ್ರೀತಿ ಸಂವೇದನೆ, ಅತಿಶುದ್ಧ ಎನಿಸುವ ಸಂವೇದನೆ, ಅತಿ ಶಾಂತ

ಎನಿಸುವ ಸಂವೇದನೆ (XII—27). ಶುದ್ಧಬುದ್ಧಿಗಷ್ಟೇ ಆತ್ಮವು ಗಮ್ಯ. ಶರೀರವನ್ನು ಕರ್ಮದಲ್ಲಿ ಪ್ರವರ್ತಿಸುವವನು ಕ್ಷೇತ್ರಜ್ಞ; ಆ ಕರ್ಮದ ಫಲವಾಗಿ ಸುಖದುಃಖಗಳನ್ನು ಅನುಭವಿಸುವವನೆಂದರೆ ಜೀವನೆಂಬ ಅಂತರಾತ್ಮ — ಈ ಜೀವಾತ್ಮನು ಎಲ್ಲ ದೇಹವಂತರಿಗೂ ಸಹಜ (XII—12, 13), ನೈಸರ್ಗಿಕ. ಜೀವಾಹಂಕಾರದಿಂದ ಮುಕ್ತವಾದ ಸಾರಭೂತ ಪ್ರಜ್ಞೆಯು ಆತ್ಮ. ಆತ್ಮಜ್ಞಾನದಿಂದ ಅಮೃತತ್ವ, ನಿಶ್ರೇಯಸ, ಮೋಕ್ಷ, ಸಮ್ಯಗ್‌ದರ್ಶನ, ಬ್ರಹ್ಮಭೂಯ, ಪರಮಪದ !

ಸ್ವಲ್ಪ ಓದಿದವರು ಅಜ್ಞರಂತೆ; ಸಮಗ್ರವಾಗಿ ಓದಿದವರು ಅವರಿಗಿಂತ ಉತ್ತಮರೆನ್ನಬಹುದು. ಹಾಗೆ ಸಮಗ್ರವಾಗಿ ಸಾತ್ವಿಕ ಜ್ಞಾನವನ್ನು ಕೊಡುವಂಥ ಗ್ರಂಥವನ್ನು ಓದಿ ಮರೆಯದೆ ಮನಸ್ಸಿನಲ್ಲಿ ಯಾವಾಗಲೂ ಇಟ್ಟುಕೊಳ್ಳಬಲ್ಲವರು ಅವರಿಗೂ ಹೆಚ್ಚಿನವರು. ಅವರಿಗಿಂತಲೂ ಮಿಗಿಲಾದವರೆಂದರೆ — ಅಂಥ ಗ್ರಂಥವನ್ನು ಹಾಗೆ ಓದಿ ನೆನಪಿನಲ್ಲಿಟ್ಟುಕೊಳ್ಳುವುದಷ್ಟೇ ಅಲ್ಲದೆ, ಅದರ ಅರ್ಥವನ್ನೂ ಚೆನ್ನಾಗಿ ತಿಳಿದುಕೊಂಡವರು; ಆ ಮೇಲೆ, ಹಾಗೆ ತಿಳಿದು ಆ ಪ್ರಕಾರವಾಗಿ ನಡೆದುಕೊಳ್ಳುವವರು ಸರ್ವೋತ್ತಮರು (XII—103) ! ಆತ್ಮಜ್ಞಾನವನ್ನು ಪಡೆಯಲು ಹೊರಟವರಲ್ಲಿ ಇಷ್ಟು ವಿಧದ ವಿದ್ವಾಂಸರು ಲೋಕದಲ್ಲಿ ನಮಗೆದುರಾಗುತ್ತಾರೆ. ಸರ್ವಭೂತಗಳನ್ನೂ ಆತ್ಮವೆಂದೇ

(ತಾನೆಂದೇ) ಭಾವಿಸುವ ಮನುಷ್ಯನು ಆತ್ಮಜ್ಞಾನಿ — ಎಂಬ ಮಥಿತಾರ್ಥವನ್ನು ಮನುಸ್ಮೃತಿ ಹೇಳುತ್ತದೆ; ಅರ್ಥಾತ್ **ಸರ್ವೋದಯದಲ್ಲಿ ಆತ್ಮೋದಯವನ್ನು ಕಾಣುವವನೇ ಆತ್ಮಜ್ಞಾನಿ.** ಈ ಅರ್ಥವನ್ನು ಹಿಂದು ಧರ್ಮದ ಸಾರವೆಂದು ಗ್ರಹಿಸಿಯೇ ಗಾಂಧಿಯವರು ತಾವು ಹದಿನಾರಾಣೆ ಹಿಂದುಗಳೆಂದು ಹೇಳಿದ್ದು. ಹಿಂದು ಧರ್ಮವೆಂದರೆ ಮಾನವಧರ್ಮ; ಮಾನವಧರ್ಮವೆಂದರೆ ಸರ್ವೋದಯ (ಬಹುಜನೋದಯವಲ್ಲ) !

ವೈಯಕ್ತಿಕ ಮುಕ್ತಿಯನ್ನು ಸಾಧಿಸಿಕೊಂಬ ಸ್ವಾರ್ಥಿಗಳಾದ ಸನ್ಯಾಸಿಗಳಿಂದ ಸಮಾಜಕ್ಕೇನು ಪ್ರಯೋಜನ ? ಎಂದು ಕೆಲವರು ಕೇಳುವುದುಂಟು. ಕರ್ಮಯೋಗಿಗಳಾಗದೆ ಉಳಿದರೂ ಅಂಥವರ ಅಸ್ತಿತ್ವವೇ " ಸಮದರ್ಶನವು ಸಾಧ್ಯ " ಎಂಬುದನ್ನು ನಿದರ್ಶಿಸಿ, ಜನರಲ್ಲಿ ಆ ದಿಶೆಯಲ್ಲಿ ಪ್ರಯತ್ನಮಾಡುವ ಪ್ರವೃತ್ತಿಯನ್ನು ಹುಟ್ಟಿಸಬಲ್ಲುದು. ಕಾಮ್ಯಕರ್ಮಗಳನ್ನು ಬಿಟ್ಟ ಸನ್ಯಾಸಮನೋಧರ್ಮವನ್ನು ಸಾಧಿಸಿಕೊಂಡ ಆತ್ಮವಂತರೇ ಭಾರತೀಯ ನಾಗರಿಕತೆಯು ಅವನತಿಗಿಳಿದಾಗಲೆಲ್ಲಾ ಅದನ್ನು ಉನ್ನತಿಮುಖಗೊಳಿಸಲು ನಾಯಕತ್ವ ವಹಿಸಿದ ಐತಿಹಾಸಿಕ ಸಂಗತಿಯನ್ನು ಅವಲೋಕಿಸಿದರೆ, ಸನ್ಯಾಸವನ್ನು ಅತ್ಯಂತ ಮೇಲಿನದಾದ ಚತುರ್ಥಾಶ್ರಮ ಎಂದು ಗಣಿಸಿದ್ದರ ಅರ್ಥ ಇನ್ನಷ್ಟು ಸ್ಫುಟವಾಗುವುದು. ಪ್ಲೇಟೋವಿನ ಕಾಲದ

ಗ್ರೀಕರು ಸುಂದರನೂ ಸುಗುಣನೂ ಆದವನನ್ನು ಆದರ್ಶ-ಮಾನವನೆನ್ನುತ್ತಿದ್ದರಂತೆ; ಅರಿಸ್ಟಾಟಲನ ಕಾಲದಲ್ಲಿ ಜಗದ್ಭ-ರಿತ ಭಾವನೆಯುಳ್ಳ ಉದಾತ್ತಮನಸ್ಕನನ್ನು ಪುರುಷೋತ್ತಮ-ನೆನ್ನುತ್ತಿದ್ದರಂತೆ. ಸ್ಟೋಯಿಕ್ ತತ್ವಜ್ಞಾನಿಗಳ ಪ್ರಕಾರ ಆತ್ಮಸಂಯಮವುಳ್ಳ ವಿವೇಕಿಯನ್ನು ಹಾಗೆಂದು ತಿಳಿಯಲಾಗುತ್ತಿತ್ತು. ರಾಜಪುತ್ರನಂತಿರುವ ಮನುಷ್ಯನನ್ನು ಚೀನೀಯರು ಮೆಚ್ಚುವರು. ಶಿಸ್ತಿನ ಯೋಧನು ಜಪಾನೀಯರಿಗೆ ಪ್ರಿಯ; ಹೀಬ್ರೂಗಳಿಗೆ Righteous man — ಶ್ರದ್ಧಾವಂತನು ಸುಪ್ರಿಯ. ರೋಮನ್ನರು ಜಪಾನೀಯರಂತೆಯೇ ಯೋಧಾದರ್ಶವನ್ನು ಎತ್ತಿ ಹಿಡಿದವರು. ಬ್ರಿಟಿಶ-ರಿಗೆ 'ಜೆಂಟ್ಲ್ ಮನ್' ಉತ್ತಮ ಪುರುಷ. ಜರ್ಮನ್ನರಲ್ಲಿ ಸ್ವಾಭಿಮಾನಿಯು ಗಣ್ಯ. ಕ್ರೈಸ್ತರ ದೃಷ್ಟಿಯಲ್ಲಿ Saint — ಸಂತ (ಯೇಸುವಿನ ಸತ್ವದಿಂದ ಆವಿಷ್ಟನಾಗಿ ಜಗತ್ತಿನೊಡನೆ ಸಮರಸವಾಗಿದ್ದೂ ಅದನ್ನು ಬದಲಾಯಿಸಲು ಪ್ರಯತ್ನಿಸುವವನು) ಶ್ರೇಷ್ಠ ಮನುಷ್ಯ. ಮುಸಲ್ಮಾನ-ರಲ್ಲಿ ಸರ್ವಶಕ್ತನಾದ ಅಲ್ಲಾದೇವರಿಗೆ ಆತ್ಮಾರ್ಪಣ ಮಾಡಿಕೊಂಡು ಆತನ ದಾಸನೆಂದು ಭಾವಿಸಿ ಬದುಕು-ವವನು ಅತ್ಯಂತ ಗೌರವಾರ್ಹ. ಭಾರತೀಯರಿಗಾ-ದರೋ ಸಾಧುವೇ ಪರಮಾದರ್ಶಪುರುಷ.[೨೪] ಸಾಧು-

---

೨೪ 'Comparative Religion'
— by *A. C. Bouquet.*

ವೆಂದರೆ [೨೫]ತಪಸ್ವಿಯಾಗಿರುವವನು, ಒಳ್ಳೆಯವನು, ಪವಿತ್ರಾತ್ಮನು. ಅವನೇ ಯೋಗಿ — ಶುದ್ಧಬುದ್ಧಿಯನ್ನು ಆತ್ಮದಲ್ಲಿ ಯೋಜಿಸಿಕೊಂಡವನು. ಭಗವದ್ಗೀತೆ ಹೇಳಿದಂತೆ ಯೋಗಿಯೇ ಸರ್ವೋತ್ತಮ. ಅವನೇ ಮನು ವಿವರಿಸಿದ ಆತ್ಮಜ್ಞಾನಿ, ನಿಜವಾದ ಸನ್ಯಾಸಿ, ವಿಶ್ವಸೇವಾಪರಾಯಣ.

ಭಾರತೀಯರ ಉತ್ತಮಾದರ್ಶದ ಪ್ರಕಾರ ಆತ್ಮಜ್ಞಾನಹೀನರು ಮೂಢರು. ಲೌಕಿಕವಾಗಿಯೂ ಈ ಮಾತು ಅರ್ಥವತ್ತಾಗಿದೆ. ತನ್ನ ಶಕ್ತಿಗಳ ಇತಿಮಿತಿಗಳನ್ನೂ ಅವುಗಳ ಕ್ರಮಿಕ ವಿಕಾಸದ ಯೋಜನೆಯನ್ನೂ ಅರಿತು ಬದುಕುವ ಯೋಚನೆಯಿಲ್ಲದವನು ತನ್ನ ಹಿತಾಹಿತಗಳನ್ನರಿಯದ ಮೂಢ — ಮನುವಿನ ಪ್ರಕಾರ ತಾಮಸಿಕ — ಎಂದಾಗುತ್ತದೆ. ಇದಿ ಮಾನವ ನಾಗರಿಕತೆಗೇ ಭಾರತೀಯ

---

೨೫ ‘The main concern of Indians swayed by these systems of thought was to discover how by *tapas*, or the technique of asceticism they might achieve such a control of the body as to render the spirit free from its interference. This technique became known as *yoga*’.

—*Ditto*

ನಾಗರಿಕತೆ ಹಾಕಿಕೊಟ್ಟ ಅತ್ಯುತ್ತಮ ಪಾಠವಿದಲ್ಲವೇ? ಆತ್ಮವೆಂಬ ಪದಕ್ಕೆ ತಾನು, ಪರಮಾತ್ಮ, ಜೀವತತ್ವ, ಸ್ವರೂಪ, ಶರೀರ, ಮನಸ್ಸು, ಬುದ್ಧಿ ಎಂಬೀ ಯಾವ ಅರ್ಥವನ್ನೇ ಇಟ್ಟುಕೊಂಡರೂ 'ಆತ್ಮಜ್ಞಾನ ಅತ್ಯವಶ್ಯಕ' ಎಂಬ ಉಪದೇಶದ ಸತ್ಯಕ್ಕೆ ಭಂಗ ಬರಲಾರದು. "Charity begins at home — ದಯಾ, ಧರ್ಮ ಇಲ್ಲವೆ ದಾನ ಮನೆಯಲ್ಲೇ ಆರಂಭವಾಗುತ್ತದೆ" ಎಂಬ ಆಂಗ್ಲ ಗಾದೆಯಂತೆ ತನ್ನ ದೈಹಿಕ - ಮಾನಸಿಕ - ಜೈವಿಕ ಅಥವಾ ಆಧ್ಯಾತ್ಮಿಕ ಸ್ವರೂಪಗಳನ್ನು ಚೆನ್ನಾಗಿ ಅರಿತುಕೊಳ್ಳದೆ, ಇತರ ವಸ್ತು - ವ್ಯಕ್ತಿ - ಕಲ್ಪನೆಗಳ ವಿಮರ್ಶೆಗೆ ಹೊರಡುವ ಪ್ರವೃತ್ತಿ ಅಸಾಧುವೆಂಬುದನ್ನು ಭಾರತೀಯ ನಾಗರಿಕತೆ ಘಂಟಾಘೋಷವಾಗಿ ಸಾರುತ್ತದೆ. ಸ್ವಜ್ಞಾನದಿಂದಲೇ ಅನ್ಯಜ್ಞಾನವು ಚೆನ್ನಾಗಿ ಆಗಲು ಸಾಧ್ಯ. ಅಥವಾ ತನಗಿಂತ ಮನುಷ್ಯನೊಬ್ಬನಿಗೆ ಪ್ರಿಯತರವಾದ ಪದಾರ್ಥವಾದರೂ ಯಾವುದು ? ಅಂಥ ಪ್ರಿಯತಮವಾದ ಪದಾರ್ಥದ ಸತ್ಯ ಸ್ವರೂಪವನ್ನು ಅರಿತುಕೊಳ್ಳಹೊರಡುವುದು ಅತ್ಯಂತ ಸ್ವಾಭಾವಿಕವಲ್ಲವೇ? ಪರಮಾರ್ಥತಃ ಈ ಸ್ವ - ಭಾವ, ಸ್ವ - ಅಸ್ತಿತ್ವ ಎಂಥದೆಂಬುದನ್ನು ಅರಿತು, ತದನುಗುಣವಾಗಿ ಬಾಳಲು ತಕ್ಕ ಯೋಜನೆ ಹಾಕಿಕೊಳ್ಳುವುದೇ ಮಾನವಧರ್ಮ, ಮಾನವ ಸಂಸ್ಕೃತಿ, ಮಾನವ ನಾಗರಿಕತೆ.

ಹಿಂದೆ ಹೇಳಿದ ಹನ್ನೆರಡನೆಯ ಅಧ್ಯಾಯದ ನೂರಿ-

ಪ್ರತ್ತಮೂರನೆಯ ಶ್ಲೋಕದಲ್ಲಿ ಕೆಲವರ ಪ್ರಕಾರ 'ಮನು' ಎಂದರೆ ಆತ್ಮವೆಂದಾಗುತ್ತದೆ — ಎಂದು ಹೇಳಲಾಗಿದೆ. ಮನುಷ್ಯಧರ್ಮದ ಅತಿಶ್ರೇಷ್ಠವಾದ ವಿಕಸಿತ ಅವಸ್ಥೆಯನ್ನು ಸಾಧಿಸಿಕೊಂಡ ಸಾಧು, ಯೋಗಿ 'ಮನು' ಎಂಬ ಅರ್ಥ ಹುಟ್ಟುತ್ತದೆ. ಆತ್ಮಧರ್ಮವೇ ಮಾನವಧರ್ಮ, ಮನುಧರ್ಮ; ಆತ್ಮವು ವಿಶ್ವವ್ಯಾಪಕ, ಬ್ರಹ್ಮ -- ಅಗಲದ ಕಲ್ಪನೆಯನ್ನೂ ಮೀರಿನಿಂತ ಅಗಲ! ಅಲ್ಪದಲ್ಲಿ ಆನಂದ-ವಿಲ್ಲ, ಅನಂತದಲ್ಲೇ ಆನಂದ; ಅನಿತ್ಯವಾದವೆಲ್ಲವೂ ಅಲ್ಪ, ನಿತ್ಯವಾದುದೊಂದೇ ಅನಲ್ಪ. ಆದುದರಿಂದ ಮನುಷ್ಯನು ತನ್ನಲ್ಲಿ ಸುಪ್ತವಾಗಿರುವ 'ಮನು' ವನ್ನು ಪ್ರಕಾಶ-ಪಡಿಸಿಕೊಳ್ಳಲು ಮಾನವಧರ್ಮವನ್ನು ಅನುಸರಿಸಬೇಕು — ಎಂಬುದು ಮನುಸ್ಮೃತಿಯ ಕೂಲಂಕಷ ಅವಲೋಕನ-ದಿಂದ ಧ್ವನಿತವಾಗುತ್ತದೆ. 'ಎಲ್ಲವೂ ನಾನೇ' ಎಂಬ ವ್ಯಕ್ತಿ ಅಹಿಂಸೆಯನ್ನಲ್ಲದೆ ಮತ್ತಾವುದನ್ನು ಆಚಾರದಲ್ಲಿ ಇಟ್ಟುಕೊಳ್ಳಬಲ್ಲ? ಸಾಮಾನ್ಯ (ಸಾಧಾರಣ, ಶಾಶ್ವತ) ಧರ್ಮದ ಉಪೋದ್ಘಾತಕ್ಕೆ ಮನುತ್ವದ ಸಾಕ್ಷಾತ್ಕಾರವೇ ಉಪಸಂಹಾರ.

ಇನ್ನು ಯಾವುದು ಅಹಿಂಸೆ, ಯಾವುದು ಹಿಂಸೆ? ಎಂಬುದನ್ನು ತಿಳಿಯಲು ಪ್ರತಿಯೊಂದು ವ್ಯಕ್ತಿಗೂ ಸಹಜ ಶಕ್ತಿಯಿದೆ. "ಮಾಡಿದ ಪಾಪಕ್ಕೆ ಮನವೇ ಸಾಕ್ಷಿ ತೋಡಿದ ಬಾವಿಗೆ ಜಲವೇ ಸಾಕ್ಷಿ" ಎಂಬ ಗಾದೆ

ಅದರಿಂದಲೇ ಹುಟ್ಟಿದೆ. ಇಂದಿನ ಕಾಯದೆ ಕೂಡ ಕಾರ್ಯವೊಂದರ ಉದ್ದೇಶ (ಇರಾದೆ) ಎಂತಿತ್ತೆಂಬುದನ್ನು ಶೋಧಿಸಿಯೇ ನ್ಯಾಯಾನ್ಯಾಯವನ್ನು ನಿರ್ಣಯಿಸುತ್ತದೆ. ಅಹಿಂಸೆಯೇ ಸತ್ಯವಾದುದರಿಂದ ಅದು ತನಗೆ ತಾನೇ ಪ್ರಮಾಣ; ಅದನ್ನರಿಯಲು ಅನ್ಯಪ್ರಮಾಣ ಬೇಕಾಗಿಲ್ಲ. "ಮನಸ್ಯೈವ ಕೃತಂ ಪಾಪಂ ನ ಶರೀರಕೃತಂ ಕೃತಂ — ಮನಸ್ಸಿನಲ್ಲಿ ಮಾಡಿದ್ದೇ ನಿಜವಾದ ಪಾಪವೆನಿಸುತ್ತದಲ್ಲದೆ, ಕೇವಲ (ವಶತಪ್ಪಿ, ಮನಃಪ್ರೇರಣೆಯಿಲ್ಲದೆ, ಮರಿತು) ಶರೀರವು ಪಾಪಕರವೆಂದು ತೋರಬಹುದಾದ ಕಾರ್ಯವನ್ನು ಮಾಡಿದರದು ಪಾಪವಲ್ಲ" ಎನ್ನುವ ಸೂತ್ರವಾದರೂ ಉಕ್ತ ಆತ್ಮಸಾಕ್ಷಿಯ ಪ್ರಮಾಣವನ್ನೇ ಎತ್ತಿಹಿಡಿಯುತ್ತದೆ.

'ಹರನೆಂಬುದೇ ಸತ್ಯ, ಸತ್ಯವೆಂಬುದು ಹರನು' ಎಂದು ರಾಘವಾಂಕ ಸಾರಿದರೆ — ಅಹಿಂಸೆಯೇ ಸತ್ಯ, ಸತ್ಯವೇ ಅಹಿಂಸೆ; ಅಹಿಂಸೆಯೇ (ಬಾಳು) ಅಸ್ತಿತ್ವ, ಅಸ್ತಿತ್ವವೇ ಅಹಿಂಸೆ - ಎಂದು ಮನುವು ಧರ್ಮರಹಸ್ಯವನ್ನು ಧ್ವನಿಸಿದ್ದಾನೆ — ಎಂಬುದಾಗಿ ಬಗೆಯಬಹುದು. ಆದರೆ ಮನುವು ಜೈನ ಯತಿಗಳು (ಮಾತಾಡುವಾಗ ಗಾಳಿಯಲ್ಲಿರುವ ಅಣುಗಳಿಗೆ ಹಿಂಸೆಯಾದೀತೆಂದು ಬಾಯಿಗೆ ಬಟ್ಟೆ ಕಟ್ಟಿಕೊಳ್ಳುತ್ತಾರೆಂದು ಪ್ರತೀತಿ) ಆಚರಿಸುತ್ತೇವೆಂಬ ಅಸಾಧ್ಯವೂ ಅವ್ಯವಹಾರ್ಯವೂ ಆದ ಭೌತಿಕ ಅಹಿಂಸಾ-

ಚಾರವನ್ನು ಪ್ರತಿಪಾದಿಸಿಲ್ಲ. ಶಿಕ್ಷೆಯೆಂದೂ ಹೇಗೆ ಅಪ ರಾಧವೆನಿಸದೋ ಶಿಕ್ಷಣವೇ ಎನಿಸಬೇಕೋ ಹಾಗೆ ಸ್ಥೂಲವಾಗಿ ಹಿಂಸೆಯೆಂದು ತರ್ಕಿಸಬಹುದಾದ ಕಾರ್ಯಗಳ ಉದ್ದೇಶವು ಅಹಿಂಸೆಯೇ ಆದರೆ, ಅಂಥ ಕಾರ್ಯ ಗಳೆಂದೂ ಹಿಂಸಾತ್ಮಕವೆಂದು ಮನು ಹೇಳಲಾರ. ಮನು ವಿನ 'ಅಹಿಂಸೆ' ನ್ಯಾಯಾನ್ಯಾಯ+ (Justice and Injustice) ವಿವೇಕಕ್ಕೆ ಬದ್ಧವಾದದ್ದು; ದೇಶ - ಕಾಲ ಸಂದರ್ಭಗಳ ವ್ಯಾಖ್ಯೆಗೆ ಒಳಪಟ್ಟದ್ದು. ಅಹಿಂಸೆಯ ಈ ವ್ಯಾವಹಾರಿಕ ಮುಖವನ್ನೂ ಅವನು ಗಣನೆಗೆ ತೆಗೆದು ಕೊಂಡುದರಿಂದಲೇ ತನ್ನ ಹೃದಯವು ಆದರ್ಶದೆತ್ತರಕ್ಕೆ ಹಾರುತ್ತಿದ್ದಾಗಲೂ ಸ್ವಕಾಲೀನ ಸಾಮಾಜಿಕ - ಧಾರ್ಮಿ ರೂಢಿ - ಪರಂಪರೆಗಳಿಗೆ ಅವನು ಸ್ಥಾನಕೊಡಲು ಶಕ್ತ ನಾದನು. ಇದೇ ದೃಷ್ಟಿಯಿಂದಲೇ ಇಂದಿನ ಭಾರತವು ಸೈನ ಬಲವನ್ನಿಟ್ಟುಕೊಂಡೇ ತಾನು ವಿದೇಶಗಳೊಡನೆ ಅಹಿಂಸೆ ಯನ್ನು ಪ್ರಧಾನ ಧೋರಣವನ್ನಾಗಿ ಇಟ್ಟುಕೊಂಡು, ಅದರಂ ಆಚರಿಸುತ್ತಿದ್ದೇನೆ — ಎಂದು ಪ್ರಾಮಾಣಿಕವಾಗಿ ಹೇಳಲ ಶಕ್ತವಾಗಿದೆ !

+ Distributive justice is an equal satisfaction of equal needs, subject to the adequate maintenance of useful functions. p. 111
Hobhouse

'The capacity of any individual for the experience of good and evil is measured by his development.' — p 112. - do -

Justice is that apportionment which yield the greatest good; the greatest good lies in the fullest development; and if on the whole a fuller development can be reached by the crippling or extinction of some members of the community, they must be crippled or extinguished. - do -
(under exceptional conditions of transition).

ii

ಮೂಢ ನಂಬಿಕೆಗಳು
ಪ್ರೊ. ಎಲ್. ಆರ್. ಹೆಗಡೆ, ಎಂ. ಎ.

ಸಂಸ್ಕೃತ ಕವಯಿತ್ರಿಯರು
ಪ್ರೊ. ಕೆ. ಟಿ. ಪಾಂಡುರಂಗಿ, ಎಂ. ಎ.

ನಿತ್ಯ ಜೀವನದಲ್ಲಿ ರಸಾಯನಶಾಸ್ತ್ರ
ಪ್ರೊ. ಬಿ. ವಿರೂಪಾಕ್ಷಪ್ಪ, ಎಂ. ಎಸ್ ಸಿ.

ಸಾರ್ವಜನಿಕ ಆಡಳಿತ
ಪ್ರೊ. ಜಿ. ಎಸ್. ಹಾಲಪ್ಪ, ಎಂ. ಎ., (ಕೊಲಂಬಿಯಾ).

ವಿಚಾರವಾದ
ಶ್ರೀ ಗೌರೀಶ ಕಾಯ್ಕಿಣಿ.

ಮಹಾಕವಿ ಮಿಲ್ಟನ್
ಪ್ರೊ. ಜಿ. ಎಸ್. ಆಮೂರ, ಎಂ. ಎ.

ಭಾರತದಲ್ಲಿ ಗ್ರಂಥಾಲಯ ಪ್ರಸಾರ
ಶ್ರೀ ಕೆ. ಎಸ್. ದೇಶಪಾಂಡೆ, ಎಂ. ಎ., ಡಿಪ್. ಲಿಬ್.

ಬೆಲೆ : ಪ್ರತಿ ಒಂದಕ್ಕೆ ೨೫ ನಯೆ ಪೈಸೆ

'What is universally genuinely good is good universally'
P. 106-7. The principle of harmony is based on the principle of universality of moral judgments. It holds that 'acts and institutions are good not because they suit a majority, but because they make the nearest possible approach to a good shared by every single person whom they affect.' '... the good of each cannot be finally determined without reference to the good of all who stand in mutual relations, i.e. the common good and conversely in determining the comprehensive harmony the good of each is reckoned alike. On this ultimate sense equality of consideration is an essential element in the common good. Conversely the conditions of harmony as bet. many people co-operating in diverse ways entail diversities of behaviour and treatment, and this is the sole and sufficient ground of differentiation'. P. 110 — '... the common good is maintained by the services of its members and is endangered or diminished by ill-behaviour. It is in turn bound to maintain all the functions which serve it and restrain actions which harm it, and both requirements give rise to differential treatment.
Assignment of powers must be in proportion to one's responsibility.
P. 117 '... the greater the responsibility put upon the strong & more capable to regard & serve the weaker, the keener is the stimulus to their faculties, & the purer & more humane & more rational the law, the religion, the literature, the art & the philosophy which they evolve.' 'We cannot regard any partial development as good which is necessarily such as to obstruct development on corresponding lines in others. Nor can we regard any collective achievement as good which leads

P.T.O.

necessarily to the depression of individuals ... may be great inequalities of development but to satisfy ethical requirements it must be such that the further the development is pushed in any one person, the more it [tends] on the whole to assist the corresponding development of all others whom it can affect. This is as much as to say that the rational good is one in which all persons share in proportion to the capacity of their social personality. This is the fundamental principle of proportional equality in the Common Good, the governing conception of social justice'.

P. 30. 'Strictly the Common Good is neither the sum of individual 'goods' independently determined nor another kind of good opposed to them. It is the harmony of which each individual good is a constituent.'

ವಿಶ್ವವಿದ್ಯಾಲಯದ ಪ್ರಕಟನೆಗಳ ಮಾರಾಟಗಾರರು :

ಭಾರತ ಬುಕ್ ಡಿಪೊ

ಗಾಂಧಿ ಚೌಕ,

ಧಾರವಾಡ

[illegible]